# ಅಖಿಲ ಭಾರತ ಪತ್ರಿಕೆ

## ಫೆಬ್ರವರಿ 2026



# ಮಹಾಸರಸ್ವತಿ

ಬೆಲೆ : 15/-



ಫೋಟೊ: ಇಮೇಜಿಂಗ್ ಸಾವಿತ್ರಿ

# ಅಖಿಲ ಭಾರತ ಪತ್ರಿಕೆ

**ಫೆಬ್ರವರಿ 2026**

ಸಂಪುಟ: 36 ಸಂಚಿಕೆ: 02


## ಪರಿವಿಡಿ


**ಸಂಪಾದಕರು:**
ಶ್ರೀ ಪುಟ್ಟು ಕುಲಕರ್ಣಿ
ರಾಘವೇಂದ್ರ ಮಠದ ಹಿಂಭಾಗ,
ಗಿಬ್ ಸರ್ಕಲ್, ಹೆರವಟ್ಟ ರಸ್ತೆ,
ಕುಮಟಾ – 581 332.
ಫೋನ್: 9448774920
mayureshwarkp@gmail.com

**ಪರಿಶೀಲನಾ ಸಮಿತಿ:**
ಡಾ॥ ಆರ್.ಕೆ. ಕುಲಕರ್ಣಿ

**ಪ್ರಕಾಶಕರು:**
ಡಾ॥ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು:**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.
ಫೋನ್: 080 – 2244 9882
https://www.sriaurobindo
complex.org/archive.php
http://abp.sirinudi.org

**ಡಿ.ಟಿ.ಪಿ.:**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ:**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.


### ಮಹಾಸರಸ್ವತಿ

ಜಡತ್ವದಲ್ಲಿ ದೈವತ್ವದ ಆವಿಷ್ಕಾರ. – ಶ್ರೀ ಅರವಿಂದರು


**ಸರಸ್ವತಿ–ಮಹಾಸರಸ್ವತಿ** 3
ಅನು: ಪುಟ್ಟು ಕುಲಕರ್ಣಿ

**ಮಹಾಸರಸ್ವತಿ–ಪರಾಮಾತೆಯ ಪರಿದೃಷ್ಟಿ** 7
ಅನು: ನಾಗಜ್ಯೋತಿ ಮಾನ್ವಿ

**ಶ್ರೀಮಾತೆಯವರ ನಾಲ್ಕು ಪದರಗಳ ಕ್ರಿಯೆ** 11
**ನಾಲ್ಕು ಶಕ್ತಿಗಳಲ್ಲಿ ಕಿರಿಯಳು** 13
**ಕರ್ಮಗಳಲ್ಲಿ ನೈಜ ಕುಶಲತೆ** 14
**ಸ್ವಯಂಭಾವದ ಪರಿಪೂರ್ಣತೆಗೆ ಪ್ರಥಮ ಹೆಜ್ಜೆ** 16
ಅನು: ಶ್ರೀಮತಿ ವಿಶಾಲಾಕ್ಷೀ ಸತ್ಯನ್

**ಕರ್ಮದ ನೈಜ–ಪ್ರಾಣ** 21
**ದೇವಬಿಂಬಗಳ ಹಿಂದಿರುವ ವಾಸ್ತವ** 37
ಅನು: ಡಾ॥ ಮಹಾದೇವ ಸಕ್ರಿ

**ಚೇತನದ ಸೋಪಾನ ಮತ್ತು ಮಹಾಸರಸ್ವತಿಯ ಕಾರ್ಯಗಳು** 40
**ಭೌತಿಕ ವಸ್ತುಗಳ ಉಪಯೋಗ** 41
**ಅಂತರಂಗದ ಏನನ್ನೂ ಅಡಚಣೆಗಾಗಿ ಬಿಡಬೇಡಿ** 45
ಅನು: ಶ್ರೀ ಕಿಶೋರಕುಮಾರ ಕಾಸಾರ (ಸಮಷ್ಟಿ)

**ಶ್ರೀ ಅರವಿಂದರ 'ಗೀತಾ ಪ್ರಬಂಧಗಳು'** 47
ಅನು: ಜಾನ್ವಿ

**ಶ್ರೀ ಅರವಿಂದರ 'ಉರ್ವಶಿ'** 53
ಅನು: ಶ್ರೀ ಕಿಶೋರಕುಮಾರ ಕಾಸಾರ (ಸಮಷ್ಟಿ)

**ಮುಖಪುಟದ ಕವನಗಳು** 58

**ವಾರ್ತಾಪತ್ರ** 60


## ಸಂಪಾದಕರ ಟಿಪ್ಪಣಿ

ಸರಸ್ವತಿಯು ಮಹಾಮಾತೆಯ ನಾಲ್ಕು ಸ್ವರೂಪಗಳಲ್ಲಿ ಅತ್ಯಂತ ಕಿರಿಯಳಾಗಿದ್ದಾಳೆ. ಭಾರತೀಯ ಚಿಂತನಾ ಪಥದಲ್ಲಿ 'ಸರಸ್ವತಿ' ಹಂತವು ಭೌತಿಕ ಬದುಕಿನ ಆಯಾಮಗಳನ್ನು ಸೃಷ್ಟಿಸಿ ಅವುಗಳನ್ನು ಪರಿಪೂರ್ಣಗೊಳಿಸುವ ಪಥದಲ್ಲಿ ಮಹಾಶಕ್ತಿ, ಮಹಾಕಾಳಿ, ಮಹಾಲಕ್ಷ್ಮೀ ಮತ್ತು ಮಹಾಸರಸ್ವತಿ ಸ್ವರೂಪವಾಗುವ ಹಂತವನ್ನು ಶ್ರೀ ಅರವಿಂದರು ಮತ್ತು ಶ್ರೀಮಾತೆಯವರು ಅಭಿವ್ಯಕ್ತಿಸುತ್ತಾರೆ. ನಮ್ಮೆಲ್ಲರ "ಲೋಕಮಾತೆ"ಯೇ "ಮಹಾಶಕ್ತಿ"ಯಾಗಿದ್ದಾಳೆ. ನಾಲ್ಕು ದಳಗಳು ಶ್ರೀಮಾತೆಯ ನಾಲ್ಕು ಆಯಾಮಗಳಾಗಿವೆ. ಮತ್ತು ಅವಳ ಹನ್ನೆರಡು – 1) ಪ್ರಾಮಾಣಿಕತೆ 2) ವಿನಮ್ರತೆ 3) ಕೃತಜ್ಞತೆ 4) ತಾಳ್ಮೆ 5) ಅಭೀಪ್ಸೆ 6) ಗ್ರಹಣಶೀಲತೆ 7) ಪ್ರಗತಿ 8) ಧೈರ್ಯ 9) ಒಳ್ಳೆಯತನ 10) ಔದಾರ್ಯ 11) ಸಮಾನತೆ 12) ಶಾಂತಿ – ದಳಗಳು ಅವಳ ಗುಣಧರ್ಮಗಳಾಗಿವೆ. ಈ ಸರ್ವ ಆಯಾಮಗಳೂ ಅನುಷ್ಠಾನಗೊಳ್ಳುವಲ್ಲಿ 'ಸರಸ್ವತಿ'ಯ ಕೃಪೆ ಅತ್ಯಂತ ಪ್ರಮುಖವಾಗಿರುತ್ತದೆ.

ಪ್ರಾರಂಭದ ಹಂತದಲ್ಲಿ 'ಸರಸ್ವತಿ' ಸ್ವರೂಪದಲ್ಲಿರುವ ಶ್ರೀಮಾತೆಯು, ವಿಕಾಸದ ಹಂತದೊಳಗೆ ಭೌತಿಕ ಬದುಕಿನ ಸರ್ವ ಆಯಾಮಗಳನ್ನೂ ನೇರ್ಪುಗೊಳಿಸಿ, ವೈಶ್ವಿಕ ಆಯಾಮದ ಹಂತದಲ್ಲಿ, ಅವಕಾಶದಲ್ಲಿರುವ 'ಋತ–ಚೇತನ'ದ ಜೊತೆಗೆ ಸ್ಪಂದಗೊಳ್ಳುವ ಹಂತದಲ್ಲಿ 'ಮಹಾಸರಸ್ವತಿ'ಯಾಗಿರುತ್ತಾಳೆ. ಅತಿಮಾನಸ ಹಂತದಲ್ಲಿ ಮಾನವನು ಈ "ವೈಶ್ವಿಕ ಆಯಾಮ"ದಲ್ಲಿ ಪೂರ್ಣತ್ವವನ್ನು ಅನುಭಾವಿಸುವಂತೆ ಕೃಪೆದೋರುವ ಶಕ್ತಿಯೇ 'ಮಹಾಸರಸ್ವತಿ' ಆಗಿದ್ದಾಳೆ. ಈ ಸಂಚಿಕೆಯಲ್ಲಿ ಸರಸ್ವತಿ ಹಾಗು ಮಹಾಸರಸ್ವತಿಯ ಸ್ವರೂಪದ ಕುರಿತು ಚಿಂತನಗಳಿವೆ. (ಪಿಪಿಕೆ)

# ಸರಸ್ವತಿ–ಮಹಾಸರಸ್ವತಿ

**– ಅನು: ಪುಟ್ಟು ಕುಲಕರ್ಣಿ**



**ಸರಸ್ವತಿ ಯಂತ್ರ**

## ಮಹಾಸರಸ್ವತಿ

ಶ್ರೀಮಾತೆಯ ಕ್ರಿಯಾಶಕ್ತಿಯೇ **ಮಹಾಸರಸ್ವತಿ** ಆಗಿದ್ದಾಳೆ. ಅಲ್ಲದೇ ಅವಳ ಪರಿಪೂರ್ಣತೆಯ ಹಾಗೂ ನಿಯತಿಯೂ ಆಗಿದೆ. ಇವಳು ಶ್ರೀಮಾತೆಯ ನಾಲ್ಕು ಅಂಶಗಳಲ್ಲಿ ಅತ್ಯಂತ ಕಿರಿಯಳು. ಅನುಷ್ಠಾನಗೊಳಿಸುವ ಕ್ರಿಯೆಯಲ್ಲಿ ಈ **ಸರಸ್ವತಿಯು** ಅತ್ಯಂತ ಕುಶಲಿಯಾಗಿದ್ದಾಳೆ. ಅದಕ್ಕಿಂತ ಹೆಚ್ಚಾಗಿ ಇವಳು ಈ ಪ್ರಕೃತಿಯ ಭೌತಿಕ ಅಂಶಕ್ಕೆ ಅತ್ಯಂತ ಆಪ್ತತೆಯನ್ನು ಹೊಂದಿದ್ದಾಳೆ.

**ಮಾಹೇಶ್ವರಿಯು** ಜಗತ್ತಿನ ಅತಿ ವಿಶಾಲವಾದ ಹಾಗೂ ವೈಶ್ವಿಕ ಶಕ್ತಿಗಳ (ಬಲಗಳ) ಜೊತೆಗೆ ಇದ್ದರೆ, **ಮಹಾಕಾಳಿಯು** ಅವುಗಳ ಬಲಗಳನ್ನು ಹಾಗೂ ಸಂಚಲನಗಳನ್ನು ಸಂವೇಗಗೊಳಿಸುತ್ತಿದ್ದರೆ, **ಮಹಾಲಕ್ಷ್ಮಿಯು** ಅವುಗಳ ನಾದಮಯತೆಯನ್ನು ಹಾಗೂ ಮಾನಕಗಳನ್ನು ಶೋಧಿಸುತ್ತಿದ್ದರೆ, ಇಲ್ಲಿ **ಮಹಾಸರಸ್ವತಿಯು** ಕಾರ್ಯಕರಣಗೊಳ್ಳುತ್ತಿರುವ ಹಾಗೂ ಸಂಘಟನಾತ್ಮಕ–ವಾಗುತ್ತಿರುವ ಈ ಎಲ್ಲ ವಿವರಗಳನ್ನೂ, ಅವುಗಳ ಮಧ್ಯದ ಸಂಪರ್ಕ ಸಂಬಂಧಗಳ ಅಂಶಗಳನ್ನು ಹಾಗೂ ಬಲಗಳ ಪರಿಣಾಮಕಾರೀ ಹೊಂದಾಣಿಕೆಗಳನ್ನು ಮತ್ತು ಅಧಃಪತನಗೊಳ್ಳದ ನಿಖರ ನಿರ್ದಿಷ್ಟತೆಯ ಫಲಿತಾಂಶಗಳನ್ನು ಪಡೆಯುವ ಸಲುವಾಗಿನ ವಿವರಗಳನ್ನು ಗಮನಿಸುವ ಸರ್ವಾಧ್ಯಕ್ಷಳಾಗಿದ್ದಾಳೆ. ವಿಜ್ಞಾನ ಮತ್ತು ಕರಕುಶಲತೆ ಹಾಗೂ ವಸ್ತುಗಳ ಪಾರಿಭಾಷಿಕ ತಾಂತ್ರಿಕತೆಗಳು **ಮಹಾಸರಸ್ವತಿಯ** ಸಾಮ್ರಾಜ್ಯವಾಗಿವೆ. ಇವಳು

ಯಾವಾಗಲೂ ತನ್ನದೇ ಸ್ವಭಾವದಲ್ಲಿ ಇವುಗಳನ್ನು ಹೊಂದಿದ್ದು, ಅವಳು ಯಾರನ್ನು ಆತ್ಮೀಯತೆಯಿಂದ ಆಯ್ಕೆ ಮಾಡಿಕೊಳ್ಳುತ್ತಾಳೆಯೋ, ಯಾರು ಸೂಕ್ಷ್ಮತೆಯಲ್ಲಿ ಹಾಗೂ ಸಹನೆಯಿಂದ ಇರುತ್ತಾರೆಯೋ, ಪ್ರಜ್ಞಾಪೂರ್ವಕವಾದ ಮನಸ್ಸಿನಿಂದ ನಿಖರತೆಯತ್ತಲೇ ಪೂರ್ಣ ಕರ್ತೃತ್ವ ಶಕ್ತಿಯಿಂದ ಸಾಗುತ್ತಾರೆಯೋ, ಅದರಲ್ಲೂ ಪರಿಪಕ್ವವಾದ ಶಕ್ತಿಯ ಕುರಿತು ವಿವೇಚನಾಪೂರ್ಣ ದೃಷ್ಟಿಕೋನವನ್ನು ಹೊಂದಿರುತ್ತಾರೆಯೋ, ಅವರಿಗೆ ಮಾತ್ರ ತನ್ನ ಕೃಪೆಯನ್ನು ಎರೆಯುತ್ತಾಳೆ. ಇಂತಹ ಕೃಪೆಯು ಅತ್ಯಂತ ಸಾಮರ್ಥ್ಯಶಾಲಿಯಾಗಿದ್ದು, ಅದು ಎಂದಿಗೂ ನಿವೃತ್ತಿಯನ್ನು ಬಯಸುವದಿಲ್ಲ. ಅತ್ಯಂತ ಕಾಳಜೀಪೂರ್ವಕ ಹಾಗೂ ಸಕ್ಷಮತೆಯನ್ನು ಹೊಂದಿದ ಕಟ್ಟಡ ರಚನೆಯಾಗಲಿ, ವ್ಯವಸ್ಥಾಪನಾ ಕಾರ್ಯವಾಗಲಿ, ಆಡಳಿತಾತ್ಮಕ ವಿಷಯವಾಗಲಿ, ಯಂತ್ರ–ತಂತ್ರಶಿಲ್ಪದಲ್ಲಾಗಲಿ, ಕಲಾ ಪ್ರದರ್ಶನದಲ್ಲಾಗಲಿ ಮತ್ತು ಈ ರೀತಿ ಹಲವು ವಿಧದಲ್ಲಿ ಈ ಜಗತ್ತು ರೂಪಣೆ ಹೊಂದುವಂತೆಯೇ ಸೃಷ್ಟಿಸಲ್ಪಟ್ಟಿದೆ. ಯಾವಾಗ ಇವಳು ರೂಪಾಂತರಣಕ್ಕೆ ಸಿದ್ಧಳಾಗಿ, ಪ್ರಕೃತಿಯ (ಸಹಜ ಸ್ವಭಾವದ) ನವೀನ ಸಂರಚನೆಯನ್ನು ಬಯಸುತ್ತಾಳೆಯೋ ಆಗ ಅವಳ ಆ ಕ್ರಿಯೆಯು ಅಂತಹ ಪರಿಶ್ರಮದಲ್ಲಿಯೇ ಇರುತ್ತದೆ. ಇದರ ಸೂಕ್ಷ್ಮತೆಯೂ ಸಹಿತ ನಮ್ಮ ಉತ್ಕಂಠಿತಗೊಂಡ, ಶೀಘ್ರ ಫಲಿತಾಂಶ ಬಯಸುವ ಉತ್ಸುಕತೆಯ ತಹತಹಿಕೆಗೆ ಇವೆಲ್ಲವೂ ಅತ್ಯಂತ ನಿಧಾನ ಗತಿಯಲ್ಲಿ, ಅದೂ ಅನಂತಾನಂತದಲ್ಲಿ ಘಟಿಸುತ್ತಿರುವ ವಿಷಯದಂತೆ ಕಾಣುತ್ತದೆ. ಆದರೆ ಇದು ಸಮಗ್ರತೆಯಿಂದ ಕೂಡಿದ್ದು, ಸ್ಥಿರತೆಯಿಂದ ಇದ್ದು, ಯಾವುದೇ ಏರಿಳಿತಗಳು ಇಲ್ಲಿ ಇರುವದಿಲ್ಲ.

ಯಾವುದು ಅವಳಿಚ್ಛೆಯಂತೆ ಅವಳಲ್ಲಿ ಕಾರ್ಯತತ್ಪರತೆಗೆ ತೊಡಗಿ–ಕೊಳ್ಳುತ್ತದೆಯೋ ಅದು ಅತ್ಯಂತ ಋಜು ಸ್ವಭಾವದ್ದೇ ಆಗಿರುತ್ತದೆ. ಎಂದಿಗೂ ಜಡಗೊಳ್ಳುವದಿಲ್ಲ. ಯಾವಾಗಲೂ ಅವಿಶ್ರಾಂತವಾಗಿಯೇ ಕಾರ್ಯತತ್ಪರತೆಯಲ್ಲಿ ಇರುತ್ತದೆ. ಈ ರೀತಿಯಾಗಿಯೇ ಅವಳು ನಮ್ಮನ್ನು ಹರಸುವದರ ಮೂಲಕ, ಅವಳು ಅತ್ಯಂತ ಸೂಕ್ಷ್ಮಾತಿಸೂಕ್ಷ್ಮ ವಿಷಯಗಳನ್ನೂ ಗಮನಿಸುತ್ತಾ ಹಾಗೂ ಅವುಗಳನ್ನು ಸ್ಪರ್ಶಿಸುತ್ತಾ, ಪ್ರತಿ ಕ್ಷಣವೂ ತಪ್ಪುಗಳನ್ನು ಪರಿಷ್ಕರಿಸುತ್ತಾ, ಕಂದಕಗಳು ಬೀಳದ ಹಾಗೆ, ತಿರುಚಿಕೊಳ್ಳದ ಹಾಗೆ ಅಥವಾ ಅಪರಿಪೂರ್ಣವಾಗಿಯೇ ಉಳಿಯದ ಹಾಗೆ ಅವುಗಳೆಲ್ಲವನ್ನೂ ಪರಿಗಣಿಸಿ, ಸಮಯೋಚಿತವಾಗಿ ಸಮತೋಲನಗೊಳಿಸಿ ನಿಖರತೆಯತ್ತ ಎಲ್ಲವೂ ಘಟಿಸುವಂತೆ ಮಾಡುತ್ತಾಳೆ. ಅವಳ ದೃಷ್ಟಿಗೆ ಯಾವುದೂ

ಕಡಿಮೆಯಲ್ಲ; ಯಾವುದೂ ಅಲ್ಪವೂ ಅಲ್ಲ. ಅದು ಎಷ್ಟೇ ದುರ್ಗಮವಾದ ಅಥವಾ ನಿಗೂಢತೆಯಲ್ಲಿಯೇ ಮುಳುಗಿದ್ದರೂ ಅವಳಿಂದ ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ. ಅದಕ್ಕಾಗಿ ಎರಕಗೊಳಿಸುತ್ತ ಮತ್ತೆ ಮತ್ತೆ ಮರು ಎರಕಗೊಳಿಸುತ್ತ ಅವಳು ಆ ನಿಗದಿತ ರೂಪವನ್ನು ಪಡೆಯುವವರೆಗೂ, ಪ್ರತಿಯೊಂದು ಭಾಗವೂ ಸಮಗ್ರತೆಯಲ್ಲಿ ಸ್ಪಂದಿಸುವಂತೆ ಮಾಡಲು ಸದಾ ಶ್ರಮಿಸುತ್ತಾಳೆ. ಅದು ನಿಗದಿತವಾದ ಸ್ಥಳದಲ್ಲಿಯೇ ಸ್ಥಿತಗೊಂಡು ನಿಗದಿತಗೊಂಡಿರುವ ಪರಮೋದ್ದೇಶಕ್ಕೆ ಪೂರಕವಾಗಿಯೇ ಹಾಗೂ ಒಟ್ಟಂದದಲ್ಲಿ ಭಾಗವಹಿಸಿ ಫಲಪ್ರದವಾಗುವಂತೆ ಮಾಡುತ್ತಾಳೆ. ಅವಳ ಈ ನಿರಂತರತೆಯ ಮತ್ತು ವಸ್ತುಗಳ ವಿಧಿಬದ್ಧ ವ್ಯವಸ್ಥಾಪನೆಗಳು ಹಾಗೂ ಪುನರ್–ವ್ಯವಸ್ಥಾಪನೆಗಳಲ್ಲಿ ಅವಳ ದೃಷ್ಟಿಕೋನವು ಏಕಕಾಲಕ್ಕೆ ಸರ್ವ ವಸ್ತುಗಳ ಸರ್ವ ವಿಷಯದ ಮೇಲೆಯೂ ಇರುತ್ತದೆ. ಅವಳ ಅಂತಃಪ್ರಜ್ಞೆಯು ಯಾವುದನ್ನು ಸ್ವೀಕರಿಸಬೇಕು, ಯಾವುದನ್ನು ದೂರವಿಡಬೇಕು ಎನ್ನುವುದನ್ನು ನಿರ್ಣಯಿಸುತ್ತದೆ. ಹೀಗಾಗಿ ಯಶಸ್ವಿಯಾಗಿಯೇ ಸೂಕ್ತವಾದ ಅರ್ಹತೆಯುಳ್ಳ ಸಾಧನವನ್ನೇ ಅವಳು ಆಯ್ಕೆ ಮಾಡಿಕೊಳ್ಳುತ್ತಾಳೆ. ಅದು ಸೂಕ್ತ ಸಮಯದಲ್ಲಿ ಮತ್ತೆ ನಿಖರವಾದ ನಿಯಮದಲ್ಲಿಯೇ ರೂಪುಗೊಂಡಿರುತ್ತದೆ.

ನಿಷ್ಕಾಳಜಿ, ತಿರಸ್ಕಾರ, ಆಲಸ್ಯಗಳನ್ನು ಇವಳು ತೊಡೆದು ಹಾಕುತ್ತಾಳೆ. ವಿಚ್ಛಿದ್ರಗೊಳಿಸುವಂತಹ, ದ್ವೇಷಪೂರಿತ ಹಾಗೂ ಅಲ್ಲೋಲಕಲ್ಲೋಲಮಯ ಕಾರ್ಯಗಳನ್ನೂ ಛಿದ್ರಗೊಳಿಸುತ್ತಾಳೆ. ಜಟಿಲತಮದ ಎಲ್ಲವನ್ನೂ ಮತ್ತು ಪ್ರಮಾದಗಳನ್ನೂ, ಸರ್ವ ತಪ್ಪುಗಳನ್ನೂ ಹಾಗೂ ಉಪಕರಣಗಳ ದುರುಪಯೋಗ ಅಲ್ಲದೇ ಪರಿಣಿತರು ಕಾರ್ಯವಿಮುಖರಾಗಿರುವದನ್ನು, ಅಪರಿಪೂರ್ಣತೆಯತ್ತಲೇ ಸಾಗುತ್ತಿರುವವದನ್ನು ಅಪರಾಧೀ ಕೃತ್ಯವೆಂದು ಭಾವಿಸಿ, ಇದು ಅವಳ ಸ್ವಭಾವಕ್ಕೆ ವಿರುದ್ಧವಾದುದೆಂದು ಸ್ವೀಕಾರಾರ್ಹವಲ್ಲವೆಂದು ಅವುಗಳನ್ನು ಹುಡಿಗುಟ್ಟಿಸುತ್ತಾಳೆ.

ಯಾವಾಗ ಅವಳ ಕಾರ್ಯವು ಪೂರ್ಣಗೊಳ್ಳುತ್ತದೆಯೋ, ಆಗ ಯಾವುದೂ ಮರೆತಿರುವದಿಲ್ಲ. ಯಾವ ಭಾಗವೂ ಸಹಿತ ಸೂಕ್ತವಲ್ಲದ ಜಾಗೆಯಲ್ಲಿ ಸ್ಥಿತಗೊಂಡಿರುವದಿಲ್ಲ. ಅಥವಾ ಆ ಭಾಗದಲ್ಲಿ ಅಳವಡಿಸುವದನ್ನೇ ಮರೆತಿರುವ ಸಂಭವವೂ ಇರುವದಿಲ್ಲ. ದೋಷಪೂರಿತ ಸ್ಥಾನದಲ್ಲಿ ಸ್ಥಿತಗೊಳಿಸಿರುವದಿಲ್ಲ. ಎಲ್ಲವೂ ಘನವಾಗಿಯೇ, ನಿಖರವಾಗಿಯೇ ಪೂರ್ಣವಾಗಿರುತ್ತದೆ. ಸರ್ವರೂ ಮೆಚ್ಚುವಂತೆಯೇ ಇರುತ್ತದೆ.

ಪರಿಪೂರ್ಣ ಪಕ್ವತೆಗೆ ಯಾವುದು ಕಡಿಮೆ ಇದ್ದರೂ ಸಹಿತ ಅವಳು ತೃಪ್ತಳಾಗುವದಿಲ್ಲ. ಅದನ್ನು ಎದುರಿಸಲು ಅವಳು ಶತ್ರುತ್ವ ಭಾವವನ್ನೂ ಸಹಿತ ತಾಳಬಲ್ಲಳು. ಅದನ್ನೆ ಎದುರಿಸಲೂ ಸಿದ್ಧಳಾಗಿರುತ್ತಾಳೆ. ಏಕೆಂದರೆ ಇಂತಹ ಶತ್ರುತ್ವವು ಪರಿಪೂರ್ಣತೆಯ ಸೃಷ್ಟಿಗೆ ಅತ್ಯಾವಶ್ಯವಾಗಿರುವ ಸಂಗತಿಯಾಗಿದೆ. ಆದ್ದರಿಂದ ಶ್ರೀಮಾತೆಯ ಸರ್ವ ಶಕ್ತಿಗಳಲ್ಲಿ ಇವಳು ಮಾತ್ರ ಮನುಕುಲದ ಜೊತೆಗೆ ಅತ್ಯಂತ ಸುದೀರ್ಘವಾದ ತೊಂದರೆಯನ್ನೇ ಎದುರಿಸಬೇಕಾಗಿದೆ. ಏಕೆಂದರೆ, ಮಾನವನು ಸದಾ ಅಪರಿಪೂರ್ಣತೆಯ ಮಾಯೆಯಲ್ಲಿಯೇ ಇರಲು ಯತ್ನಿಸುವವನಾಗಿದ್ದಾನೆ.

ದಯೆ, ಮುಗುಳ್ನಗೆ, ಆತ್ಮೀಯತೆ ಹಾಗೂ ಸಹಕಾರಗಳು ಅಷ್ಟೊಂದು ಸುಲಭದಲ್ಲಿ ಮಾನವನಲ್ಲಿ ಕಾಣಲು ಸಾಧ್ಯವಿಲ್ಲ. ಇವಿಲ್ಲದಿದ್ದರೆ ಅವನ ಬದುಕನ್ನು ಶ್ರುತಿಬದ್ಧಗೊಳಿಸಲೂ ಸಾಧ್ಯವಿಲ್ಲ. ಅದರಲ್ಲೂ ಹಲವಾರು ಸೋಲಿನ ನಂತರದಲ್ಲಿ ಮಾನವನಲ್ಲಿ ಮರುವ ಹತಾಶೆ, ಅಧೈರ್ಯದಿಂದ ಹೊರತರುವದೂ ಅಷ್ಟು ಸುಲಭದಲ್ಲಿ ಸಾಧ್ಯವಾಗುವದಿಲ್ಲ. ಆದರೆ ಇಂತಹ ಎಲ್ಲ ಸಂದರ್ಭಗಳಲ್ಲಿ ಈ ಶ್ರೀಮಾತೆಯ ಕೃಪಾಹಸ್ತಗಳು ನಮ್ಮನ್ನು ಸಂರಕ್ಷಿಸುತ್ತವೆ. ನಮ್ಮ ಪ್ರತಿಯೊಂದು ಹೆಜ್ಜೆಯನ್ನೂ ನಮ್ಮ ಇಚ್ಛೆಯಲ್ಲಿಯೇ ಏಕಾಂಗಿಯಾಗಿ ಸಾಧಿಸುವ ಸಲುವಾಗಿ ಇರುವ ಅಭಿಲಾಷೆಯೊಂದಿಗೆ ಪ್ರಾಮಾಣಿಕರಾಗಿರುವಂತೆ ಹಾಗೂ ನೇರ ಪಥದಲ್ಲಿ ಸಾಗುವಂತೆ ಮಾಡುತ್ತಾಳೆ.

ದ್ವಂದ್ವ ಮನೋಭಾವವನ್ನು ಅವಳು ಎಂದಿಗೂ ಸಹಿಸುವದಿಲ್ಲ. ಕೇವಲ ಮೇಲ್ತೋರಿಕೆಗಾಗಿ ಇರುವ ಸಂದರ್ಭಗಳನ್ನು ಕಂಡಾಗಲೆಲ್ಲ ಅವಳ ಪ್ರತಿಕಾರವು ತೀಕ್ಷ್ಣವಾಗಿಯೇ ಇರುತ್ತದೆ. ಜೊತೆಗೆ ಅಷ್ಟೇ ನಾಟಕೀಯವಾಗಿರುವಂತೆಯೇ ಇರುತ್ತದೆ.

ಇವಳು ನಮ್ಮ ಬಯಕೆಗಳನ್ನು ಈಡೇರಿಸುವ ಮಾತೆಯಾಗಿದ್ದಾಳೆ. ಕಷ್ಟಕಾಲದಲ್ಲಿ ಸಹಾಯಕ್ಕೆ ಬರುವ ಮಿತ್ರನೋಪಾದಿ ಇದ್ದಾಳೆ. ಸದಾ ಸ್ಥಿತಪ್ರಜ್ಞೆಯಲ್ಲಿರುವ ಅಪ್ರತಿಮ ಸಲಹೆಗಾರಳಾಗಿದದ್ದಾಳೆ. ಹಾಗೂ ಜೀವನ ಶಿಲ್ಪಿಯೂ ಆಗಿದ್ದಾಳೇ. ಅಲ್ಲಲ್ಲಿ ದಟ್ಟಯಸಿಕೊಂಡು ಬರುವ ಹತಾಶೆಯ, ಭಯದ ಮೋಡಗಳನ್ನು ಅವಳು ತನ್ನ ಕಾಂತಿಯುಕ್ತ ಮಂದಸ್ಮಿತದಲ್ಲಿಯೇ ಚೆದುರಿಸಿ ಬಿಡುತ್ತಾಳೆ. ಯಾವಾಗಲೂ ಸಹಾಯಕ್ಕೆ ಬರುವದನ್ನು ಪದೇ ಪದೇ ನೆನಪಿಸುತ್ತಾಳೆ. ಆ ಶಾಶ್ವತದ ಸೂರ್ಯೋದಯದ

ಕಡೆಗೆ ನಮ್ಮ ದೃಷ್ಟಿಕೋನವನ್ನು ಗುರಿ ಇರಿಸುವಂತೆ ಮಾರ್ಗದರ್ಶನ ಮಾಡುತ್ತಾಳೆ. ಅವಳು ನಿಶ್ಚಿಂತಳು. ಪ್ರಶಾಂತಳು. ಯಾವಾಗಲೂ ನಿರಂತರವಾಗಿರುವ ಆತ್ಮಗತ–ವಾಗಿರುವ ಅಭೀಪ್ಸೆಯಲ್ಲಿಯೇ ತನ್ನನ್ನು ಸ್ಥಿತಗೊಳಿಸಿಕೊಂಡಿದ್ದಾಳೆ. ಈ ಅಭೀಪ್ಸೆಯೂ ನಮ್ಮನ್ನು ಆ ಊರ್ಧ್ವದ ಪರಮೋಚ್ಚ ಭಾವಕ್ಕೆ ಕರೆದುಕೊಂಡು ಹೋಗುವ ಸದಿಚ್ಛೆಯಾಗಿದೆ. ಇಲ್ಲಿಯೇ ಉಳಿದೆಲ್ಲ ಶಕ್ತಿಗಳೂ ಸಹಮತದಿಂದ ಮಹಾಸರಸ್ವತಿಯ ಪರಿಪೂರ್ಣತೆಗೆ ಸಹಕರಿಸುತ್ತವೆ. ಭೌತಿಕದ ಆಧಾರದ ಸಲುವಾಗಿ ಭರವಸೆಯನ್ನೂ, ಆಂತರ್ಯದ ಸಾರವನ್ನು ವಿಶದೀಕರಿಸುವ ಹಾಗೂ ಇಡೀ ವಿನ್ಯಾಸದ ಸವಿವರಗಳನ್ನು ಅನ್ವೇಷಿಸುವ ಹಾಗೂ ರೂಪಣೆಗೊಳಿಸುತ್ತಿರುವ ಶಕ್ತಿ ಇವಳಾಗಿದ್ದಾಳೆ.

## ಮಹಾಸರಸ್ವತಿ–ಪರಾಮಾತೆಯ ಪರಿದೃಷ್ಟಿ

**– ಅನು: ನಾಗಜ್ಯೋತಿ ಮಾನ್ವಿ**

### ಸಂಪೂರ್ಣ ಕಾರ್ಯದ ಶಕ್ತಿ

ಮಹಾಸರಸ್ವತಿಯು ಶ್ರೀಮಾತೆಯ ಕಾರ್ಯದ ಶಕ್ತಿಯಾಗಿದ್ದಾಳೆ ಮತ್ತು ಆಕೆಯ ಪರಿಪೂರ್ಣತೆ ಹಾಗು ವ್ಯವಸ್ಥೆಯ ಅಂಶವೇ ಆಗಿದ್ದಾಳೆ. ಆಕೆಯ ನಾಲ್ಕು ಅಂಶಗಳಲ್ಲಿ (ರೂಪಗಳಲ್ಲಿ) ಅತ್ಯಂತ ಕಿರಿಯಳಾಗಿದ್ದು, ಕಾರ್ಯನಿರ್ವಾಹಕ ಕ್ಷೇತ್ರದಲ್ಲಿ ಅತ್ಯಂತ ಕುಶಲಳೂ ಮತ್ತು ಭೌತಿಕ ಪ್ರಕೃತಿಗೆ ಅತ್ಯಂತ ಸಮೀಪದವಳಾಗಿದ್ದಾಳೆ. ಮಾಹೇಶ್ವರಿಯು ಜಗತ್ತಿನ ಶಕ್ತಿಗಳ ವಿಶಾಲ ನಿಯಮಗಳನ್ನು ನಿರ್ಧರಿಸುತ್ತಾಳೆ. ಮಹಾಕಾಳಿಯು ಆ ಶಕ್ತಿ ಮತ್ತು ಉತ್ತೇಜನಗಳನ್ನು ನಡೆಸುತ್ತಾಳೆ. ಮಹಾಲಕ್ಷ್ಮಿಯು ಅವುಗಳ ಲಯ ಮತ್ತು ಮಾನಕಗಳನ್ನು ಆವಿಷ್ಕರಿಸುತ್ತಾಳೆ. ಆದರೆ ಮಹಾಸರಸ್ವತಿಯು ಅವುಗಳ ಸಂಘಟನೆ ಮತ್ತು ಕಾರ್ಯನಿರ್ವಾಹಕತೆಗಳ, ಅವುಗಳ ವಿಭಾಗಗಳ ಸಂಬಂಧ ಹಾಗು ಶಕ್ತಿಗಳ ಪ್ರಭಾವಶಾಲಿ ಸಂಯೋಜನೆ ಮತ್ತು ಮರಿಣಾಮಗಳ ಹಾಗು ಅವುಗಳ ಪಾಲನೆಯ ಕುರಿತು, ಎಂದಿಗೂ ಸೋಲನ್ನು ಕಾಣದ ನಿಖರತೆಯೊಂದಿಗೆ ಇವುಗಳ ಮೇಲೆ ನಾಯಕತ್ವ ವಹಿಸಿರುತ್ತಾಳೆ. ವಿಜ್ಞಾನ ಮತ್ತು ಕರಕುಶಲತೆಯ, ವಸ್ತುಗಳ ತಂತ್ರಗಾರಿಕೆಯು ಮಹಾಸರಸ್ವತಿಯ ಕ್ಷೇತ್ರವಾಗಿದೆ. ಯಾವಾಗಲೂ ಇದನ್ನು ಇವಳು ಪ್ರಕೃತಿಯಲ್ಲಿ ಧರಿಸಿರುತ್ತಾಳೆ, ತಾನು ಆಯ್ಕೆ ಮಾಡಿದವರಿಗೆ ಇವೆಲ್ಲವನ್ನೂ ಒದಗಿಸುತ್ತಾಳೆ. ಅನ್ಯೋನ್ಯ ಮತ್ತು ಸ್ಪಷ್ಟ ಜ್ಞಾನ, ಸೂಕ್ಷ್ಮತೆ ಮತ್ತು ತಾಳ್ಮೆ, ಅಂತರ್ಬೋಧೆ, ಮನದಲ್ಲಿ

ನಿಖರತೆ ಮತ್ತು ಪರಿಪೂರ್ಣ ಕೆಲಸಗಾರನಿಗೆ ಕೈಗಳನ್ನು ಮತ್ತು ವಿವೇಚನಾಶೀಲ ಕಣ್ಣುಗಳನ್ನು ಕೊಡುತ್ತಾಳೆ.

## ಸೃಷ್ಟಿಯ ಪ್ರತಿಯೊಂದು ಭಾವವನ್ನೂ ರೂಪಿಸುವ 'ಶಕ್ತಿ'

ಈ 'ಶಕ್ತಿಯು' ಬಲಶಾಲಿ, ದಣಿವನ್ನು ಅರಿಯದ, ಕಾಳಜಿಯಿಂದ ಪೂರ್ಣಗೊಂಡ ಮತ್ತು ದಕ್ಷ ನಿರ್ಮಾಣಕವಾಗಿರುವ, ಸಂಘಟನೆ ಮತ್ತು ಆಡಳಿತಾತ್ಮಕವಾಗಿದ್ದು ಜೊತೆಗೆ ತಂತ್ರಜ್ಞ, ಕುಶಳಕರ್ಮಿ ಮತ್ತು ಜಗತ್ತನ್ನು ವರ್ಗೀಕರಣಗೊಳಿಸುವ ಹಂತವಾಗಿದೆ. ಆಕೆಯು ಪ್ರಕೃತಿಯನ್ನು ರೂಪಾಂತಣಗೊಳಿಸಲು ಮತ್ತು ಹಿಸದಾಗಿ ಕಟ್ಟಲು ಕಾರ್ಯಗೈದಾಗ, ಆಕೆಯ ಕಾರ್ಯವು ಶ್ರಮದಾಯಕವಾಗಿದ್ದು ಜೊತೆಗೆ ಸೂಕ್ಷ್ಮವಾಗಿದ್ದು, ಬಹುತೇಕವಾಗಿ ಅದರಲ್ಲೂ ನಮ್ಮ ಅಸಹನೆಗೆ ನಿಧಾನವೆಂದೆನಿಸುತ್ತದೆ. ಆದರೆ ಆಕೆಯು ಸತತವಾಗಿ, ಸಮಗ್ರವಾಗಿ ಮತ್ತು ದೋಷಮುಕ್ತಳಾಗಿದ್ದಾಳೆ. ಕೆಲಸದಲ್ಲಿನ ಆಕೆಯ ಸಂಕಲ್ಪವು ನಿಷ್ಠೂರವೆಂದೆನಿಸಿದರೂ, ನಮ್ಮನ್ನು ಸದಾ ಎಚ್ಚರವಾಗಿರುವಂತೆ ಮತ್ತು ಅವಿಶ್ರಾಂತವಾಗಿರುವಂತೆ ಪ್ರೋತ್ಸಾಹಿಸುತ್ತಾಳೆ. ನಮ್ಮೆಡೆಗೆ ಬಾಗಿ, ಹರಸಿ ಪ್ರತಿಯೊಂದು ಸಣ್ಣ ಸಣ್ಣ ವಿವರಗಳನ್ನೂ ಗುರುತಿಸಿ ಸ್ಪರ್ಶಿಸುತ್ತಾಳೆ. ಪ್ರತಿಯೊಂದು ಸಣ್ಣ ನ್ಯೂನ್ಯತೆ, ಅಂತರ, ವಿಚಲನ ಅಥವಾ ಅಪೂರ್ಣತೆಗಳನ್ನು ಕಂಡುಹಿಡಿಯುತ್ತಾಳೆ. ಇಲ್ಲಿಯವರೆಗೂ ಏನನ್ನು ಮಾಡಲಾಗಿದೆಯೋ ಅದೆಲ್ಲವನ್ನೂ ಕೂಲಂಕಷವಾಗಿ ಅಳತೆ ಮಾಡಿ ಗಣನೆಗೆ ತೆಗೆದುಕೊಳ್ಳುತ್ತಾಳೆ. ಆಕೆಯ ಗಮನಕ್ಕೆ ಯಾವುದೂ ಚಿಕ್ಕದು ಅಥವಾ ಕ್ಷುಲ್ಲಕವಾದುದು ಎಂದಿರುವದಿಲ್ಲ. ಸ್ಪರ್ಶಿಸಲಾಗದ ಅಥವಾ ಗುಪ್ತವಾದುದು ಏನೂ ಅವಳಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಪ್ರತಿಯೊಂದು ಭಾಗವನ್ನೂ ಅದರ ನೈಜ ರೂಪವನ್ನು ಪಡೆಯುವವರೆಗೂ ರೂಪಿಸುತ್ತಲೇ ಸಾಗುತ್ತಾಳೆ. ಪೂರ್ಣತೆಯಲ್ಲಿ ಅದರ ಸ್ಥಾನದಲ್ಲಿಟ್ಟು, ಅದರ ಸ್ಪಷ್ಟ ಉದ್ದೇಶವನ್ನು ಈಡೇರಿಸುತ್ತಾಳೆ. ಆಕೆಯ ಈ ಸತತ ಪರಿಶ್ರಮ ಹಾಗು ಜೋಡನಾ ಕಾರ್ಯದಿಂದ, ವಸ್ತುಗಳ ಯೋಜನೆ ಮತ್ತು ಸಂಯೋಜನೆ ಹಾಗು ಮರು ಸಂಯೋಜನೆಗಳಲ್ಲಿ ಆಕೆಯ ದೃಷ್ಟಿಯು ಎಲ್ಲಾ ಅವಶ್ಯಕತೆಗಳ ಮೇಲೂ ಏಕಕಾಲಕ್ಕೇ ವ್ಯಾಪಿಸಿರುತ್ತದೆ. ಅವುಗಳ ಜೊತೆಯಲ್ಲಿ ವ್ಯವಹರಿಸುವ ರೀತಿ ಮತ್ತು ಆಕೆಯ ಅಂತಃಸ್ಫೂರ್ತಿಗೆ ಏನನ್ನು ಆಯ್ಕೆ ಮಾಡಿಕೊಳ್ಳಬೇಕು ಮತ್ತು ಯಾವುದನ್ನು ನಿರಾಕರಿಸಬೇಕೆಂದು ತಿಳಿದಿರುತ್ತದೆ. ಯಾವುದು ಸೂಕ್ತವಾದ ಉಪಕರಣ,

ಸರಿಯಾದ ಸಮಯ, ಸೂಕ್ತವಾಗಿರುವ ಸಮಯ ಮತ್ತು ಸರಿಯಾದ ಸ್ಥಿತಿ ಹಾಗು ಸೂಕ್ತವಾಗಿರುವ ಪ್ರಕ್ರಿಯೆಗಳನ್ನು ಯಶಸ್ವಿಯಾಗಿ ನಿರ್ಧರಿಸುತ್ತಾಳೆ.

**ಮನುಷ್ಯನ ಅಪರಿಪೂರ್ಣತೆಗಳೊಂದಿಗೆ ದಣಿವರಿಯದ ಜಾಗೃತ ಮತ್ತು ಸಹನೆ**

ನಿಷ್ಕಾಳಜಿ. ನಿರ್ಲಕ್ಷ್ಯ ಮತ್ತು ಉದಾಸೀನತೆಯನ್ನು ಕಂಡು ಅವಳು ಜಿಗುಪ್ಸೆಪಡುತ್ತಾಳೆ. ಕೆಲಸದಲ್ಲಿ ಅವಸರ, ಮೋಸಗಾರಿಕೆ, ಕಲಬೆರಕೆ, ಎಲ್ಲಾ ರೀತಿಯ ಅಜಾಗರೂಕತೆ, ಕ್ಷುಲ್ಲಕತನ, ಗುರಿ ತಪ್ಪುವಿಕೆ, ಎಲ್ಲಾ ರೀತಿಯ ಹೊಂದಾಣಿಕೆಗಳು, ಉಪಕರಣಗಳ ಮತ್ತು ಸಾಮರ್ಥ್ಯಗಳ ದುರುಪಯೋಗ ಹಾಗೂ ಕೆಲಸಗಳನ್ನು ಮಾಡದೇ ಇರುವದು, ಅರ್ಧಂಬರ್ದ ಮಾಡುವದು ಆಕೆಯ ಮನೋಧರ್ಮಕ್ಕೆ ಎಂದಿಗೂ ಸಮ್ಮತವಾಗಿರುವದಿಲ್ಲ. ಇದು ಆಕೆಗೆ ಪರಕೀಯವಾಗಿರುತ್ತದೆ. ಆಕೆಯ ಕಾರ್ಯವು ಸಂಪೂರ್ಣವಾದಾಗ, ಅವಳು ಯಾವುದನ್ನೂ ಮರೆತಿರುವದಿಲ್ಲ. ಯಾವ ಭಾಗವನ್ನೂ ಸ್ಥಾನಪಲ್ಲಟ ಅಥವಾ ಪರಿತ್ಯಜಿಸುದನ್ನು ಮಾಡುವದಿಲ್ಲ. ತಪ್ಪು ಸ್ಥಿತಿಯಲ್ಲಂತೂ ಅದು ಅಲ್ಲಿಯೇ ಉಳಿಯುವಂತೆ ಎಂದಿಗೂ ಮಾಡುವದಿಲ್ಲ. ಎಲ್ಲವೂ ಭದ್ರವಾಗಿ, ನಿಖರವಾಗಿ, ಸಂಪೂರ್ಣವಾಗಿ ಪ್ರಶಂಸನೀಯವಾಗಿರುವಂತೆಯೆ ಕಾರ್ಯಗೈಯುತ್ತಾಳೆ. ಪರಿಪೂರ್ಣ ಪರಿಪಕ್ವತೆಯಲ್ಲದೇ ಬೇರಾವುದೂ ಆಕೆಗೆ ತೃಪ್ತಿಯನ್ನು ತರುವದಿಲ್ಲ. ಸೃಷ್ಟಿಯ ಪರಿಪೂರ್ಣತೆಗೆ ಅವಳು –ಅವಶ್ಯವಿದ್ದರೆ– ಶಾಶ್ವತವಾಗಿ ನಿರಂತರವಾಗಿ ಪ್ರಯತ್ನ ಮಾಡಲು ಸಿದ್ಧಳಿದ್ದಾಳೆ. ಹೀಗಾಗಿ, ಜಗನ್ಮಾತೆಯ ಶಕ್ತಿಗಳಲ್ಲಿ ಆಕೆ ಮಾನವ ಮತ್ತು ಆತನ ಸಾವಿರಾರು ಅಪೂರ್ಣತೆಗಳ ಜೊತೆಗೆ ಅತ್ಯಂತ ಸಹನೆಯಿಂದಲೇ ವರ್ತಿಸುತ್ತಲೇ ಇದ್ದಾಳೆ.

**ಮಹಾಸರಸ್ವತಿ; ದೈವೀ ಸಂಪೂರ್ಣತೆಯೆಡೆಗೆ ಮಾರ್ಗದರ್ಶನ**

ದಯೆ, ಮುಗುಳ್ನಗೆಯ, ಅತ್ಯಂತ ಸಮೀಪದ ಮತ್ತು ಸಹಾಯಕವಾಗಿರುವ ಜೊತೆಗೆ ಸುಲಭವಾಗಿದ್ದು ಎಂದಿಗೂ ವಿಮುಖವಾಗದ ಅಥವಾ ನಿರುತ್ಸಾಹಗೊಳ್ಳದ ಹಾಗೆ ಮಾರ್ಗದರ್ಶನವಿರುತ್ತದೆ. ಪುನರಾವರ್ತಿತ ಸೋಲುಗಳ ನಂತರವೂ ಸಹಿತ ದೃಢವಾಗಿ ನಿಲ್ಲಲು ಹಾಗೂ ಬಯಸುವಂತಿದ್ದರೆ ಅದಕ್ಕೆ ಸೂಕ್ತವಾಗಿ ಪ್ರೋತ್ಸಾಹಿಸುವಂತಿರುತ್ತದೆ. ಇವುಗಳ ಜೊತೆಗೆ ನಾವು ನಮ್ಮ ಸಂಕಲ್ಪದಲ್ಲಿ ಏಕನಿಷ್ಠತೆಯನ್ನು ಹೊಂದಿರುವಲ್ಲಿ ಮತ್ತು ನೇರ ಮಾರ್ಗದಲ್ಲಿ ಸಾಗುತ್ತಿದ್ದಲ್ಲಿ,

ಪ್ರಾಮಾಣಿಕವಾಗಿದ್ದರೆ ನಮ್ಮ ಪ್ರತಿಯೊಂದು ಹೆಜ್ಜೆಯಲ್ಲೂ ಅವಳು ನಮ್ಮ ಕೈಹಿಡಿದು ನಡೆಸುತ್ತಾಳೆ. ದ್ವಂದ್ವ ಮನವನ್ನು ಆಕೆ ಎಂದಿಗೂ ಸಹಿಸುವದಿಲ್ಲ. ನಾಟಕೀಯತೆ, ಅತಿರೇಕದ ಅಭಿನಯ, ಸ್ವಯಂ ಮೋಸಮಾಡಿಕೊಳ್ಳುವಿಕೆ ಮತ್ತು ನಟನೆ ಮಾಡುತ್ತಿದ್ದಲ್ಲಿ, ಅವಳು ಅದನ್ನು ನಿವಾರಿಸುವ–ಬಯಲು ಮಾಡುವ ವ್ಯಂಗ್ಯವು ನಿರ್ದಯವಾಗಿರುತ್ತದೆ. ನಮ್ಮ ಅಗತ್ಯಗಳಿಗೆ ಅವಳು ಮಾತೆಯಂತಿರುತ್ತಾಳೆ. ನಮ್ಮ ಕಷ್ಟಗಳಲ್ಲಿ ಮಿತ್ರನಂತೆ, ಅಚಲವೂ ಶಾಂತವೂ ಆದ ಸಲಹೆಗಾರ್ತಿಯಾಗಿ ಮಾರ್ಗದರ್ಶಿಯಾಗಿರುತ್ತಾಳೆ. ನಮ್ಮ ಕಷ್ಟಮಯ ಸಂದರ್ಭಗಳಲ್ಲಿ ತನ್ನ ಪ್ರಕಾಶಮಾನವಾದ ನಗುವಿನಿಂದ ನಮ್ಮ ನಿರುತ್ಸಾಹ, ಅಶಾಂತಿ ಹಾಗು ಖಿನ್ನತೆಯ ಮೋಡಗಳನ್ನು ದೂರ ಮಾಡುತ್ತಾಳೆ, ಜೊತೆಗೆ ಸನ್ನಿಹಿತವಾಗಿರುವ ಸಹಾಯವನ್ನು ಸ್ಮರಿಸುತ್ತಾ, ಶಾಶ್ವತ ಬೆಳಕಿನೆಡೆಗೆ ಸೂಚಿಸುತ್ತಾ, ಅವಳು ಉನ್ನತ ಸ್ವಭಾವದ ಸಮಗ್ರತೆಯತ್ತ ನಮ್ಮನ್ನು ನಡೆಸುವ ನಿರಂತರ ಪ್ರೇರಣೆಯಲ್ಲಿ ದೃಢಳಾಗಿ, ಪ್ರಶಾಂತವಾಗಿ ಮತ್ತು ಅಚಲವಾಗಿ ಮುಂದುವರಿಯುವವಳಾಗಿ ಇರುತ್ತಾಳೆ. ಇತರೇ ಶಕ್ತಿಗಳ ಎಲ್ಲಾ ಕಾರ್ಯಗಳು ತಮ್ಮ ಸಂಪೂರ್ಣತೆಯನ್ನು ಪಡೆಯಲು ಅವಳ ಮೇಲೆಯೇ ಅವಲಂಬಿತವಾಗಿವೆ. ಏಕೆಂದರೆ ಭೌತಿಕ ಬುನಾದಿಯನ್ನು ಸದೃಢಪಡಿಸಿ, ಪದಾರ್ಥಗಳ ವಿವರಗಳನ್ನು ವಿವರಿಸುತ್ತಾಳೆ. ಆ ರಚನೆಯ ಕವಚವನ್ನು ದೃಢವಾಗಿ ಜೋಡಿಸುತ್ತಾಳೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/22–23**

**ಸಾಧನದಲ್ಲಿ ಮಹಾಸರಸ್ವತಿಯ ಕ್ರಿಯೆ**

*ನನ್ನ ಇಡೀ ಸತ್ತೆಯಲ್ಲಿ ಶ್ರೀಮಾತೆಯನ್ನು ಆಹ್ವಾನಿಸಿದೆ ಮತ್ತು ಆಗ ನಾನು ಮಹಾಸರಸ್ವತಿಯ ಅವರೋಹಣವನ್ನು ನೋಡಿದೆ. ನನ್ನ ಕರೆಗೆ ಮಹಾಸರಸ್ವತಿಯು ಏಕೆ ಇಳಿದು ಬಂದಳು ಮತ್ತು ನನ್ನ ತಲೆಯ ಮೇಲೆ ಚಕ್ರವು ಏಕೆ ತೆರೆದುಕೊಂಡಿತು? ಇದು ಮಹಾಸರಸ್ವತಿಯ ಕಾರ್ಯವೇ?*

ಇಡೀ ಬಾಹ್ಯ ಪ್ರಕೃತಿಯನ್ನು ಬದಲಾಯಿಸಲೆಂದು ಮೇಲಿನಿಂದ ಬರುವ ಶಕ್ತಿ ಮತ್ತು ಬೆಳಕು ಹಾಗೂ ಅನುಭಾವಗಳು ಈ ಮಹಾಸರಸ್ವತಿಯ ಕಾರ್ಯವೇ ಆಗಿದೆ.

*

ಹೌದು, ವಿವರಗಳ ಸಂಕೀರ್ಣತೆಯಲ್ಲಿ ಎಲ್ಲಾ ಪರಿಪೂರ್ಣತೆಯು ಮಹಾಸರಸ್ವತಿಯ ಸ್ಪರ್ಶವನ್ನು ತೋರಿಸುತ್ತದೆ.

*

ಇದು ಧ್ಯಾನಕ್ಕೆ ಕುಳಿತಾಗ ಉನ್ನತ ಪ್ರಜ್ಞೆಯ ಹಂತದಿಂದ ಹೃದಯದ ಹಂತಕ್ಕೆ ಒಂದು ನದಿಯು ಪ್ರವಹಿಸುತ್ತಿರುವದನ್ನು ನಾನು ನೋಡಿದೆ. ಇಡೀ ಬಾಹ್ಯ ಪ್ರಕೃತಿಯನ್ನು ಬದಲಾಯಿಸಲೆಂದು ಮೇಲಿನಿಂದ ಬರುವ ಶಕ್ತಿ ಮತ್ತು ಬೆಳಕು ಹಾಗು ಅನುಭಾವಗಳು– ಇವೆಲ್ಲವೂ ಮಹಾಸರಸ್ವತಿಯ ಕಾರ್ಯವೇ ಆಗಿದೆ.

*

*ಇಲ್ಲಿ, ನಾವು ನಮ್ಮ ಸಾಧನದಲ್ಲಿ ಕೆಲಸ ಮಾಡುತ್ತಿರುವದು ಬಹುಶಃ ಶ್ರೀಮಾತೆಯವರ ಮಹಾಸರಸ್ವತಿಯ ಅಂಶವಾಗಿದೆಯೇ?*

ಮಹಾಸರಸ್ವತಿಯು ಬಂಗಾರದ ಹಡಗಿನಲ್ಲಿ, ನದಿಯಲ್ಲಿ ಬರುವಾಗ ಬಂಗಾರ ಬಣ್ಣದ ಮತ್ತು ಪ್ರಕಾಶದ ಮೂಲಕವಾಗಿ ಪ್ರಯಾಣಿಸುತ್ತ ಇರುತ್ತಾಳೆ.

*ಹಾಗಾದರೆ ಇದರ ಅರ್ಥವೇನು?*

ಉನ್ನತ ಪ್ರಜ್ಞೆ ಮತ್ತು ಹೃದಯದ ಮಧ್ಯೆ ಚಲಿಸುವದು ಮತ್ತು ಇವುಗಳ ಮೂಲಕ ಮನಸ್ಸು ಮತ್ತು ಪ್ರಾಣ ಹಾಗು ದೇಹ ಪ್ರಕೃತಿಯ ಎಲ್ಲಾ ವಿವರಗಳಲ್ಲಿಯೂ 'ಸತ್ಯದ' ನಿಯಮವನ್ನು ಸ್ಥಾಪಿಸುವದಾಗಿದೆ. ಇದು ಮಹಾಸರಸ್ವತಿಯ ಕಾರ್ಯವಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/72–73**

## ಶ್ರೀಮಾತೆಯವರ ನಾಲ್ಕು ಪದರಗಳ ಕ್ರಿಯೆ

**– ಅನು: ಶ್ರೀಮತಿ ವಿಶಾಲಾಕ್ಷೀ ಸತ್ಯನ್, ಬೆಂಗಳೂರು**

*ನನ್ನ ತಲೆಯ ಮೇಲೆ ಮಹೇಶ್ವರಿ, ಭಾವನಾತ್ಮಕ ಸತ್ತೆಯಲ್ಲಿ ಮಹಾಕಾಳಿ ಹಾಗು ಮನಸ್ಸು ಮತ್ತು ಹೃದಯದಲ್ಲಿ ಮಹಾಲಕ್ಷ್ಮಿಯು ವಿರಾಜಮಾನಳಾಗಿರುವದನ್ನು ನಿನ್ನೆ ರಾತ್ರಿ ನಾನು ನೋಡಿದೆ. ಪ್ರತಿಯೊಬ್ಬರೂ ತಮ್ಮ ದೇಹದಿಂದ ವಿಭಿನ್ನ ಪ್ರಕಾಶವನ್ನು ಹೊರಸೂಸುತ್ತಿದ್ದರು. ನಂತರ ನನ್ನ*

*ಸತ್ತೆಯೊಳಗಡೆಗೆ ಕೆಲವು ಸೂಕ್ಷ್ಮ ಶಕ್ತಿಗಳು ಅವರೋಹಿಸುತ್ತಿರುವದನ್ನು ನೋಡಿದೆ.*

ಮನಸ್ಸಿನ ಮೇಲೆ ಉನ್ನತ ಚೇತನದಲ್ಲಿ ಮಹೇಶ್ವರಿಯ ಸಹಜ ಸ್ಥಾನ. ಏಕೆಂದರೆ ಆಕೆಯು ದಿವ್ಯದ ವಿಶಾಲತೆ, ಅಗಾಧತೆ ಮತ್ತು ಜ್ಞಾನವಾಗಿರುವಳು. ಶಕ್ತಿ ಮತ್ತು ಸಾಮರ್ಥ್ಯದ ಉಪಕರಣವಾದ ಉನ್ನತ ಭಾವನೆಗಳ ಮೂಲಕ ಸಹಜವಾಗಿ ಕ್ರಿಯಾಶೀಲವಾಗಿರುವಳು ಮಹಾಕಾಳಿ. ಮಹಾಲಕ್ಷ್ಮಿಯು ಹೃದಯದ ಮೂಲಕ ಕೆಲಸ ಮಾಡುವಳು. – ಈಗ ನಿನ್ನ ವಿಷಯದಲ್ಲಿ ಆಕೆಯು ಮನಸ್ಸಿನ ಮೂಲಕವೂ ಕ್ರಿಯಾಶೀಲವಾಗಿರುವಳು, ಕೆಲವೊಮ್ಮೆ ಮಾತ್ರ ಹೀಗಾಗುವದು – ಮಹಾಸರಸ್ವತಿಯೇ ಸಾಮಾನ್ಯವಾಗಿ ಅಲ್ಲಿ ಕೆಲಸ ಮಾಡುವಳು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/66**

...ಆಕೆಯು ಮಹಾಸರಸ್ವತಿ, ಆತ್ಮದ ಕಾರ್ಯಗಳು ಮತ್ತು ದಿವ್ಯ ಕೌಶಲದ ಅಧಿದೇವತೆ. ಕಾರ್ಯಗಳಲ್ಲಿನ ಕೌಶಲ, ಯೋಗಃ ಕರ್ಮಸು ಕೌಶಲಮ್, ಜೀವನ ಮತ್ತು ಅದರ ಸಾಮರಸ್ಯಗಳ ಸಂತಸಕ್ಕೆ ದಿವ್ಯ ಜ್ಞಾನದ ಪ್ರಯೋಜನ ಮತ್ತು ಆತ್ಮದ ಸ್ವ–ಉಪಯುಕ್ತತೆಯೇ ಆಕೆಯ ಯೋಗವಾಗಿದೆ. ನಿರಂತರಳಾದ ಈಶ್ವರಿಯ ಪರಮೋತ್ತಮ ಪ್ರಭುತ್ವಗಳ ಭಾಗವನ್ನು ತನ್ನ ಎಲ್ಲಾ ಸಾಮರ್ಥ್ಯಗಳಲ್ಲಿ ಮತ್ತು ರೂಪಗಳಲ್ಲಿ ಆಕೆಯು ಹೊಂದಿರುವಳು. ಉಪಕರಣದಿಂದ ಅಪೇಕ್ಷಿಸುವ ಎಲ್ಲಾ ವಿಧದ ಕ್ರಿಯೆಗಳಿಗೆ ಒಂದು ಶೀಘ್ರ ಮತ್ತು ದಿವ್ಯ ಧಾರಣಾ ಸಾಮರ್ಥ್ಯವನ್ನು ಹೊಂದಿರುವಳು. ಜೊತೆಗೆ ಏಕತ್ವ, ಭಾಗವಹಿಸುವ ಸಹಾನುಭೂತಿ, ಎಲ್ಲಾ ಸತ್ತೆಗಳಲ್ಲಿನ ಎಲ್ಲಾ ಚೈತನ್ಯಗಳೊಂದಿಗೆ ಒಂದು ಸ್ವತಂತ್ರ ಅನನ್ಯತೆ. ವಿಶ್ವದಲ್ಲಿನ ಎಲ್ಲಾ ದಿವ್ಯ ಸಂಕಲ್ಪದೊಂದಿಗೆ ಫಲಯುಕ್ತ ಮತ್ತು ಸ್ವ–ಪ್ರೇರಿತ ಸಾಮರಸ್ಯವನ್ನು ಹೊಂದಿರುವರು. ಶಕ್ತಿಯಲ್ಲಿನ ಶ್ರದ್ಧೆಯ ಅಂತಿಮ ಪರಿಪೂರ್ಣತೆಯು ಯಾವುದೆಂದರೆ ಆಕೆಯ ಸಾನ್ನಿಧ್ಯ ಮತ್ತು ಶಕ್ತಿಗಳ ನಿಕಟ ಭಾವನೆ ಮತ್ತು ಆಕೆಯ ಕಾರ್ಯಗಳ ಒಳಗೆ ಹಾಗು ಸುತ್ತಮುತ್ತಲೂ ನಮ್ಮ ಎಲ್ಲಾ ಸತ್ತೆಯ ತೃಪ್ತಿಕರವಾದ ಅಂಗೀಕಾರ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 24/781**

## ನಾಲ್ಕು ಶಕ್ತಿಗಳಲ್ಲಿ ಕಿರಿಯಳು

*“ಅದರ ಪೂರ್ಣತೆಗೆ.... ಇತರ ಶಕ್ತಿಗಳ ಎಲ್ಲಾ ಕಾರ್ಯವು ಆಕೆಯನ್ನು (ಮಹಾಸರಸ್ವತಿ) ಅವಲಂಬಿಸಿದೆ.”*

ಹೌದು, ಏಕೆಂದರೆ ಪರಿಪೂರ್ಣತೆಯ ಅಧಿದೇವತೆಯು ನಿರ್ದಿಷ್ಟವಾಗಿ (ಮೌನ) ಆಕೆಯೇ.... ಆಗಿರುವಳು. ಆಕೆಗೆ ಅತ್ಯಂತ ಕೊನೆಯ ವಿವರಣೆಯವರೆಗೂ ಎಲ್ಲವನ್ನು ನೆರವೇರಿಸಲೇಬೇಕು. ಜೊತೆಗೆ ಸಮಗ್ರ ಮತ್ತು ಪರಿಪೂರ್ಣವಾದ ಹಾದಿಯಲ್ಲಿ ಮಾಡಬೇಕು. ಭೌತಿಕವಾಗಿ, ಒಟ್ಟಿಗೆ, ವಸ್ತುನಿಷ್ಠವಾಗಿ ಅದನ್ನು ಮಾಡಬೇಕೆಂಬುದು ಆಕೆಯ ಅಪೇಕ್ಷೆ ಮತ್ತು ಒತ್ತಾಯವೂ ಆಗಿದೆ. ಮಾನಸಿಕ ಅಥವಾ ಭಾವನಾತ್ಮಕ ಕ್ರಿಯೆಯಾಗಿ ಅದನ್ನು ಗಾಳಿಯಲ್ಲಿ ಬಿಟ್ಟು ಬಿಡಬಾರದು. ಆದರೆ ಅದರ ಎಲ್ಲಾ ವಿವರಗಳೊಂದಿಗೆ ಭೌತಿಕವಾಗಿ ಅಸ್ತಿತ್ವಕ್ಕೆ ಬರಬೇಕು ಮತ್ತು ಎಲ್ಲಾ ವಿವರಗಳು ಪರಿಪೂರ್ಣವಾಗಿರುವದು ಸಹ ಅವಶ್ಯಕ. ಅಂದರೆ ಯಾವುದನ್ನೂ ನಿರ್ಲಕ್ಷಿಸಬಾರದು. ಹೀಗಾಗಿ ಇತರರ ಸ್ತರಗಳಲ್ಲಿ ಸಿದ್ಧವಾಗುವದೆಲ್ಲವನ್ನೂ ಆಕೆಯು ಸದೃಢಗೊಳಿಸಿ ಅದಕ್ಕೆ ಭೌತಿಕ ಪರಿಪೂರ್ಣತೆಯನ್ನು ನೀಡುವಳು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 6/283**

*ಪ್ರಿಯಮಾತೆ, ನಾಲ್ವರಲ್ಲಿ ಮಹಾಸರಸ್ವತಿಯು ಎಲ್ಲರಿಗಿಂತಲೂ ಏಕೆ ಕಿರಿಯವಳಾಗಿರುವಳು?*

ಏಕೆಂದರೆ ಆಕೆಯ ಕೆಲಸವು ಕೊನೆಯಲ್ಲಿ ಬರುವದು. ಆದುದರಿಂದ ಆಕೆಯು ಕೊನೆಯಲ್ಲಿ ಬರುವಳು. (ಮೌನ) ಇಲ್ಲಿ ನೀಡಿರುವ ಕ್ರಮಕ್ಕೆ ಅನುಗುಣವಾಗಿ ಅವರು ಪ್ರಕಟವಾದರು. ಈ ಅಂಶಗಳು ಶ್ರೀಮಾತೆಯ ಗುಣಗಳ ರೀತಿಯಲ್ಲಿ ಇರುವದು; ಕಾರ್ಯದ ಅವಶ್ಯಕತೆಗಳಿಗೆ ಅನುಗುಣವಾಗಿ ಅವು ಕ್ರಮವಾಗಿ ಪ್ರಕಟವಾಗುವವು. ಮತ್ತು ಪರಿಪೂರ್ಣತೆಯ ಅವಶ್ಯಕತೆಯು ಅಂತಿಮವಾದುದಾಗಿದೆ ಅದುದರಿಂದ ಆಕೆಯೇ ಅತ್ಯಂತ ಕಿರಿಯವಳು.

ಮತ್ತು ಆಕೆಯ ವಿಶಿಷ್ಟ ಸ್ವಭಾವದಲ್ಲಿ, ಆಕೆಯ ಕಂಪನಗಳ ಗುಣವು ಒಂದು ಚಿಕ್ಕ ಮಗುವಿನ ರೀತಿಯಲ್ಲಿ ಇದೆ. ಆಕೆಯು ಯುವಕರನ್ನು, ಮಕ್ಕಳನ್ನು, ನಿರ್ಮಾಣದ

ಘಟ್ಟದಲ್ಲಿರುವ ವಸ್ತುಗಳನ್ನು, ಅಂದರೆ ಪರಿವರ್ತನೆ ಹೊಂದಿ ಪರಿಪೂರ್ಣವಾಗಲು ಇನ್ನೂ ಹೆಚ್ಚು ಕಾಲದ ಅವಶ್ಯಕತೆ ಇರುವವುಗಳನ್ನು ಪ್ರೀತಿಸುವಳು. ಆಕೆಯು ಚಿಕ್ಕವರ ಕ್ರಿಯಾಶೀಲತೆಯನ್ನು ಇಷ್ಟಪಡುವಳು. ಸ್ವಭಾವದಲ್ಲಿ ಆಕೆಯೇ ಎಲ್ಲರಿಗಿಂತಲೂ ಕಿರಿಯವಳು ಮತ್ತು ಕೊನೆಯಲ್ಲಿ ಪ್ರಕಟವಾಗುವಳು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 4/403 – ಶ್ರೀಮಾತೆ**

## ಕಾರ್ಯಗಳಲ್ಲಿ ನೈಜ ಕುಶಲತೆ

ಕಾರ್ಯಗಳಲ್ಲಿನ ಕೌಶಲವೇ ಯೋಗವೆಂದು ಭಗವದ್ಗೀತೆ ಹೇಳುವದು. ಪುರಾತನ ಪವಿತ್ರ ಗ್ರಂಥವು ಮನಸ್ಸು ಮತ್ತು ಸತ್ತೆಯ ಪರಿವರ್ತನೆಯನ್ನೇ ಯೊಗವೆಂದು ಕರೆಯುವದು. ಈ ಯೋಗವು ಅದರೊಂದಿಗೆ ಒಂದು ಪರಿಪೂರ್ಣ ಆಂತರಿಕ ಅವಸ್ಥೆ ಮತ್ತು ಸ್ವಾಭಾವಿಕ ಶಕ್ತಿಯನ್ನು ಹೊರಗೆ ತಂದಿತು. ಅದರಿಂದ ಸಮರ್ಪಕವಾದ ಕ್ರಿಯಾತತ್ತ್ವ ಮತ್ತು ಸಮರ್ಪಕವಾದ ಆಧ್ಯಾತ್ಮಿಕ ಮತ್ತು ದಿವ್ಯ ಕಾರ್ಯಗಳ ಫಲಿತಾಂಶವನ್ನು ಹೊರಹೊಮ್ಮಿಸಿತು. ಇದು ಸಹಜವಾಗಿ ಬೀಜದಿಂದ ಮರವು ವೃದ್ಧಿಸಿದಂತೆ ಇರುವದು. ನಿಜಕ್ಕೂ ಅದು ಬುದ್ಧಿವಂತ ಯೋಧ ಅಥವಾ ರಾಜಕಾರಣಿ ಅಥವಾ ವಕೀಲ ಅಥವಾ ಚಪ್ಪಲಿ ಸಿದ್ಧಪಡಿಸುವವನನ್ನು ಯೋಗಿ ಎಂಬ ಹೆಸರಿನಿಂದ ಕರೆಯುವದಿಲ್ಲ; ಕಾರ್ಯಗಳಲ್ಲಿ ಯಾವುದೇ ವಿಧವಾದ ಪರಿಣತಿಯನ್ನು ಯೋಗವೆಂದು ಕರೆಯಲಿಲ್ಲ. ವಿಶ್ವಾತೀತ ಸಮತ್ವ ಮತ್ತು ದೈವದೊಂದಿಗಿನ ಸಮ್ಮಿಲನದ ಆಧ್ಯಾತ್ಮಿಕ ಅವಸ್ಥೆಯನ್ನು ಅದು ಯೋಗದಿಂದ ಗುರುತಿಸಿತು. ಜೊತೆಗೆ ಅಹಂಕಾರ ಮತ್ತು ಇಂದ್ರಿಯ ಮನಸ್ಸಿನ ಪರಿಮಿತಿಯ ಸಂಕೋಲೆಯಿಂದ ಜೀವವು ಬಿಡುಗಡೆ ಹೊಂದಿರಬೇಕಲ್ಲದೆ ಹೀಗೆ ಸ್ವತಂತ್ರವಾದ ಸ್ವಭಾವದಲ್ಲಿ ದಿವ್ಯ ಮತ್ತು ವಿಶ್ವಾತೀತ ಚೇತನದ ಲಯಬದ್ಧತೆಯನ್ನು ಯೋಗಿಯ ಜೀವ ಮತ್ತು ಅದರ ಉಪಕರಣಗಳು ಅತ್ಯುತ್ತಮವಾಗಿ ಅಂಗೀಕರಿಸಬೇಕು. ಇದನ್ನು ಯೋಗ ಪಟುವು ಕುಶಲತೆಯ ಮೂಲಕ ಸಾಧಿಸಬೇಕು.

ಯೋಗ ಕಾರ್ಯಗಳಲ್ಲಿನ ಅತ್ಯುತ್ಕೃಷ್ಟ ಕೌಶಲವು ಪ್ರಾಣಿ–ಮಾನವನಿಗೆ ಅತ್ಯಧಿಕ ಅಸಮಂಜಸವಾದುದಾಗಿ ಕಾಣಬಹುದು. ಈ ಎಲ್ಲಾ ಕಷ್ಟಕರವಾದ ಸಾಧನೆಗೆ ಎರಡನೆಯದು ಹೇಳುತ್ತದೆ: ನಿನಗೆ ಪ್ರಿಯವಾದುದೇನಕ್ಕೆ ಬೇಕಾದರೊ

ಅದು ಕರೆದುಕೊಂಡು ಹೋಗಬಹುದು, ಆದರೆ ನಾವು ನಮ್ಮ ವೈಯಕ್ತಿಕ ಜೀವನವನ್ನು ಕಳೆದುಕೊಳ್ಳಬೇಕಾಗುವದು, ನಮ್ಮ ವೈಯಕ್ತಿಕ ವಸ್ತುಗಳನ್ನು ತ್ಯಜಿಸಬೇಕು, ನಮ್ಮ ವೈಯಕ್ತಿಕ ಸಂಕಲ್ಪ ಮತ್ತು ಸುಖವನ್ನು ಇಲ್ಲವಾಗಿಸಬೇಕು. ಮತ್ತು ಇವುಗಳಿಲ್ಲದೆ ಜೀವನವು ಬದುಕಲು ಅರ್ಹವಾಗುವದಿಲ್ಲ. ಈಗ ನಮ್ಮ, ಇತರರ ಅಥವಾ ಎಲ್ಲರ ಅತ್ಯುತ್ತಮ ಯೋಗಕ್ಷೇಮವನ್ನು ಕಾಪಾಡುವದೇ ನಿಜಕ್ಕೂ ಎಲ್ಲಾ ಕಾರ್ಯಗಳಲ್ಲಿನ ಕೌಶಲದ ಗುರಿಯಾಗಿದೆ. ಯಾವುದಾದರೂ ಅಶಾಶ್ವತವಾದ ವಸ್ತುವನ್ನು ಕ್ಷಣಕಾಲ ಹಿಡಿದುಕೊಳ್ಳುವದನ್ನೇ ಯೋಗಕ್ಷೇಮವೆಂದು ಸಾಮಾನ್ಯ ಮಾನವನು ಪರಿಗಣಿಸುವನು. ಅದಕ್ಕಾಗಿ ದುಃಖ, ವೇದನೆ ಮತ್ತು ನೋವಿನಿಂದ ಕೂಡಿದ ಸಮುದ್ರವನ್ನು ದಾಟುವನು. ಆದರೆ ಅದೇ ದುಃಖಕರವಾದ ಸಮುದ್ರದಲ್ಲಿ ಒಂದು ಹೊಸ ಕ್ಷಣಿಕ ವಸ್ತುವಿಗಾಗಿ ಪುನಃ ಇನ್ನೂ ಹೆಚ್ಚು ಕೆಳಗೆ ಬೀಳುವನು. ಮನಸ್ಸಿನ ಈ ಕುತಂತ್ರವನ್ನು ಕಂಡುಹಿಡಿದಿರುವದೇ ಯೋಗದ ಅತ್ಯಂತ ಪ್ರಮುಖ ಸಾಧನೆಯಾಗಿದೆ. ಇಷ್ಟೇ ಅಲ್ಲ ಯೋಗವು ಮನಸ್ಸಿನ ಆಸೆಗಳು, ದ್ವೈತಗಳನ್ನು ಅನ್ವೇಷಿಸಿರುವದಲ್ಲದೆ ಸ್ಥಿರವಾದ ಶಾಂತಿ, ವಿಶ್ವಾತೀತ ಆನಂದ, ಎಲ್ಲವನ್ನೂ ಒಳಗೊಂಡ ಸಂತೃಪ್ತಿಗಳ ಕಡೆಗಿನ ಹಾದಿಯನ್ನು ಸಹ ಹುಡುಕಿದೆ. ಈ ಆನಂದವನ್ನು ನಾವು ಅನುಭವಿಸಬಹುದು ಮತ್ತು ಇತರರಿಗೂ ಸಂವಹನ ಮಾಡಬಹುದು. ಅದು ಸಹ ನಮ್ಮ ಸತ್ತೆಯ ಬದಲಾವಣೆಯಿಂದ ಉದ್ಭವಿಸುತ್ತದೆ. ಏಕೆಂದರೆ ಪರಿಶುದ್ಧ ಅಸ್ತಿತ್ವದ ಸತ್ಯವು ತನ್ನೊಳಗೆ ಕಲಬೆರಕೆಯಿಲ್ಲದ ಅಸ್ತಿತ್ವದ ಆನಂದವನ್ನು ಸಹ ಹೊಂದಿರುವದು. ಅನಂತತೆಯ ಸ್ಥಾನದಲ್ಲಿ ಅವುಗಳನ್ನು ಬೇರ್ಪಡಿಸಲಾಗುವದಿಲ್ಲ. ವೈದಿಕ ಋಷಿಗಳ ಚಿತ್ರಣವನ್ನು ಉಪಯೋಗಿಸುವದಾದರೆ, ಯೋಗದಿಂದ ಆಧ್ಯಾತ್ಮಿಕ ಜೀವನದ ವಿಸ್ತೃತ ಆಕಾಶವಾದ ವರುಣನು ನಮ್ಮ ಆಂತರ್ಯದಲ್ಲಿ ಜನಿಸುವನು ಆತನು ತನ್ನ ವಿಶಾಲವಾದ ಅಸ್ತಿತ್ವದಲ್ಲಿ ದಿವ್ಯವಾಗಿದ್ದು ಅನಂತ ಸತ್ಯವೂ ಆಗಿರುವನು. ವಿಸ್ತಾರತೆಯಲ್ಲಿ ಬೆಳಕು ಮತ್ತು ಪ್ರೇಮದ ಅಧಿಪತಿಯಾಗಿರುವ ಮಿತ್ರನು ಅದರೊಳಗೆ ಮೇಲೇಳುವನು. ಆತನು ನಮ್ಮ ಎಲ್ಲಾ ಚಿಂತನೆ, ಭಾವನೆ ಮತ್ತು ಸಂಕಲ್ಪದ ಕ್ರಿಯೆಗಳನ್ನು ತೆಗೆದುಕೊಂಡು ದಿವ್ಯ ಸಾಮರಸ್ಯದೊಂದಿಗೆ ಜೋಡಿಸುವನು. ನಮ್ಮ ಚಲನೆಗೆ ಸಾರಥಿಯಾಗಿ ಕಾರ್ಯಗಳಿಗೆ ಆದೇಶ ನೀಡುವನು. ಈ ವಿಸ್ತಾರತೆ ಮತ್ತು ಸಾಮರಸ್ಯದ ಕೂಗನ್ನು ಆಲಿಸಿ ಆರ್ಯಮಾನ್ ನಮ್ಮೊಳಗೆ ಕಾಣಿಸಿಕೊಳ್ಳುವನು. ಆತನು ತನ್ನ ಪ್ರಕಾಶಭರಿತ ಶಕ್ತಿಯಲ್ಲಿ

ದಿವ್ಯವಾಗಿರುವನು. ಸತ್ತೆಯ ಔನ್ನತ್ಯಕ್ಕೇರಿದ ಶಕ್ತಿಯಾಗಿರುವನು ಮತ್ತು ಎಲ್ಲವನ್ನೂ ತೀರ್ಮಾನಿಸುವ ಪರಿಣಾಮಕಾರಿ ಸಂಕಲ್ಪವಾಗಿರುವನು. ಈ ಮೂರರಿಂದ ಆಂತರ್ಯದಲ್ಲಿರುವ ಭಗನು ಆಗಮಿಸುವನು. ಆತನು ಪರಿಶುದ್ಧ ಮಹದಾನಂದ ಮತ್ತು ಎಲ್ಲವನ್ನೂ ಆಕ್ರಮಿಸುವ ಸಂತಸಗಳ ದಿವ್ಯವಾಗಿರುವನು. ಆತನು ನಮ್ಮ ವಿಭಜಿತ ಅಸ್ತಿತ್ವ ಮತ್ತು ಸಂಕುಚಿತತೆಗಳ ದುಷ್ಟತನವನ್ನು ದೂರ ಸರಿಸುವನು. ಆತನು ಎಲ್ಲಾ ವಸ್ತುಗಳನ್ನು ವರುಣನ ಅಖಂಡತೆ, ಮಿತ್ರನ ಪ್ರೇಮ ಮತ್ತು ಬೆಳಕು, ಆರ್ಯಮಾನನ ಸಾಮರ್ಥ್ಯದ ಪ್ರಕಾಶ ಮತ್ತು ಮಹಿಮೆಗಳೊಂದಿಗೆ ಹೊಂದಿರುವನು. ನಮ್ಮ ಕಾರ್ಯಗಳ ಪುತ್ರನು ಈ ದಿವ್ಯ ಜನ್ಮವೇ ಆಗಿರುವದು. ಇದಕ್ಕಿಂತಲೂ ಹಿರಿದಾದ ಕೌಶಲವು ಇನ್ಯಾವುದಿದೆ? ಅಥವಾ ಇದಕ್ಕಿಂತಲೂ ಮಿಗಿಲಾದ ಪ್ರಾಯೋಗಿಕ ಉತ್ತಮೋತ್ತಮ ನೈಪುಣ್ಯವು ಇರಲು ಸಾಧ್ಯವೇ?

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 13/125–26**

ದಿವ್ಯ ಶಕ್ತಿಯ ಸ್ವಭಾವವು ಇದಾಗಿದೆ. ಅಂದರೆ ಅದು ದಿವ್ಯದ ಕಾಲಾತೀತ ಸಾಮರ್ಥ್ಯ. ವಿಶ್ವದ ಎಲ್ಲಾ ಚಲನೆಗಳು ಮತ್ತು ಕಾರ್ಯಗಳನ್ನು ಅದು ಮುನ್ನಡೆಸುವದು. ಕಾಲಾತೀತವಾದ ಅದು ಕಾಲದಲ್ಲಿ ಸೃಷ್ಟಿಸುವ, ನಿಯೋಜಿಸುವ ಮತ್ತು ಸಂರಕ್ಷಿಸುವ ವಿಶ್ವಾತೀತ ಶಕ್ತಿಯಾಗಿ ಪ್ರಕಟವಾಗುವದು. ಮಾನಸಿಕ, ಭಾವನಾತ್ಮಕ ಮತ್ತು ಭೌತಿಕ ಬ್ರಹ್ಮಾಂಡದ ಚೈತನ್ಯವಾಗಿ ಕೆಳಗಿನ ಹಂತಗಳ ಅಸ್ತಿತ್ವದಲ್ಲಿ ಮೊದಲಿಗೆ ಈ ವಿಶ್ವಾತೀತ ಶಕ್ತಿಯು ಗೋಚರಿಸುವದು. ನಮ್ಮ ಎಲ್ಲಾ ಮಾನಸಿಕ, ಭಾವನಾತ್ಮಕ ಮತ್ತು ಭೌತಿಕ ಚಟುವಟಿಕೆಗಳೇ ಅದರ ಕಾರ್ಯಾಚರಣೆಗಳಾಗಿವೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 23/762 – ಶ್ರೀ ಅರವಿಂದರು**

## ಸ್ವಯಂಭಾವದ ಪರಿಪೂರ್ಣತೆಗೆ ಪ್ರಥಮ ಹೆಜ್ಜೆ

ನಮ್ಮನ್ನು ಪರಿಪೂರ್ಣಗೊಳಿಸಲು ನಾವು ಮೊದಲು ನಮ್ಮ ಬಗ್ಗೆ ಜಾಗರೂಕರಾಗಬೇಕು. ಉದಾಹರಣೆಗೆ, ನಿಮ್ಮ ಈ ಕೆಳಗಿನ ಸಂದರ್ಭವು ಅನೇಕ ಸಲ ಉಂಟಾಗಿರಬಹುದು (ಖಂಡಿತವಾಗಿಯೂ ಸಂಭವಿಸಿರುವದು) ನಿಮ್ಮನ್ನು

ಯಾರಾದರೂ ಇದ್ದಕ್ಕಿದ್ದಂತೆ ಈ ರೀತಿ ಪ್ರಶ್ನಿಸಿದಾಗ, "ನೀನು ಆ ರೀತಿ ಯಾಕೆ ಮಾಡಿದೆ", ನಿಮ್ಮ ತಕ್ಷಣದ ಉತ್ತರ, "ನನಗೆ ಗೊತ್ತಿಲ್ಲ". ಯಾರಾದರೂ ನಿಮ್ಮನ್ನು, "ನೀನು ಯಾವುದರ ಬಗ್ಗೆ ಯೋಚಿಸುತ್ತಿರುವೆ?" ಎಂದು ಪ್ರಶ್ನಿಸಿದರೆ ನಿಮ್ಮ ಉತ್ತರ, "ನನಗೆ ಗೊತ್ತಿಲ್ಲ". "ನೀನೇಕೆ ಆಯಾಸಗೊಂಡಿರುವೆ?" – ನನಗೆ ಗೊತ್ತಿಲ್ಲ, "ನೀನೇಕೆ ಸಂತೋಷವಾಗಿರುವೆ?" – ನನಗೆ ಗೊತ್ತಿಲ್ಲ; ಮತ್ತು ಮುಂತಾದವು. ನಾನು ನಿಜಕ್ಕೂ ಐವತ್ತು ಜನರನ್ನು ಕರೆದು ಅವರನ್ನು ಇದ್ದಕ್ಕಿದ್ದಂತೆ ಯಾವ ಸಿದ್ಧತೆಯೂ ಇಲ್ಲದೆ "ನೀನೇಕೆ ಅದನ್ನು ಮಾಡಿದೆ?" ಎಂದು ಪ್ರಶ್ನಿಸಿದರೆ ಅವರು ಆಂತರಿಕವಾಗಿ "ಜಾಗೃತ"ರಾಗಿಲ್ಲದಿದ್ದರೆ "ನನಗೆ ಗೊತ್ತಿಲ್ಲ" ಎಂದೇ ಉತ್ತರಿಸುವರು (ಸ್ವ–ಜ್ಞಾನದ ಆಯಾಮವನ್ನು ಅಭ್ಯಾಸ ಮಾಡಿ ಅದರ ಚಲನೆಯ ಅಂತಿಮ ಘಟ್ಟವನ್ನು ತಲುಪಿದವರ ಬಗ್ಗೆ ನಾನು ಮಾತನಾಡುತ್ತಿಲ್ಲ. ಈ ಜನರು, ಸಹಜವಾಗಿ ತಮ್ಮನ್ನು ತಾವು ಹತೋಟಿಯಲ್ಲಿ ಇಟ್ಟುಕೊಂಡಿರುವರು. ಹೀಗಾಗಿ ತಮ್ಮ ಗಮನವನ್ನು ಕೇಂದ್ರೀಕರಿಸಿ ಸಮರ್ಪಕವಾದ ಉತ್ತರವನ್ನು ನೀಡುವರು, ಆದರೆ ಸ್ವಲ್ಪ ಸಮಯದ ನಂತರ). ನಿಮ್ಮ ಇಡೀ ದಿನದ ಕಾರ್ಯಕ್ರಮಗಳನ್ನು ನೀವು ಅವಲೋಕಿಸಿದರೆ ಅದು ಹಾಗೆಯೇ ಇರುವದೆಂದು ತಿಳಿಯುವದು. ನೀವು ಏನನ್ನೋ ಹೇಳುವಿರಿ ಹಾಗೇಕೆ ಹೇಳಿದಿರೆಂದು ನಿಮಗೆ ಗೊತ್ತಿಲ್ಲ – ನೀವು ಹೇಳಬೇಕೆಂದಿದ್ದ ಮಾತುಗಳು ಅವಲ್ಲವೆಂದು ಪದಗಳು ನಿಮ್ಮ ಬಾಯಿಂದ ಹೊರಬಂದ ಮೇಲೆ ನಿಮಗೆ ತಿಳಿಯುವದು. ಉದಾಹರಣೆಗೆ, ನೀವು ಯಾರನ್ನೋ ಭೇಟಿ ಮಾಡಲು ಹೋಗುವಿರಿ, ನೀವು ಹೇಳಬೇಕೆಂದಿರುವ ಮಾತುಗಳ ಬಗ್ಗೆ ಸಿದ್ಧತೆಯನ್ನು ಮಾಡಿಕೊಳ್ಳುವಿರಿ, ಆದರೆ ನೀವು ಆ ವ್ಯಕ್ತಿಯ ಮುಂದೆ ನಿಂತಾಗ, ನಾವು ಏನನ್ನೂ ಹೇಳುವದಿಲ್ಲ, ಅಥವಾ ನೀವು ಬೇರೇನನ್ನೋ ನುಡಿಯುವಿರಿ. ಎಷ್ಟರಮಟ್ಟಿಗೆ ಆ ವ್ಯಕ್ತಿಯ ವಾತಾವರಣವು ನಿಮ್ಮ ಮೇಲೆ ಪ್ರಭಾವ ಬೀರಿ ಸಿದ್ಧಪಡಿಸಿಕೊಂಡಿದ್ದ ಮಾತುಗಳನ್ನು ಹೇಳದಂತೆ ಮಾಡಿತು ಎಂಬುದನ್ನು ನೀವು ಹೇಳಬಲ್ಲಿರಾ? ಎಷ್ಟು ಜನರಿಗೆ ಅದನ್ನು ಹೇಳಲು ಸಾಧ್ಯ? ಆ ಮನುಷ್ಯನು ಇದ್ದ ಅವಸ್ಥೆಯನ್ನು ಅವರು ಗಮನಿಸಿಯೇ ಇರುವದಿಲ್ಲ ಮತ್ತು ಅದರಿಂದ ಆ ವ್ಯಕ್ತಿಗೆ ತಾವು ಸಿದ್ಧಪಡಿಸಿಕೊಂಡಿದ್ದ ಮಾತುಗಳನ್ನು ಹೇಳಲಾಗಲಿಲ್ಲ ಎಂದು ಅವರ ಅರಿವಿಗೆ ಬರುವದೇ ಇಲ್ಲ. ಆದರೆ, ಜನರು ಕೆಲವೊಮ್ಮೆ ಬಹಳ ಕೆಟ್ಟ ಮನೋಭಾವವನ್ನು ಹೊಂದಿರುವಾಗ ಸ್ಪಷ್ಟವಾಗಿ ಅವರನ್ನು ಏನೋ ಕೇಳಲಾಗುವದಿಲ್ಲ. ಇದು ಸುಸ್ಪಷ್ಟ. ನಾನು ಅವುಗಳ ಬಗ್ಗೆ ಮಾತನಾಡುತ್ತಿಲ್ಲ. ನಾನು

ಬದಲಾಗಿ ಬರುವ (ಅಥವಾ ಪ್ರತಿಯಾಗಿ ಬರುವ) ಪ್ರಭಾವಗಳ ಪ್ರತ್ಯಕ್ಷಾನುಭವದ ಬಗ್ಗೆ ಮಾತನಾಡುತ್ತಿರುವೆ:

ನಿನ್ನ ಸ್ವಭಾವದ ಮೇಲೆ ಯಾವುದು ಕ್ರಿಯಾಶೀಲವಾಗುವದು ಮತ್ತು ಪ್ರತಿಕ್ರಿಯೆ ನೀಡುವದು; ಇದನ್ನೇ ನಾವು ಹೊಂದಿರುವದಿಲ್ಲ. ಉದಾಹರಣೆಗೆ ಒಬ್ಬನು ಇದ್ದಕ್ಕಿದ್ದಂತೆ ಅಸಮಾಧಾನಗೊಳ್ಳುವನು ಅಥವಾ ಸಂತಸಗೊಳ್ಳುವನೆಂದುಕೊಳ್ಳಿ. “ಅದು ಇದಕ್ಕಾಗಿ”? ಎಂದು ಎಷ್ಟು ಜನರು ಹೇಳಬಲ್ಲರು? ಮತ್ತು ಅದನ್ನು ತಿಳಿದುಕೊಳ್ಳುವದು ಕಷ್ಟಕರ, ಅದು ಸುಲಭವಲ್ಲವೇ ಅಲ್ಲ. ಅದಕ್ಕೆ ಯಾರಾದರೂ “ಜಾಗರೂಕರಾಗಿರಬೇಕು”. ಅದಕ್ಕೆ ನಾವು ನಿರಂತರವಾಗಿ ಬಹಳ ಕೇಂದ್ರೀಕೃತ ಅವಲೋಕನದ ಅವಸ್ಥೆಯಲ್ಲಿ ಇರಬೇಕು. ದಿನಕ್ಕೆ ಹನ್ನೆರಡು ಗಂಟೆಗಳ ಕಾಲ ನಿದ್ದೆ ಮಾಡಿ ಉಳಿದ ಸಮಯದಲ್ಲಿ “ನಾನು ಜಾಗರೂಕನಾಗಿರುವೆ” ಎಂದು ಹೇಳುವ ಜನರು ಇರುವರು: ದಿನಕ್ಕೆ 20 ಗಂಟೆಗಳ ಕಾಲ ನಿದ್ದೆ ಮಾಡುವ ಜನರು ಇರುವರು. ಆದರೆ ಉಳಿದ ಸಮಯದಲ್ಲಿ ಅವರು ಅರ್ಧಂಬರ್ಧ ಜಾಗರೂಕರಾಗಿರುವರು.

ಈ ಕೇಂದ್ರೀಕೃತ ಅವಲೋಕನದ ಅವಸ್ಥೆಯಲ್ಲಿ ಇರಲು, ನಿನ್ನ ನೈಜ ಚೇತನದ ಕೇಂದ್ರದೊಂದಿಗೆ ನಿರಂತರವಾದ ಸಂಪರ್ಕವನ್ನು ಹೊಂದಿರುವ ಸ್ಪರ್ಶ ಕಂತುಗಳನ್ನು ಎಲ್ಲೆಡೆ ಹೊಂದಿರಬೇಕು. ನೀನು ಆಗ ಎಲ್ಲೆಡೆ ದಾಖಲಿಸುವೆ ನೀನು ಎಲ್ಲವನ್ನೂ ವ್ಯವಸ್ಥಿತಗೊಳಿಸುವೆ ಮತ್ತು ಈ ರೀತಿ ನೀನು ಜಾಗೃತನಾಗಿ ಇಲ್ಲದಿರುವದಿಲ್ಲ, ನಿನಗೆ ಮೋಸ ಮಾಡಲಾಗುವದಿಲ್ಲ, ನಿನ್ನನ್ನು ತಪ್ಪು ತಿಳಿಯಲಾಗುವುದಿಲ್ಲ ಮತ್ತು ನೀನು ಏನನ್ನು ಹೇಳಬೇಕೆಂದಿದ್ದೆಯೋ ಅದನ್ನು ಬಿಟ್ಟು ಬೇರೇನನ್ನೂ ಹೇಳಲು ಸಾಧ್ಯವಾಗುವದಿಲ್ಲ. ಆದರೆ ಈ ಅವಸ್ಥೆಯಲ್ಲಿ ಸಾಮಾನ್ಯವಾಗಿ ಎಷ್ಟು ಜನರು ಜೀವಿಸಿರುವರು? “ಜಾಗೃತನಾಗುವದು” ಎಂದು ಹೇಳಿದಾಗ ನನ್ನ ಅರ್ಥ ನಿರ್ದಿಷ್ಟವಾಗಿ ಇದೇ ಆಗಿರುವದು. ನೀನಿರುವ ಪರಿಸ್ಥಿತಿಗಳು ಮತ್ತು ಸಂದರ್ಭಗಳಿಂದ ಅತ್ಯಧಿಕ ಲಾಭ ಪಡೆಯಬೇಕಾದರೆ, ನೀನು ಸಂಪೂರ್ಣವಾಗಿ ಜಾಗೃತನಾಗಿರಬೇಕು. ನೀನು ಆಶ್ಚರ್ಯದಿಂದ ಏನನ್ನೂ ಎದುರಿಸುವಂತಾಗಬಾರದು, ಏಕೆ ಮಾಡುತ್ತಿರುವೆನೆಂದು ತಿಳಿಯದೆ ಏನನ್ನೂ ಮಾಡಬಾರದು. ನೀನು ನಿರಂತರವಾಗಿ ಜಾಗೃತನಾಗಿರಬೇಕು. ನೀನು ವಿಭಿನ್ನ ವ್ಯಕ್ತಿತ್ವವಲ್ಲ ಎಂದು ಅರ್ಥ ಮಾಡಿಕೊಂಡಿರಬೇಕು; ಜೀವನವು ಎಲ್ಲಾ ವಿಧದ

ಶಕ್ತಿಗಳು, ಪ್ರಜ್ಞೆಗಳು, ಕಂಪನಗಳು ಮತ್ತು ಚಲನೆಗಳ ನಿರಂತರವಾದ ವಿನಿಮಯವಾಗಿದೆ. ನೀನು ಗಮನಿಸು: ಇದು ಒಂದು ಜನ ಸಂದಣಿಯಲ್ಲಿ ಇದ್ದಂತೆ ಇರುವದು. ಪ್ರತಿಯೊಬ್ಬರೂ ನೂಕಿದಾಗ ಎಲ್ಲರೂ ಮುಂದೆ ಸಾಗುವರು. ಎಲ್ಲರೂ ಹಿಂದೆ ಸರಿದಾಗ ಪ್ರತಿಯೊಬ್ಬರೂ ಹಿಂದುಗಡೆಗೆ ಹೋಗುವರು. ಆಂತರಿಕ ಜಗತ್ತಿನಲ್ಲೂ ಇದೇ ರೀತಿ ಆಗುವದು. ನಿನ್ನ ಚೇತನದಲ್ಲೂ ಇದೇ ರೀತಿ ಆಗುವದು. ನಿನ್ನ ಮೇಲೆ ಕ್ರಿಯಾಶೀಲವಾಗಿ ಪ್ರತಿಕ್ರಿಯಿಸುತ್ತಿರುವ ಶಕ್ತಿಗಳು ಮತ್ತು ಪ್ರಭಾವಗಳು ಎಲ್ಲಾ ಕಾಲದಲ್ಲೂ ಇರುವವು. ಅದು ವಾತಾವರಣದಲ್ಲಿ ಇರುವ ಒಂದು ಅನಿಲದಂತೆ ಇದೆ. ನೀನು ಜಾಗೃತನಾಗಿ ಇರದೆ ಇದ್ದರೆ, ಈ ವಿಷಯಗಳು ನಿನ್ನ ಒಳಗಡೆಗೆ ಪ್ರವೇಶಿಸುವವು. ಅವು ಆಂತರಿಕವಾಗಿ ಬಹಳ ಒಳಗೆ ಹೋಗಿ, ನಿನ್ನಿಂದಲೇ ಬಂದಂತೆ ಹೊರಗೆ ಬಂದಾಗ ನೀನು ಅವುಗಳ ಬಗ್ಗೆ ಜಾಗೃತನಾಗುವೆ. ಅನೇಕ ಸಲ ಜನರು ಮನೋದೌರ್ಬಲ್ಯದಿಂದೊಡಗೂಡಿರುವ, ಕೋಪಗೊಂಡ ಅಥವಾ ಕೆಟ್ಟದಾದ ಮನೋಭಾವವನ್ನು ಹೊಂದಿರುವ ಜನರನ್ನು ಭೇಟಿಯಾದಾಗ ಸ್ವತಃ ತಾವೇ ಮನೋದೌರ್ಬಲ್ಯ, ಕೋಪ ಅಥವಾ ದುಷ್ಟ ಮನೋಭಾವವನ್ನು ಹೊಂದುವರು. ಅದಕ್ಕೇನು ಕಾರಣ ಎಂದು ಅವರಿಗೆ ಗೊತ್ತಾಗುವದೇ ಇಲ್ಲ. ಕೆಲವು ನಿರ್ದಿಷ್ಟ ವ್ಯಕ್ತಿಗಳ ಎದುರಾಗಿ ನೀನು ಬಹಳ ಚೆನ್ನಾಗಿ ಆಟವಾಡುವೆ. ಇತರರ ಎದುರಾಗಿ ಅಷ್ಟೇ ಚೆನ್ನಾಗಿ ಏಕೆ ಆಟವಾಡಲು ಆಗುವದಿಲ್ಲ? ಅದೇ ಶಾಂತವಾದ ಜನರು, ಕೆಟ್ಟವರಾಗಿಲ್ಲದೆ ಇರುವವರು ಕ್ರೋಧಭರಿತ ಜನರ ಗುಂಪಿನಲ್ಲಿದ್ದಾಗ ಇದ್ದಕ್ಕಿದ್ದಂತೆ ಕೋಪಗೊಳ್ಳುವರು! ಆ ವಾತಾವರಣವು ಯಾರಿಂದ ಪ್ರಾರಂಭವಾಯಿತು ಎಂಬುದು ಯಾರಿಗೂ ತಿಳಿದಿರುವದಿಲ್ಲ. ಅದು ನಿನ್ನ ಚೇತನದ ಮೇಲೆ ಹಾದು ಅದನ್ನು ಸೆಳೆದುಕೊಂಡು ಹೋಯಿತು. ಈ ರೀತಿಯಾಗಿ ಕಂಪನಗಳನ್ನು ಹೊರಹೊಮ್ಮಿಸಬಲ್ಲ ಜನರು ಇರುವರು ಮತ್ತು ಇತರರು ಏಕೆಂದು ತಿಳಿಯದೆ ಅದಕ್ಕೆ ಪ್ರತಿಕ್ರಿಯಿಸುವರು. ಅತ್ಯಂತ ಚಿಕ್ಕದರಿಂದ ಪ್ರಾರಂಭಿಸಿ ಅತ್ಯಂತ ದೊಡ್ಡದರವರೆಗೂ ಹಾಗೇ. ಒಂದು ಸಮೂಹದಲ್ಲಿ ವಿಶಿಷ್ಟವೆನಿಸಲು, ಯಾರಾದರೂ ಆತ್ಮದ ಬಗ್ಗೆ ಸಂಪೂರ್ಣವಾಗಿ ಜಾಗೃತರಾಗಿರಬೇಕು. ಮತ್ತು ಯಾವ ಆತ್ಮದ ಬಗ್ಗೆ? – ಎಲ್ಲಾ ಪರಸ್ಪರ ಮಿಶ್ರಣದ ಮೇಲಿರುವ ಆತ್ಮ, ಅಂದರೆ, ಅದನ್ನೇ ನಾನು ನಿನ್ನ ಸತ್ತೆಯ ಸತ್ಯ ಎಂದು ಕರೆಯುವರು. ನಿನ್ನ ಸತ್ತೆಯ ಸತ್ಯದ ಬಗ್ಗೆ ನೀನು ಜಾಗೃತನಾಗಿಲ್ಲದೆ ಇರುವವರೆಗೂ ಎಲ್ಲಾ ವಿಧವಾದ ವಿಷಯಗಳು ನೀನು ಚಲಿಸುವಂತೆ ಮಾಡುವವು. ನೀನು

ಅವುಗಳನ್ನು ಗಮನಿಸುವದೇ ಇಲ್ಲ. ಸಮೂಹ ಚಿಂತನೆ, ಸಮೂಹ ಸೂಚನೆಗಳು ವ್ಯಕ್ತಿಗತ ಚಿಂತನೆಯ ಮೇಲೆ ತೊರೆಯಲಾಗದ ಪ್ರಭಾವವನ್ನು ಬೀರುವವು. ಮತ್ತು ಅವು ನಿರಂತರವಾಗಿ ಕ್ರಿಯಾಶೀಲವಾಗಿರುವವು. ಆದರೆ ಅಸಾಮಾನ್ಯವಾದ ಸಂಗತಿಯೇನೆಂದರೆ ನಾವು ಅದರ ಕಡೆ ದೃಷ್ಟಿಹರಿಸುವದೇ ಇಲ್ಲ. ನಾವು ಯೋಚಿಸುವದು "ಅದೇ ತರಹ" ಎಂಬುದು ನಮ್ಮ ನಂಬಿಕೆಯಾಗಿದೆ. ಆದರೆ ನಿಜಕ್ಕೂ "ಆ ರೀತಿ" ಯೋಚಿಸುತ್ತಿರುವದು ಸಮೂಹ. ವ್ಯಕ್ತಿಗಿಂತಲು ಗುಂಪು ಯಾವಾಗಲೂ ಕೆಳಮಟ್ಟದಲ್ಲಿ ಇರುವದು. ಒಂದೇ ತರಹದ ಗುಣ ವಿಶೇಷಗಳನ್ನು ಹೊಂದಿರುವ ಒಂದೇ ರೀತಿಯ ವರ್ಗೀಕರಣಕ್ಕೆ ಸೇರಿದ ವ್ಯಕ್ತಿಗಳನ್ನು ಗಮನಿಸಿ. ಅವರು ಗುಂಪಿನಲ್ಲಿ ಇರುವದಕ್ಕಿಂತ ವ್ಯಕ್ತಿಗತವಾಗಿ ಎರಡು ಹೆಜ್ಜೆ ಮೇಲಿರುವದಲ್ಲದೆ ಹೆಚ್ಚು ಉತ್ತಮವೆನಿಸುವರು.

ಅಸ್ಪಷ್ಟತೆಯ ಮಿಶ್ರಣವು ಇದೆ. ಪ್ರಜ್ಞಾರಹಿತತೆಯ ಮಿಶ್ರಣವೂ ಇದೆ. ಈ ಪ್ರಜ್ಞಾರಹಿತತೆಯೊಳಗೆ ನೀನು ಅಪರಿಹಾರ್ಯವಾಗಿ ಜಾರಿ ಬೀಳುವೆ. ಇದರಿಂದ ತಪ್ಪಿಸಿಕೊಳ್ಳಲು ಒಂದೇ ಒಂದು ಮಾರ್ಗವಿದೆ: ನಿನ್ನ ಬಗ್ಗೆ ನೀನು ಜಾಗೃತನಾಗುವದೇ ಆ ಮಾರ್ಗ. ಹೆಚ್ಚು ಹೆಚ್ಚು ಜಾಗೃತನಾಗುವದು ಮತ್ತು ಹೆಚ್ಚು ಹೆಚ್ಚು ಕೇಂದ್ರೀಕೃತನಾಗುವದು.

ಈ ಸಣ್ಣ ಪ್ರಯೋಗವನ್ನು ಪ್ರಯತ್ನಿಸು: ದಿನದ ಪ್ರಾರಂಭದಲ್ಲಿ, ಈ ರೀತಿ ಹೇಳು: "ಏನು ಹೇಳುತ್ತಿರುವೆನೆಂಬುದರ ಬಗ್ಗೆ ಯೋಚಿಸದೆ ನಾನು ಮಾತನಾಡುವದಿಲ್ಲ". "ನೀನು ನಂಬುವೆ, ಅಲ್ಲವೇ, ನೀನು ಹೇಳುವದೆಲ್ಲದರ ಬಗ್ಗೆ ಯೋಚಿಸಿಯೇ ನುಡಿಯುವೆಯೆಂದು ತಿಳಿಯುವೆ! ಅದು ನಿಜವಲ್ಲವೇ ಅಲ್ಲ; ಅನೇಕ ಸಲ ನೀನು ಹೇಳಬಾರದೆಂದಿರುವ ಪದವು ಹೊರ ಬರಲು ಸಿದ್ಧವಾಗಿರುವದನ್ನು ನೀನು ಕಾಣುವೆ. ಮತ್ತು ಅದು ಹೊರ ಬರದಿರಲು ನೀನು ಪ್ರಜ್ಞಾಪೂರ್ವಕವಾಗಿ ಒತ್ತಾಯಿಸಬೇಕಾಗುವದು.

ಸುಳ್ಳು ಹೇಳದೆ ಇರುವ ಬಗ್ಗೆ, ಸಣ್ಣ ಪುಟ್ಟ ವಿಷಯಗಳಿಗೂ ಗಮನಕೊಡುವ ಜನರನ್ನು ನಾನು ಬಲ್ಲೆ, ಆದರೆ ಇದ್ದಕ್ಕಿದ್ದಂತೆ, ಒಂದು ಗುಂಪಿನ ಜೊತೆಯಲ್ಲಿ ಇರುವಾಗ, ಸತ್ಯವನ್ನು ನುಡಿಯುವದರ ಬದಲು ಅವರು ತತ್‌ಕ್ಷಣದಲ್ಲಿ ಸುಳ್ಳು ಹೇಳುವರು. ಅವರಿಗೆ ಆ ರೀತಿ ಸುಳ್ಳು ಹೇಳಬೇಕು ಎಂಬ ಮನಸ್ಸಿರಲಿಲ್ಲ. ಆದರೆ

ಸುಳ್ಳು ಹೇಳುವದಕ್ಕೆ ಒಂದು ಕ್ಷಣ ಮೊದಲು ಯೋಚಿಸಿರಲಿಲ್ಲ; ಹೀಗಾಗಿ "ಅದು ಹಾಗೆ" ಹೊರಹೊಮ್ಮಿತು. ಯಾಕೆ? ಏಕೆಂದರೆ ಅವರು ಸುಳ್ಳು ಹೇಳುವವರ ಸಹವಾಸದಲ್ಲಿ ಇದ್ದರು; ಅಲ್ಲಿ ಸುಳ್ಳಿನ ವಾತಾವರಣವಿದ್ದತು. ಅವರು ಸಹಜವಾಗಿ ಆ ಉಪದ್ರವಕ್ಕೆ ಒಳಗಾಗಿದ್ದರು! ಈ ರೀತಿ ಒಂದಾದ ಮೇಲೊಂದರಂತೆ, ನಿಧಾನವಾಗಿ, ದೃಢ ನಿಷ್ಠೆಯೊಂದಿಗೆ, ಮೊದಲಿಗೆ ಅತ್ಯಧಿಕವಾದ ಗಮನದಿಂದ, ನಾವು ಪ್ರಜ್ಞಾಭರಿತರಾಗಬಹುದು, ನಮ್ಮ ಬಗ್ಗೆ ಅರಿತು ನಮ್ಮ ಒಡೆಯರಾಗಬಹುದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 4/34–36 – ಶ್ರೀಮಾತೆ**

# ಕರ್ಮದ ನೈಜ–ಪ್ರಾಣ

**– ಅನು: ಡಾ॥ ಮಹಾದೇವ ಸಕ್ರಿ, ವಿಜಯಪುರ**

**ಕೆಲಸದ ನಿಜವಾದ ಸ್ಫೂರ್ತಿ**

ಅಹಂಕಾರ ಮತ್ತು ಅಜ್ಞಾನದಲ್ಲಿ ಮಾಡಿದ, ಆತ್ಮ ತೃಪ್ತಿಗಾಗಿ ಮತ್ತು ರಾಜಸಿಕ ಬಯಕೆಯ ಒತ್ತಡದಲ್ಲಿ ಮಾಡಿದ ಕರ್ಮವೆಂದು ನನ್ನ ಅರ್ಥವಲ್ಲ. ಅಹಂಕಾರ, ರಜೋಗುಣ ಮತ್ತು ಆಸೆಗಳನ್ನು ತೊರೆಯುವ ಇಚ್ಛೆ ಇಲ್ಲದೆ ಕರ್ಮ ಯೋಗ ಸಾಧ್ಯವಿಲ್ಲ, ಇವುಗಳೆಲ್ಲ ಅಜ್ಞಾನದ ಮುದ್ರೆಗಳಾಗಿವೆ.

ನಾನು ಪರೋಪಕಾರ ಬುದ್ಧಿ ಅಥವಾ ಮಾನವತೆಯ ಸೇವೆ ಅಥವಾ ಮನುಷ್ಯನ ಕಾರ್ಯಗಳ ಗಹನವಾದ ಸತ್ಯಕ್ಕೆ ಬದಲಾಗಿ ಸೇರಿಸುವ ಇನ್ನಿತರೇ ವಿಷಯಗಳ – ನೈತಿಕ ಅಥವಾ ಆದರ್ಶವಾದ – ಇವುಗಳ ಬಗ್ಗೆ ಮಾತನಾಡುತ್ತಿಲ್ಲ. ಭಗವಂತನಿಗಾಗಿ ಮಾಡಿದ ಕರ್ಮ ಮತ್ತು ಭಗವಂತನೊಡನೆ ಒಂದಾಗುವಲ್ಲಿ ಹೆಚ್ಚಾಗಿ ಮಾಡಿದ ಕರ್ಮ – ಭಗವಂತನಿಗಾಗಿ ಮಾಡಿದ ಕರ್ಮ ಮಾತ್ರ ಎಂದು ನನ್ನ ಅರ್ಥ. ಸಹಜವಾಗಿಯೇ, ಆರಂಭದಲ್ಲಿ ಅದು ಸುಲಭವಲ್ಲ, ಹೇಗೆ ಆಳವಾದ ಧ್ಯಾನ ಮತ್ತು ಪ್ರಕಾಶಮಾನವಾದ ಜ್ಞಾನ ಸುಲಭವಲ್ಲವೋ ಅಥವಾ ನಿಜವಾದ ಪ್ರೀತಿ ಮತ್ತು ಭಕ್ತಿ ಕೂಡ ಸುಲಭವಲ್ಲವೋ ಹಾಗೆಯೇ ಆರಂಭದಲ್ಲಿ ಅದು ಸುಲಭವಲ್ಲ. ಆದರೆ ಬೇರೆಯವರ ಹಾಗೆ ಇದನ್ನು ಸರಿಯಾದ ಸ್ಫೂರ್ತಿ ಮತ್ತು ಮನೋಭಾವದೊಂದಿಗೆ ಪ್ರಾರಂಭ ಮಾಡಬೇಕು, ನಿಮ್ಮಲ್ಲಿ ಸರಿಯಾದ ಇಚ್ಛೆ ಇರಬೇಕು, ಆಮೇಲೆ ಉಳಿದವುಗಳೆಲ್ಲಾ ಬರುತ್ತದೆ.

ಈ ಉತ್ಸಾಹದಲ್ಲಿ ಮಾಡಿದ ಕಾರ್ಯಗಳು ಭಕ್ತಿ ಅಥವಾ ಧ್ಯಾನದಷ್ಟೇ ಪರಿಣಾಮಕಾರಿಯಾಗಿವೆ. ಬಯಕೆ, ರಾಜಸಿಕ ಗುಣ ಮತ್ತು ಅಹಂಕಾರವನ್ನು ತ್ಯಜಿಸುವುದರಿಂದ ಅನಿರ್ವಚನೀಯ ಶಾಂತಿಯು ಕೆಳಗಿಳಿಯಬಹುದಾದ ಶಾಂತತೆಯನ್ನು ಹಾಗೂ ಪರಿಶುದ್ಧತೆಯನ್ನು ನಾವು ಪಡೆಯುತ್ತೇವೆ; ನಾವು ನಮ್ಮ ಇಚ್ಛೆಯನ್ನು ಭಗಂತನಿಗೆ ಸಮರ್ಪಿಸುವ ಮೂಲಕ, ನಮ್ಮ ಇಚ್ಛೆಯನ್ನು ದೈವೀ ಇಚ್ಛೆಯಲ್ಲಿ ವಿಲೀನಗೊಳಿಸುವ ಮೂಲಕ ಅಹಂಕಾರದ ನಾಶವನ್ನು ಮತ್ತು ಬ್ರಹ್ಮಾಂಡ ಪ್ರಜ್ಞೆಯಲ್ಲಿ ವಿಸ್ತರಿಸುವ ಇಲ್ಲವೆ ಬ್ರಹ್ಮಾಂಡಕ್ಕಿಂತ ಯಾವುದು ಮೇಲಿರುವುದೋ ಅದರ ಕಡೆಗಿನ ಮೇಲಿನ ಹಂತವನ್ನು ಪಡೆಯುತ್ತೇವೆ; ನಾವು, ಪುರುಷ ಮತ್ತು ಪ್ರಕೃತಿಯ ಬೇರ್ಪಡುವಿಕೆಯನ್ನು ಅನುಭವಿಸುತ್ತೇವೆ ಮತ್ತು ಬಾಹ್ಯ ಪ್ರಕೃತಿಯ ಬಂಧನಗಳಿಂದ ಮುಕ್ತರಾಗುತ್ತೇವೆ; ನಾವು ನಮ್ಮ ಅಂತಃಪುರುಷನ ಬಗ್ಗೆ ಜಾಗೃತರಾಗುತ್ತೇವೆ ಮತ್ತು ಬಾಹ್ಯ ಪುರುಷನನ್ನು ಒಂದು ಉಪಕರಣವಾಗಿ ಅನುಭವಿಸುತ್ತೇವೆ; ವಿಶ್ವ ಶಕ್ತಿಯು ನಮ್ಮ ಕಾರ್ಯಗಳನ್ನು ಮಾಡುತ್ತಿರುವುದನ್ನು ನಾವು ಅನುಭವಿಸುತ್ತೇವೆ ಮತ್ತು ನಮ್ಮ ಆತ್ಮ ಅಥವಾ ಪುರುಷನು ಇದನ್ನೆಲ್ಲ ನೋಡುತ್ತಿರುತ್ತಾನೆ ಅಥವಾ ಪ್ರೇಕ್ಷಕನಾಗಿರುತ್ತಾರೆ ಆದರೆ ಮುಕ್ತವಾಗಿರುತ್ತಾನೆ; ನಮ್ಮಯ ಎಲ್ಲಾ ಕಾರ್ಯಗಳನ್ನು ಅವರಿಂದ ತೆಗೆದುಕೊಂಡು ಮತ್ತು ವೈಶ್ವಿಕ ಅಥವಾ ಪರಮಶಕ್ತ ಮಾತೆ ಅಥವಾ ಹೃದಯದ ಹಿಂದೆ ನಿಯಂತ್ರಿಸುತ್ತಿರುವ ಮತ್ತು ಕಾರ್ಯವೆಸಗುತ್ತಿರುವ ದೈವೀ ಶಕ್ತಿಯ ಮೂಲಕ ಮಾಡಲ್ಪಟ್ಟಿವೆ ಎಂದು ನಾವು ಅನುಭವಿಸುತ್ತೇವೆ. ದೇವರಿಗೆ ನಮ್ಮ ಎಲ್ಲಾ ಇಚ್ಛೆಗಳ ಹಾಗೂ ಕಾರ್ಯಗಳ ನಿರಂತರ ಸಂಬಂಧದಿಂದ ಪ್ರೇಮ ಹಾಗೂ ಉಪಾಸನೆ ಬೆಳೆಯುವುದು, ಚೈತ್ಯ ಪುರುಷನು ಮುನ್ನೆಲೆಗೆ ಬರುವನು. ಮೇಲಿರುವ ಪ್ರಭುತ್ವಕ್ಕೆ ಸಂಬಂಧಿಸಿದಂತೆ, ಅದು ನಮ್ಮ ಮೇಲಿರುವುದನ್ನು ಮತ್ತು ಅದರ ಇಳಿತವನ್ನು ಮತ್ತು ವರ್ಧಿಸುತ್ತಿರುವ ಪ್ರಜ್ಞೆಗೆ ಹಾಗೂ ಬೆಳಕಿಗೆ ಮುಕ್ತವಾಗುವುದನ್ನು ನಾವು ಅನುಭವಿಸಬಹುದು.

ಅಂತಿಮವಾಗಿ, ಕಾರ್ಯಗಳು, ಭಕ್ತಿ ಮತ್ತು ಜ್ಞಾನ ಒಟ್ಟಾಗಿ ಸೇರುತ್ತವೆ ಮತ್ತು ಸ್ವಯಂ–ಪರಿಪೂರ್ಣತೆಯು ಸಾಧ್ಯವಾಗುವುದು – ಅದನ್ನು ನಾವು ಪ್ರಕೃತಿಯ ರೂಪಾಂತರಣವೆಂದು ಕರೆಯುತ್ತೇವೆ.

ಈ ಎಲ್ಲ ಫಲಿತಾಂಶಗಳು, ನಿಶ್ಚಯವಾಗಿ, ಒಮ್ಮಿಂದೊಮ್ಮೆಗೆ ಬರುವುದಿಲ್ಲ; ಅವುಗಳು ಹೆಚ್ಚು–ಕಡಿಮೆ ನಿಧಾನವಾಗಿ ಬರುತ್ತವೆ, ಪುರುಷನ ಸ್ಥಿತಿ ಹಾಗೂ ಆತನ

ಬೆಳವಣಿಗೆಯ ಪ್ರಕಾರ ಹೆಚ್ಚು–ಕಡಿಮೆ ಪೂರ್ಣವಾಗಿ ಬರುತ್ತವೆ. ದೈವೀ ಸಾಕ್ಷಾತ್ಕಾರಕ್ಕೆ ರಾಜ ಮಾರ್ಗ ಎನ್ನುವುದು ಇಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/216–18**

ಸ್ವಯಂ–ಸಮರ್ಪಣೆ ಎನ್ನುವುದು, ನೀವು ಮಾಡುವ ಒಂದು ನಿರ್ದಿಷ್ಟವಾದ ಕೆಲಸದ ಮೇಲೆ ಅವಲಂಬಿಸಿರುವುದಿಲ್ಲ, ಆದರೆ ನೀವು ಕಾರ್ಯ (ಅದು ಯಾವುದೇ ಕಾರ್ಯವಿರಲಿ) ಮಾಡುವ ಸ್ಫೂರ್ತಿಯ ಮೇಲೆ ಅದು ಅವಲಂಬಿಸಿದೆ. ಯಾವುದೇ ಕಾರ್ಯವನ್ನು, ಉತ್ತಮವಾಗಿ ಹಾಗೂ ಎಚ್ಚರಿಕೆಯಿಂದ, ದೇವರಿಗೆ ಒಂದು ನಿವೇದನೆ ಎಂಬಂತೆ, ಯಾವುದೇ ಬಯಕೆ ಅಥವಾ ಅಹಂಕಾರವಿಲ್ಲದೆ, ಮನಸ್ಸಿನ ಸಮತೆ ಹಾಗೂ ಪ್ರಶಾಂತತೆಯೊಂದಿಗೆ (ಒಳ್ಳೆಯ ಅಥವಾ ಕೆಟ್ಟ ಯೋಗದಲ್ಲಿ) ಮಾಡಿದರೆ, ಯಾವುದೇ ವ್ಯಕ್ತಿಗತ ಲಾಭಕ್ಕಾಗಿ, ಪ್ರತಿಫಲಕ್ಕಾಗಿ ಅಥವಾ ಪರಿಣಾಮಕ್ಕಾಗಿ ಮಾಡದೆ ದೇವರಿಗಾಗಿ ಮಾಡಿದರೆ, ಮಾಡುವ ಎಲ್ಲಾ ಕಾರ್ಯವೂ ದೈವೀ ಶಕ್ತಿಗೆ ಸಂಬಂಧಿಸಿದೆ ಎನ್ನುವ ಪ್ರಜ್ಞೆಯಿಂದ ಮಾಡಿದರೆ, ಅದು ಕರ್ಮದ ಮುಖಾಂತರದ ಸ್ವಯಂ–ಸಮರ್ಪಣೆಯ ಒಂದು ಸಾಧನವಾಗುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/246–47 – ಶ್ರೀ ಅರವಿಂದರು**

**ಆದ್ಯತೆಯಿಲ್ಲದೆ ಆರಿಸಿಕೊ, ಬಯಕೆಯಿಲ್ಲದೆ ನೆರವೇರಿಸು/ಕಾರ್ಯಗತಗೊಳಿಸು**

ಸತ್ಯವಾದ ಪ್ರಜ್ಞೆಯ ಮತ್ತು ಸ್ವಯಂ–ನಿಯಂತ್ರಣದ ಬೆಳವಣಿಗೆಯ ಮೂಲದಲ್ಲಿ, ಆದ್ಯತೆಯಿಲ್ಲದೆ ಆಯ್ಕೆ ಮಾಡುವುದು ಮತ್ತು ಬಯಕೆಯಿಲ್ಲದೆ ನೆರವೇರಿಸುವುದು ತುಂಬಾ ಕಠಿಣವಾಗಿದೆ. ಈ ಭಾವದಲ್ಲಿ ಆಯ್ಕೆ ಮಾಡುವುದೆಂದರೆ, ಯಾವುದು ಸತ್ಯವೆನ್ನುವುದನ್ನು ನೋಡುವುದು ಮತ್ತು ಅದನ್ನು ಅಸ್ತಿತ್ವಕ್ಕೆ ತರುವುದು ಎಂದು ಅರ್ಥ; ಯಾವುದೇ ವಿಷಯಕ್ಕೆ, ಯಾವುದೇ ವ್ಯಕ್ತಿ, ಕ್ರಮ, ಸಂದರ್ಭಕ್ಕೆ ಕನಿಷ್ಠ ವ್ಯಕ್ತಿಗತ ಪಕ್ಷಪಾತವಿಲ್ಲದೆ, ಹೀಗೆ ಆಯ್ಕೆ ಮಾಡುವುದು ಒಬ್ಬ ಸಾಮಾನ್ಯ ಮನುಷ್ಯನಿಗೆ ಅತ್ಯಂತ ಕಷ್ಟಕರವಾದ ಸಂಗತಿಯಾಗಿದೆ. ಆದಾಗ್ಯೂ, ಎಲ್ಲಾ ಆಕರ್ಷಣೆಗಳಿಂದ ಮತ್ತು ಇಷ್ಟಗಳಿಂದ ಮುಕ್ತವಾದ, ಕೇವಲ ಮಾರ್ಗದರ್ಶನ ಮಾಡುವಂಥ ಸತ್ಯದ ಮೇಲೆ ನಮ್ಮ ನಿಲುವನ್ನು ತೆಗೆದುಕೊಳ್ಳುತ್ತ, ಯಾವುದೇ ಆದ್ಯತೆಯಿಲ್ಲದೆ ಕಾರ್ಯ ಮಾಡುವುದನ್ನು ನಾವು ಕಲಿತುಕೊಳ್ಳಬೇಕು. ಸತ್ಯದ

ಅನುಸಾರವಾಗಿ ಅವಶ್ಯಕವಾದ ಕ್ರಿಯೆಯನ್ನು ಆಯ್ಕೆ ಮಾಡಿದ ಮೇಲೆ, ಯಾವುದೇ ಬಯಕೆಯಿಲ್ಲದೆ ಅದನ್ನು ನೆರವೇರಿಸಬೇಕು.

ನಿಮ್ಮನ್ನು ನೀವು ಶ್ರದ್ಧೆಯಿಂದ ಗಮನಿಸಿದರೆ, ಕಾರ್ಯ ನಿರ್ವಹಿಸುವ ಮೊದಲು, ನಿಮ್ಮನ್ನು ಮುಂದೆ ತಳ್ಳುವಂಥ ಒಂದು ಆಂತರಿಕ ಉತ್ತೇಜನ ನಿಮಗೆ ಬೇಕೆನ್ನುವುದನ್ನು ನೀವು ಕಾಣುವಿರಿ. ಸಾಧಾರಣ ಮನುಷ್ಯನಲ್ಲಿ ಈ ಉತ್ತೇಜನವು ಸಾಮಾನ್ಯವಾಗಿ ಬಯಕೆಯಾಗಿರುತ್ತದೆ. ಈ ಬಯಕೆಯನ್ನು ಒಂದು ಸ್ಪಷ್ಟ, ನಿಖರ, ದೃಢವಾದ ಸತ್ಯದ ದೂರದೃಷ್ಟಿಯಿಂದ ಬದಲಾಯಿಸಲ್ಪಡಬೇಕು.

ಕೆಲವರು ಇದನ್ನು ದೈವೀ ಸಮ್ಮತಿ ಅಥವಾ ದೈವೀ ಇಚ್ಛೆ ಎಂದು ಕರೆಯುವರು. ಈ ಶಬ್ದಗಳ ನಿಜವಾದ ಅರ್ಥವನ್ನು ಸುಳ್ಳೆಂದು ತೋರಿಸಲ್ಪಟ್ಟಿದೆ, ಆದ್ದರಿಂದ ನಾನು "ಸತ್ಯ"ದ ಬಗ್ಗೆ ಮಾತನಾಡಲು ಇಷ್ಟಪಡುತ್ತೇನೆ, ಆದರೆ ಇದು ನಾವು ಹೆಸರಿಸಲಾಗದ ಆದರೆ ಎಲ್ಲಾ ಅಸ್ತಿತ್ವದ ಮೂಲ ಮತ್ತು ಗುರಿಯಾಗಿರುವ ಆ ವಸ್ತುವಿನ ಒಂದು ಸೀಮಿತ ಅಂಶ ಮಾತ್ರ. ನಾನು ಉದ್ದೇಶಪೂರ್ವಕವಾಗಿ ದೇವರು ಎಂಬ ಪದವನ್ನು ಬಳಸುವುದಿಲ್ಲ, ಏಕೆಂದರೆ ಧರ್ಮಗಳು ಈ ಹೆಸರನ್ನು, ತನ್ನ ರಚನೆಗಿಂತ ಬೇರೆಯಾದ ಮತ್ತು ಅದರ ಹೊರಗಿರುವ ಸರ್ವಶಕ್ತನಾದ ಒಬ್ಬ ಪುರುಷನಿಗೆ ಕೊಟ್ಟಿವೆ. ಇದು ಸರಿಯಲ್ಲ.

ಆದರೆ, ಭೌತಿಕ ಸ್ತರದಲ್ಲಿ ವ್ಯತ್ಯಾಸವು ತುಂಬಾ ಸ್ಪಷ್ಟವಾಗಿದೆ. ಯಾಕೆಂದರೆ ನಾವು ಇನ್ನೆಂದಿಗೂ ಅದಾಗಲು ಬಯಸದವರಾಗಿದ್ದೇವೆ, ಮತ್ತು ಆತ, ಆತನು ನಾವು ಆಗಲು ಬಯಸುವ ಎಲ್ಲವೂ ಆಗಿದ್ದಾನೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 4/1–2**

**ಇಚ್ಛೆಯನ್ನು ದೃಢವಾಗಿಟ್ಟುಕೊಳ್ಳಿ**

ಇಚ್ಛೆಯನ್ನು ದೃಢವಾಗಿಟ್ಟುಕೊಳ್ಳಿ. ಬಗ್ಗದ ಭಾಗಗಳನ್ನು ಅವಿಧೇಯ ಮಕ್ಕಳ ಹಾಗೆ ಪರಿಗಣಿಸಿ. ಅವುಗಳ ಜೊತೆ ನಿರಂತರವಾಗಿ ಮತ್ತು ತಾಳ್ಮೆಯಿಂದ ವರ್ತಿಸಿ. ಅವರ ತಪ್ಪನ್ನು ಅವರಿಗೆ ಮನವರಿಕೆ ಮಾಡಿಕೊಡಿ.

ನಿಮ್ಮ ಪ್ರಜ್ಞೆಯ ಅಂತರಾಳದಲ್ಲಿ ಚೈತ್ಯ ಪುರುಷನಿದ್ದಾನೆ, ನಿಮ್ಮೊಳಗಿನ ದೈವೀ ಮಂದಿರ. ಇದು ಕೇಂದ್ರ ಬಿಂದುವಾಗಿದೆ, ಇದರ ಸುತ್ತ ಈ ಎಲ್ಲಾ ವಿಭಿನ್ನ ಭಾಗಗಳ,

ನಿಮ್ಮ ಅಸ್ತಿತ್ವದ ಈ ಎಲ್ಲಾ ವಿರೋಧಾಭಾಸದ ಕ್ರಿಯೆಗಳ ಏಕೀಕರಣವು ಸಂಭವಿಸಬೇಕು. ಒಮ್ಮೆ ನೀವು ಚೈತ್ಯ ಪುರುಷನ ಪ್ರಜ್ಞೆಯನ್ನು ಮತ್ತು ಅದರ ಅಭೀಪ್ಸೆಯನ್ನು ಪಡೆದುಕೊಂಡರೆ, ಈ ಸಂದೇಹಗಳನ್ನು ಮತ್ತು ಕಷ್ಟಗಳನ್ನು ನಾಶ ಮಾಡಬಹುದು. ಇದು ಸಂಭವಿಸುವುದಕ್ಕೆ ಸಮಯದಲ್ಲಿ ವತ್ಯಾಸವಾಗಬಹುದು, ಆದರೆ ಕೊನೆಗೆ ನೀವು ಖಂಡಿತವಾಗಿ ಯಶಸ್ವಿಯಾಗುವಿರಿ. ಒಂದೊಮ್ಮೆ, "ನಾನು ನಿಮ್ಮವನಾಗಲು ಬಯಸುತ್ತೇನೆ" ಎಂದು ಹೇಳುತ್ತ ದೇವರೆಡೆಗೆ ಹೊರಳಿದರೆ, "ಹೌದು" ಎಂದು ದೇವರು ಹೇಳಿದ ನಂತರ, ಇಡೀ ಜಗತ್ತು ಕೂಡ ನಿಮ್ಮನ್ನು ಅದರಿಂದ ತಡೆಯಲು ಸಾಧ್ಯವಿಲ್ಲ. ಪ್ರಧಾನ ಪುರುಷನು ಶರಣಾಗತನಾದಾಗ, ಮುಖ್ಯ ಕಷ್ಟವು ಕಣ್ಮರೆಯಾಗುತ್ತದೆ. ಬಾಹ್ಯ ಪುರುಷನು ಒಂದು ಚಿಪ್ಪಿದ್ದಂತೆ. ಸಾಧಾರಣ ಮನುಷ್ಯರಲ್ಲಿ, ಈ ಚಿಪ್ಪು ಎಷ್ಟೊಂದು ಗಟ್ಟಿಯಾಗಿರುತ್ತದೆ ಎಂದರೆ, ತಮ್ಮೊಳಗಿರುವ ದೈವೀ ಉಪಸ್ಥಿತಿಯ ಅರಿವು ಅವರಿಗಿರುವುದಿಲ್ಲ. ಒಮ್ಮೆ, ಒಂದು ಕ್ಷಣಕ್ಕಾದರೂ, "ನಾನು ಇಲ್ಲಿದ್ದೇನೆ ಮತ್ತು ನಾನು ನಿನ್ನವನು" ಎಂದು ಆಂತರಿಕ ಮನಸ್ಸು ಹೇಳಿದರೆ, ಆಗ ಅದು ಒಂದು ಸೇತುವೆಯನ್ನು ಕಟ್ಟಿದಂತೆ, ಮತ್ತು ಎರಡು ಭಾಗಗಳು ಸಂಪೂರ್ಣವಾಗಿ ಸೇರುವವರೆಗೂ ಹೊರಗಿನ ಪದರವು ಮೆಲ್ಲ ಮೆಲ್ಲನೆ ತೆಳ್ಳಗಾಗುತ್ತಾ **ಹೋಗುತ್ತದೆ ಮತ್ತು ಆಂತರಿಕ ಮತ್ತು ಬಾಹ್ಯ ಭಾಗಗಳು ಒಂದಾಗುತ್ತವೆ.**

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/7**

## ದೈವಿಕ ಇಚ್ಛೆಯನ್ನು ತಿಳಿಯುವುದು

*ದೈವೀ ಇಚ್ಛೆ ಏನೆಂದು ನಾವು ಹೇಗೆ ತಿಳಿದುಕೊಳ್ಳಬಹುದು?*

ನಾವದನ್ನು ತಿಳಿದುಕೊಳ್ಳಲಾಗುವುದಿಲ್ಲ, ಅದನ್ನು ನಾವು ಅನುಭವಿಸುತ್ತೇವೆ. ಮತ್ತು ಅದನ್ನು ಅನುಭವಿಸಬೇಕಾದರೆ, ಪ್ರತಿಯೊಂದು ವಿಘ್ನವು ಕಣ್ಮರೆಯಾಗುವಂತಹ ತೀವ್ರತೆ ಮತ್ತು ಪ್ರಾಮಾಣಿಕತೆಯೊಂದಿಗೆ ಬಯಸಬೇಕು. ನೀವು ಎಲ್ಲಿಯವರೆಗೆ ಆದ್ಯತೆ, ಬಯಕೆ, ಆಕರ್ಷಣೆ, ಅಥವಾ ಒಲವನ್ನು ಹೊಂದಿರುವಿರೊ, ಅಲ್ಲಿಯವರೆಗೆ ಇವುಗಳೆಲ್ಲಾ ನಿಮ್ಮಿಂದ ಸತ್ಯವನ್ನು ಮರೆಮಾಚುತ್ತವೆ. ಆದ್ದರಿಂದ, ಮೊದಲು ಮಾಡಬೇಕಾದ ಕೆಲಸವೆಂದರೆ, ನಿಮ್ಮ ಪ್ರಜ್ಞೆಯ ಎಲ್ಲಾ ಕ್ರಿಯೆಗಳನ್ನು/ಚಲನೆಗಳನ್ನು ಅಧೀನಪಡಿಸಿಕೊಳ್ಳಲು, ನಿಯಂತ್ರಿಸಲು, ಸರಿಪಡಿಸಲು ಪ್ರಯತ್ನಿಸುವುದು ಮತ್ತು

ಎಲ್ಲವೂ ಸತ್ಯದ ಪರಿಪೂರ್ಣ ಮತ್ತು ಶಾಶ್ವತ ಅಭಿವ್ಯಕ್ತಿಯಾಗುವವರೆಗೆ, ಬದಲಾಯಿಸಲು ಸಾಧ್ಯವಿಲ್ಲದ ಅಂಶಗಳನ್ನು ತೆಗೆದುಹಾಕುವುದು.

ಮತ್ತು ಇದನ್ನು ಬರೀ ಬಯಸುವುದರಿಂದ ಏನನ್ನೂ ಮಾಡಿದಂಥಾಗುವುದಿಲ್ಲ, ಏಕೆಂದರೆ ತುಂಬಾ ಸಲ ನಾವು ಅದನ್ನು ಬಯಸಲು ಮರೆತುಬಿಡುತ್ತೇವೆ.

ಬೇಕಾಗಿರುವುದೇನೆಂದರೆ, ನಮ್ಮಲ್ಲಿ ನಿರಂತರ ಬೆಂಕಿಯಂತೆ ಪ್ರಜ್ವಲಿಸುತ್ತಿರುವ ಒಂದು ಅಭೀಪ್ಸೆ, ಮತ್ತು ಪ್ರತಿ ಬಾರಿ ನೀವು ಬಯಕೆ, ಆದ್ಯತೆ ಅಥವಾ ಆಕರ್ಷಣೆಯನ್ನು ಹೊಂದಿದಾಗ ಅದನ್ನು ಈ ಬೆಂಕಿಯೊಳಗೆ ಹಾಕಬೇಕು. ನೀವಿದನ್ನು ಎಡೆಬಿಡದೆ ಮಾಡಿದರೆ, ನಿಮ್ಮ ಸಾಮಾನ್ಯ ಪ್ರಜ್ಞೆಯಲ್ಲಿ ಸತ್ಯ ಪ್ರಜ್ಞೆಯ ಚಿಕ್ಕ ಕಿರಣವು ಮೂಡಲು ಶುರುವಾಗುವುದನ್ನು ನೀವು ಕಾಣುವಿರಿ. ಮೊದಲು ಅದು ಮಂದವಾಗಿರುತ್ತದೆ, ಎಲ್ಲಾ ಬಯಕೆಗಳು, ಆದ್ಯತೆಗಳು, ಆಕರ್ಷಣೆಗಳು ಮತ್ತು ಇಷ್ಟಗಳು ಅಬ್ಬರದ ಹಿಂದೆ ತುಂಬಾ ದೂರದಲ್ಲಿ ಇರುತ್ತವೆ. ಆದರೆ ನೀವು ಇವೆಲ್ಲದರ ಹಿಂದೆ ಹೋಗಿ, ಸ್ತಬ್ಧ, ಪ್ರಶಾಂತ, ಮತ್ತು ಬಹುತೇಕ ನಿಶ್ಯಬ್ದವಾಗಿರುವ ಆ ನಿಜವಾದ ಪ್ರಜ್ಞೆಯನ್ನು ಕಂಡುಕೊಳ್ಳಬೇಕು.

ನಿಜವಾದ ಪ್ರಜ್ಞೆಯೊಂದಿಗೆ ಸಂಪರ್ಕದಲ್ಲಿರುವವರು ಎಲ್ಲಾ ಸಾಧ್ಯತೆಗಳನ್ನು ಒಂದೇ ಸಮಯಕ್ಕೆ ನೋಡುತ್ತಾರೆ ಮತ್ತು ಅಗತ್ಯವಿದ್ದರೆ, ಅತ್ಯಂತ ಅನುಕೂಲವಾಗಿರದ್ದನ್ನೂ ಸಹ ಉದ್ದೇಶಪೂರ್ವಕವಾಗಿ ಆಯ್ಕೆ ಮಾಡಬಹುದು. ಆದರೆ ಈ ಗುರಿಯನ್ನು ತಲುಪಲು, ನೀವು ಬಹಳ ದೂರ ಹೋಗಬೇಕು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 4/2–3**

## ದೈವೀ ಇಚ್ಛೆಯನ್ನು ಗುರುತಿಸುವುದು

ನಾವು ಮಾಡುವ ಕ್ರಿಯೆಗಳು ದೈವಿ ಇಚ್ಛೆಯಿಂದ ಪ್ರೇರಿತವಾದವುಗಳು ಎಂದು ನಾವು ಹೇಗೆ ತಿಳಿಯಬಹುದೆಂದು ನೀವು ಕೇಳುತ್ತೀರಿ? ದೈವೀ ಇಚ್ಛೆಯನ್ನು ಗುರುತಿಸುವುದು ಕಷ್ಟವಲ್ಲ. ಇದು ನಿಶ್ಚಯವಾಗಿಯೂ ಸ್ಪಷ್ಟವಾಗಿದೆ. ನೀವು ಆ ಮಾರ್ಗವನ್ನು ಬಹು ದೂರದವರೆಗೆ ಕ್ರಮಿಸದೆ ಇದ್ದರೂ ಇದನ್ನು ತಿಳಿದುಕೊಳ್ಳಬಹುದು. ನೀವು ಅದರ ಧ್ವನಿಯನ್ನು ಮಾತ್ರ ಕೇಳಬೇಕು, ಹೃದಯದಲ್ಲಿರುವ ಆ ಸಣ್ಣ ಧ್ವನಿಯನ್ನು. ಒಮ್ಮೆ ನೀವು ಅದನ್ನು ಕೇಳುವುದನ್ನು

ಅಭ್ಯಾಸ ಮಾಡಿಕೊಂಡರೆ, ನೀವು ದೈವೀ ಇಚ್ಛೆಗೆ ವಿರುದ್ಧವಾದ ಯಾವುದೇ ಕೆಲಸವನ್ನು ಮಾಡಿದರೆ, ನಿಮಗೆ ಅಸೌಖ್ಯದ ಅನುಭವವಾಗುತ್ತದೆ. ನೀವು ತಪ್ಪಾದ ಮಾರ್ಗದಲ್ಲಿ ಮುಂದುವರೆದರೆ, ನೀವು ತುಂಬಾ ತೊಂದರೆಗೆ ಒಳಗಾಗುವಿರಿ. ಆದರೆ, ನೀವು ನಿಮ್ಮ ಅಸ್ವಸ್ಥತೆಗೆ ಅಥವಾ ತೊಂದರೆಗೆ ಯಾವುದಾದರೂ ಪ್ರಾಪಂಚಿಕ ಕಾರಣವನ್ನು ನೀಡಿ ನಿಮ್ಮ ಮಾರ್ಗದಲ್ಲಿ ಮುಂದುವರೆದರೆ, ನೀವು ಕ್ರಮೇಣ ಗ್ರಹಣ ಶಕ್ತಿಯನ್ನು ಕಳೆದುಕೊಳ್ಳುವಿರಿ ಮತ್ತು ಕೊನೆಗೆ ನೀವು ಎಲ್ಲಾ ರೀತಿಯ ತಪ್ಪುಗಳನ್ನು ಮಾಡುತ್ತಾ ಹೋಗಬಹುದು ಮತ್ತು ಯಾವುದೇ ಅಸೌಖ್ಯವನ್ನು ಅನುಭವಿಸದಿರಬಹುದು. ಆದರೆ, ಒಮ್ಮೆ ನೀವು ಕಡಿಮೆ ತೊಂದರೆಯನ್ನು ಅನುಭವಿಸಿದಾಗ, "ಇದಕ್ಕೆ ಕಾರಣ ಏನು?" ಎಂದು ನಿಮ್ಮ ಅಂತರಾತ್ಮವನ್ನು ಕೇಳಿದಾಗ ನೀವು ನಿಜವಾದ ಉತ್ತರವನ್ನು ಪಡೆಯುವಿರಿ ಮತ್ತು ಆಗ ಒಟ್ಟು ವಿಷಯವು ಸಂಪೂರ್ಣವಾಗಿ ಸ್ಪಷ್ಟವಾಗುತ್ತದೆ. ನೀವು ಸ್ವಲ್ಪ ಖಿನ್ನತೆ ಅಥವಾ ಅಲ್ಪ ಅನಾನುಕೂಲತೆಯನ್ನು ಅನುಭವಿಸಿದಾಗ ಪ್ರಾಪಂಚಿಕ ಕಾರಣವನ್ನು ಕೊಡಲು ಪ್ರಯತ್ನಿಸಬೇಡಿ. ನೀವು ಸ್ವಲ್ಪ ತಡೆದು ಕಾರಣಕ್ಕಾಗಿ ಹುಡುಕುವಾಗ, ಪೂರ್ಣವಾಗಿ ನೇರ ಮತ್ತು ಪ್ರಾಮಾಣಿಕವಾಗಿರಿ. ಮೊದಲಿಗೆ ನಿಮ್ಮ ಮನಸ್ಸು ತುಂಬಾ ಸತ್ಯವೆಂದು ಭಾಸವಾಗುವ ಮತ್ತು ಸುಂದರವಾದ ವಿವರಣೆಯನ್ನು ರಚನೆ ಮಾಡುತ್ತದೆ. ಅದನ್ನು ಸ್ವೀಕರಿಸಬೇಡಿ, ಆದರೆ ಅದರಾಚೆ ನೋಡಿ ಮತ್ತು ಕೇಳಿ, "ಈ ಚಲನೆಯ ಅಥವಾ ಕ್ರಿಯೆಯ ಹಿಂದೆ ಇರುವುದು ಏನು? ನಾನು ಇದನ್ನು ಯಾಕೆ ಮಾಡ್ತಾ ಇದ್ದೀನಿ?" ಕೊನೆಗೆ, ಒಂದು ಮೂಲೆಯಲ್ಲಿ ಅಡಗಿರುವ ಚಿಕ್ಕ ಕಿರುದೆರೆಯನ್ನು – ನಿಮ್ಮ ಮನೋಭಾವದಲ್ಲಿ ತೊಂದರೆಯನ್ನು ಅಥವಾ ಗಲಭೆಯನ್ನು ಉಂಟುಮಾಡುವಂಥ ಸ್ವಲ್ಪ ತಪ್ಪಾದ ತಿರುವನ್ನು ಅಥವಾ ಬೆಳವಣಿಗೆಯನ್ನು ನೀವು ಕಂಡುಕೊಳ್ಳುತ್ತೀರಿ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/8–9**

### ಕೆಲಸದಲ್ಲಿ ಸರಿಯಾದ ಮನೋಭಾವ

ಕೆಲಸದ ಆಧ್ಯಾತ್ಮಿಕ ಯಥಾರ್ಥತೆಯು ಖಂಡಿತವಾಗಿಯೂ ಆಂತರಿಕ ಮನೋಭಾವದ ಮೇಲೆ ಅವಲಂಬಿತವಾಗಿದೆ. ಗುರಿಯನ್ನು ತಲುಪಲು ಮುಖ್ಯವಾದುದೇನೆಂದರೆ, ಸಮರ್ಪಿತ ಪ್ರಯತ್ನ, ಸಮಯ ಮತ್ತು ದೃಢ ನಿಷ್ಠೆ.

ಇದರ ಜೊತೆಗೆ, ನಾವು ಕೆಲಸವನ್ನು ಮಾಡುವಾಗ ಶ್ರೀಮಾತೆಯವರನ್ನು ನೆನಪಿಸಿಕೊಳ್ಳುವುದು ಅಥವಾ ಒಂದು ನಿರ್ದಿಷ್ಟ ಏಕಾಗ್ರತೆಯ ಮೂಲಕ ಶ್ರೀಮಾತೆಯವರ ಇರುವಿಕೆಯನ್ನು ಅಥವಾ ಪುಷ್ಟಿಕೊಡುವ ಅಥವಾ ಕಾರ್ಯ ಮಾಡುವ ಶಕ್ತಿಯನ್ನು ಅನುಭವಿಸಿದರೆ, ಅದು ಆಧ್ಯಾತ್ಮಿಕ ಸಫಲತೆಯನ್ನು ಇನ್ನೂ ದೂರಕ್ಕೆ ಕೊಂಡೊಯ್ಯುತ್ತದೆ. ಆದರೆ ಮ್ಲಾನತೆಯ, ಖಿನ್ನತೆಯ ಅಥವಾ ಪ್ರಯಾಸದ ಸಮಯದಲ್ಲಿ ಈ ಸಂಗತಿಗಳನ್ನು ಮಾಡಲು ಸಾಧ್ಯವಿಲ್ಲದಿದ್ದರೂ, ಕಾರ್ಯದ ಮೂಲ ಪ್ರೇರಕ ಶಕ್ತಿಯಾದಂಥ ಒಂದು ಪ್ರೇಮ ಅಥವಾ ಭಕ್ತಿಯು ಹಿನ್ನೆಲೆಯಲ್ಲಿರಬಹುದು ಮತ್ತು ಅದು ಮೋಡದ ಹಿಂದೆ ಮರೆಯಾಗಿಬಹುದು ಮತ್ತು ಕತ್ತಲೆ ಸಮಯದ ನಂತರ ಸೂರ್ಯನಂತೆ ಮತ್ತೆ ಹೊರಹೊಮ್ಮಬಹುದು. ಎಲ್ಲಾ ಸಾಧನೆಯು ಇರುವುದು ಹಾಗೆಯೇ ಮತ್ತು ಅದಕ್ಕಾಗಿ ನಾವು ಕತ್ತಲೆಯ (ಖಿನ್ನತೆಯ) ಕ್ಷಣಗಳಿಂದ ನಿರುತ್ಸಾಹಗೊಳ್ಳಬಾರದು, ಬದಲಿಗೆ ಮೂಲ ಪ್ರೇರಣೆ ಖಂಡಿತವಾಗಿಯೂ ಅಲ್ಲಿದೆ ಮತ್ತು ಆ ಕತ್ತಲೆಯ ಕ್ಷಣಗಳು ಪ್ರಯಾಣದಲ್ಲಿ ಒಂದು ಘಟನೆ ಮಾತ್ರವೆಂದು, ಅವು ಮುಗಿದ ನಂತರ ಹೆಚ್ಚಿನ ಪ್ರಗತಿಯ ಕಡೆಗೆ ನಮ್ಮನ್ನು ಕರೆದೊಯ್ಯುತ್ತವೆ ಎಂದು ಅರಿತುಕೊಳ್ಳಬೇಕು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/241–242**

**ಸ್ವಾರ್ಥಪರತೆಯನ್ನು ತೊಡೆದುಹಾಕುವುದು**

ಸಾಮಾನ್ಯವಾಗಿ, ಅವೈಯಕ್ತಿಕವಾಗಿರುವುದು ಎಂದರೆ ವ್ಯಕ್ತಿನಿಷ್ಠನಾಗದೆ ಇರುವುದು, ಸಂಗತಿಗಳು ನಮ್ಮ ಮೇಲೆ ಹೇಗೆ ಪರಿಣಾಮ ಬೀರುತ್ತವೆ ಎಂಬ ದೃಷ್ಟಿಕೋನದಿಂದ ನೋಡದಿರುವುದು, – ಆದರೆ ಸಂಗತಿಗಳು ಏನು ಎಂಬುದನ್ನು ನಿಜವಾಗಿ ನೋಡುವುದು, ನಿಷ್ಪಕ್ಷಪಾತವಾಗಿ ತೀರ್ಪು ನೀಡುವುದು, ಸಂಗತಿಗಳ ಉದ್ದೇಶ ಅಥವಾ ಸಂಗತಿಗಳ ಯಜಮಾನನ ಇಚ್ಛೆಯಿಂದ ಏನು ಬೇಕೊ ಅದನ್ನು ಮಾಡುವುದು, ನಮ್ಮ ವೈಯಕ್ತಿಕ ದೃಷ್ಟಿಕೋನ ಅಥವಾ ಸ್ವಾರ್ಥಪರ ಆಸಕ್ತಿ ಅಥವಾ ಅಹಂಕಾರದಿಂದ ರೂಪುಗೊಂಡ ಕಲ್ಪನೆ ಅಥವಾ ಭಾವನೆಯಿಂದಲ್ಲ. ಕೆಲಸದಲ್ಲಿ ನಮ್ಮ ಸ್ವಂತ ಪ್ರತಿಷ್ಠೆ ಅಥವಾ ಅನುಕೂಲತೆಯನ್ನು ನೋಡದೆ, ಕೆಲಸಕ್ಕೆ ಏನು ಉತ್ತಮವೋ ಅದನ್ನು ಮಾಡುವುದು, ಕೆಲಸವನ್ನು ನಮ್ಮ ಸ್ವಂತ ಕೆಲಸವೆಂದು ಭಾವಿಸದೆ ಅದು ಶ್ರೀಮಾತೆಯವರ ಕೆಲಸವೆಂದು ಪರಿಗಣಿಸುವುದು, ಅದನ್ನು

ನಿಯಮ, ಶಿಸ್ತು, ಅವೈಯಕ್ತಿಕ ವ್ಯವಸ್ಥೆಗಳ ಪ್ರಕಾರ, ಪರಿಸ್ಥಿತಿಗಳಿಗೆ ಅನುಗುಣವಾಗಿ ಉತ್ತಮವಾದದ್ದನ್ನು ಮಾಡಲು ಪರಿಸ್ಥಿತಿಗಳು ಮತ್ತು ಇನ್ನಿತರ ಸಂಗತಿಗಳು ಅನುಕೂಲಕರವಾಗಿಲ್ಲದಿದ್ದರೂ ಸಹ ಅದನ್ನು ಮಾಡುವುದು. ಅವೈಯಕ್ತಿಕ ಕೆಲಸಗಾರನು ತನ್ನ ಅತ್ಯುತ್ತಮ ಸಾಮರ್ಥ್ಯ, ಉತ್ಸಾಹ, ಶ್ರಮವನ್ನು ಕೆಲಸದಲ್ಲಿ ತೊಡಗಿಸುತ್ತಾನೆ, ಆದರೆ ಅವನ ವೈಯಕ್ತಿಕ ಮಹತ್ವಾಕಾಂಕ್ಷೆಗಳನ್ನು, ದುರಹಂಕಾರ, ಉತ್ಸಾಹಗಳನ್ನು ಅಲ್ಲ. ಅವನ ಸಣ್ಣ ವ್ಯಕ್ತಿತ್ವಕ್ಕಿಂತ ಹೆಚ್ಚಿನದನ್ನು ಅವನು ಯಾವಾಗಲೂ ದೃಷ್ಟಿಯಲ್ಲಿ ಹೊಂದಿರುತ್ತಾನೆ ಮತ್ತು ಅವನ ಭಕ್ತಿ ಅಥವಾ ವಿಧೇಯತೆ ಅವನ ನಡವಳಿಕೆಯನ್ನು ನಿರ್ದೇಶಿಸುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/244–45**

ನಿಮ್ಮ ಕೆಲಸದಲ್ಲಿ ಇರುವ ಕಷ್ಟ ಏನೆಂದರೆ ನೀವು ಅದನ್ನು ಹೆಚ್ಚಾಗಿ ನಿಮ್ಮ ಸ್ವಂತ ಕೆಲಸವೆಂದು ಪರಿಗಣಿಸುವುದು ಮತ್ತು ನಿಮ್ಮ ವೈಯಕ್ತಿಕ ದೃಷ್ಟಿಕೋನದಿಂದ ನೋಡುವುದು. ಆದ್ದರಿಂದ ವೈಯಕ್ತಿಕ ಅನುಕೂಲತೆ, ವಿಚಾರಗಳು, ಕೆಲಸಗಳನ್ನು ಮಾಡುವ ರೀತಿ, ಗೌರವ, ಬೇಡಿಕೆಗಳು ದೊಡ್ಡ ಸ್ಥಾನವನ್ನು ಪಡೆದುಕೊಳ್ಳುತ್ತವೆ – ಮತ್ತು ಅದರ ಫಲಿತಾಂಶವಾಗಿ ಜಗಳಗಳು ಉಂಟಾಗುತ್ತವೆ. ನೀವು ಅವೈಕ್ತಿಕವಾಗಿರಲು ಕಲಿಯಬೇಕು. ಲೋಕದಲ್ಲಿಯೂ ಸಹ ಅದಿಲ್ಲದೆ ಕೆಲಸವನ್ನು ಉತ್ತಮವಾಗಿ ಮಾಡಲು ಸಾಧ್ಯವಿಲ್ಲ. ಯೋಗದ ಒಬ್ಬ ಸಾಧಕನಿಗೆ ಇದು ಎಷ್ಟು ಅಗತ್ಯ!

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/245**

**ಸಮಚಿತ್ತತೆಯ ಅಭ್ಯಾಸ**

ಕಷ್ಟಗಳನ್ನು ನಿಸ್ಸಹಾಯಕವಾಗಿ ಒಪ್ಪಿಕೊಳ್ಳುವುದು ಕರ್ಮ ಯೋಗದ ಭಾಗವಲ್ಲ – ಅಗತ್ಯವಿರುವುದು, ಅನುಕೂಲ ಹಾಗೂ ಪ್ರತಿಕೂಲ ಸನ್ನಿವೇಶಗಳನ್ನು, ಅದೃಷ್ಟ ಅಥವಾ ದುರದೃಷ್ಟಕರ ಘಟನೆಗಳನ್ನು, ಒಳ್ಳೆಯ ಅಥವಾ ಕೆಟ್ಟ ಅದೃಷ್ಟವನ್ನು, ಪ್ರಯತ್ನದ ಯಶಸ್ಸು ಅಥವಾ ವಿಫಲತೆಯನ್ನು ಎದುರಿಸುವಾಗ ಶಾಂತ ಸಮಚಿತ್ತತೆ. ನಾವು ಯಾವುದೇ ಹಿಂಜರಿಕೆ ಮತ್ತು ತೊಂದರೆಯಿಲ್ಲದೆ, ಯಾವುದೇ ರಾಜಸಿಕ ಆನಂದ ಅಥವಾ ದುಃಖವಿಲ್ಲದೆ, ಅಗತ್ಯವಿರುವ ಎಲ್ಲಾ ಕಾರ್ಯಗಳನ್ನು ಮಾಡುತ್ತಾ ಸಹಿಸಿಕೊಳ್ಳುವುದನ್ನು ಕಲಿಯಬೇಕು – ಆದರೆ

ತೊಂದರೆಗಳು ಅಥವಾ ವಿಫಲತೆಗಳು ಬಂದರೂ ನಿರಾಶೆಗೊಳ್ಳದೆ, ಜೀವನದ ಭಾರದಡಿ ಮುಳುಗದೆ ನಾವು ಮಾಡಬಹುದಾದದ್ದನ್ನು ಮಾಡುತ್ತಲೇ ಹೋಗಬೇಕು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/243**

## ದೈವೀ ಆರಾಧನೆ

ಅಧಿಕಾರದ ಎಳೆತ, ಮಹತ್ವಾಕಾಂಕ್ಷೆ, ಅಧಿಕಾರದ ಅಹಂಕಾರ ಇರಬಾರದು. ನಮಗೆ ಬರುವ ಅಧಿಕಾರ ಅಥವಾ ಅಧಿಕಾರಗಳನ್ನು ನಮ್ಮದು ಎಂದು ಪರಿಗಣಿಸಬಾರದು, ಆದರೆ ಅವುಗಳನ್ನು ದೈವೀ ಉದ್ದೇಶಕ್ಕಾಗಿ ದೈವದಿಂದ ಬಂದ ಕೊಡುಗೆಗಳು ಎಂದು ತಿಳಿಯಬೇಕು. ಅಲ್ಲಿ ಯಾವುದೇ ಮಹತ್ವಾಕಾಂಕ್ಷೆಯ ಅಥವಾ ಸ್ವಾರ್ಥದ ತಪ್ಪು ಬಳಕೆ, ಯಾವುದೇ ಪ್ರತಿಷ್ಠೆ ಅಥವಾ ದುರಭಿಮಾನ, ಯಾವುದೇ ಶ್ರೇಷ್ಠತೆಯ ಭಾವನೆ, ಯಾವುದೇ ಹಕ್ಕು ಸಾಧನೆ ಅಥವಾ ಸಾಧನದ ಅಹಂಕಾರವಿಲ್ಲದೆ, ಕೇವಲ ಸರಳ ಮತ್ತು ಶುದ್ಧ ಚೈತ್ಯ ಸಾಧನವಾಗಿ ಪ್ರಕೃತಿಯು ದೈವೀ ಸೇವೆಗೆ ಯೋಗ್ಯವಾದ ಯಾವುದೇ ರೀತಿಯಲ್ಲಿ ಕಾರ್ಯ ನಿರ್ವಹಿಸುವಂತೆ ಎಚ್ಚರಿಕೆ ವಹಿಸಬೇಕು.

*

ಎಲ್ಲ ಅಹಂಕಾರಯುಕ್ತ ಉದ್ದೇಶಗಳಿಂದ ಮುಕ್ತವಾಗಲು, ಮಾತು ಮತ್ತು ಕ್ರಿಯೆಯಲ್ಲಿ ಸತ್ಯದ ಬಗ್ಗೆ ಎಚ್ಚರಿಕೆಯಿಂದಿರಲು, ಸ್ವ–ಇಚ್ಛೆ ಮತ್ತು ಸ್ವ–ದೃಢೀಕರಣದಿಂದ ಮುಕ್ತವಾಗಿರಲು, ಎಲ್ಲಾ ವಿಷಯಗಳಲ್ಲಿ ಜಾಗರೂಕವಾಗಿರುವುದು ಪರಿಪೂರ್ಣ ಸೇವಕನಾಗಿರಲು ಅಗತ್ಯವಾದ ಷರತ್ತಾಗಿದೆ.

*

ಮನಸ್ಸಿನ ಸಿದ್ಧತೆಗೆ ಓದುವಿಕೆ ಹಾಗೂ ಅಧ್ಯಯನ ಉಪಯುಕ್ತವಾಗಬಹುದಾದರೂ, ಅವುಗಳು ಯೋಗದಲ್ಲಿ ಪ್ರವೇಶಿಸಲು ಅತ್ಯುತ್ತಮ ಸಾಧನವಾಗಲಾರವು. ಆಂತರಿಕ ಸ್ವಯಂ ಪ್ರೇರಣೆಯೇ ಸಾಧನ. ನೀವು ಒಂದಾಗಬೇಕಾಗಿರುವುದು ಶ್ರೀಮಾತೆಯವರ ಪ್ರಜ್ಞೆಯೊಂದಿಗೆ, ಮನಸ್ಸು ಹಾಗೂ ಹೃದಯದಲ್ಲಿ ನಿಜವಾದ ಆತ್ಮ ಸಮರ್ಪಣೆ ಮತ್ತು ಇಚ್ಛೆಯು ಅದಕ್ಕೆ ಸಾಧನಗಳಾಗಿವೆ. ಶ್ರೀಮಾತೆಯವರು ನೀಡಿದ ಕೆಲಸವು ಯಾವಾಗಲೂ ಆ ಆತ್ಮಾರ್ಪಣೆಗೆ ಉದ್ದೇಶಿತ ಕ್ಷೇತ್ರವಾಗಿದೆ, ಶ್ರೀಮಾತೆಯವರಿಗೆ

ಅದನ್ನು ಒಂದು ಅರ್ಪಣೆಯನ್ನಾಗಿ ಮಾಡುವುದರಿಂದ, ಸ್ವಯಂ–ಅರ್ಪಣೆಯ ಮುಖಾಂತರ ಶ್ರೀಮಾತೆಯವರ ಶಕ್ತಿಯು ಹಾಗೂ ಅವರ ಉಪಸ್ಥಿತಿಯು ಕಾರ್ಯ ಮಾಡುತ್ತಿರುವುದನ್ನು ನಾವು ಅನುಭವಿಸಬಹುದು.

*

ನಾವು ಹಿಮಾಲಯಕ್ಕೆ ಹೋದರೂ, ಜಡ ಧ್ಯಾನಕ್ಕೆ ನಮ್ಮನ್ನು ನಾವು ಯೋಗ್ಯರನ್ನಾಗಿ ಮತ್ತು ಜೀವನ ಹಾಗೂ ಶ್ರೀಮಾತೆಯವರ ಸೇವೆಗೆ ಹೆಚ್ಚು ಅಯೋಗ್ಯರನ್ನಾಗಿ ಮಾಡಿಕೊಳ್ಳುವ ಸಂಭವನೀಯತೆ ಇರುತ್ತದೆ – ಆದ್ದರಿಂದ ಮುಂದಿನ ಜನ್ಮದಲ್ಲಿ ಅವರ ಗುಣ ಸ್ವಭಾವವು ಆ ರೀತಿ ಇರುತ್ತದೆ. ಇದು, ಈ ಯೋಗದಲ್ಲಿ ಯಾವುದೇ ಉಪಯೋಗವಿರದ ಕೇವಲ ಹಳೆಯ ಕಲ್ಪನೆಗಳ ಪ್ರಭಾವವಾಗಿದೆ. ಇಲ್ಲಿ, ಶ್ರೀಮಾತೆಯವರ ಸಮೀಪವಿರುವ ಜೀವನದಲ್ಲಿ, ಕೆಲಸದಲ್ಲಿಯೇ, ನಾವು ಶ್ರೀಮಾತೆಯವರ ಪರಿಪೂರ್ಣ ಸಾಧನವಾಗಲು ಯೋಗ್ಯರಾಗಬೇಕು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/245–46**

ಖಂಡಿತವಾಗಿ, ದೊಡ್ಡದು ಮತ್ತು ಚಿಕ್ಕದು ಎಂಬ ಕಲ್ಪನೆಯು ಆಧ್ಯಾತ್ಮಿಕ ಸತ್ಯಕ್ಕೆ ಸಂಪೂರ್ಣ ಪರಕೀಯವಾದ ಸಂಗತಿಯಾಗಿದೆ. ಆಧ್ಯಾತ್ಮಿಕವಾಗಿ ಯಾವುದೂ ದೊಡ್ಡದಲ್ಲ ಅಥವಾ ಚಿಕ್ಕದಲ್ಲ. ಅಂತಹ ಆಲೋಚನೆಗಳು ಸಾಹಿತ್ಯ ಸಂಬಂಧಿ ಜನರ ಆಲೋಚನೆಗಳಂತಿವೆ. ಅವರು ಕವಿತೆಯನ್ನು ಬರೆಯುವುದು ಒಂದು ದೊಡ್ಡ ಕೆಲಸ ಮತ್ತು ಚಪ್ಪಲಿಗಳನ್ನು ಮಾಡುವುದು ಅಥವಾ ಅಡಿಗೆ ಬೇಯಿಸುವುದು ಒಂದು ಚಿಕ್ಕ ಮತ್ತು ಕೀಳು ಮಟ್ಟದ ಕೆಲಸವೆಂದು ಯೋಚಿಸುತ್ತಾರೆ. ಆದರೆ ಆತ್ಮನ ದೃಷ್ಟಿಯಲ್ಲಿ ಎಲ್ಲವೂ ಸಮಾನವಾಗಿದೆ – ಮತ್ತು ಅದನ್ನು ಮಾಡುವ ಅಂತರಾತ್ಮವು ಮಾತ್ರ ಮುಖ್ಯವಾಗಿದೆ. ಒಂದು ವಿಶೇಷ ರೀತಿಯ ಕಾರ್ಯದಲ್ಲಿಯೂ ಅದು ಇದೇ ರೀತಿ ಇರುತ್ತದೆ, ದೊಡ್ಡದು ಅಥವಾ ಚಿಕ್ಕದು ಎಂಬುದು ಏನೂ ಇಲ್ಲ.

*

ಇಷ್ಟವಿಲ್ಲದ್ದನ್ನು ನೀವು ಮಾಡಲೇಬೇಕು ಅಂತೇನಿಲ್ಲ, ಆದರೆ ನಿಮಗೆ ಇಷ್ಟಪಡದೇ ಇರುವುದನ್ನು ಬಿಟ್ಟು ಬಿಡಬೇಕು. ನಿಮಗೆ ಇಷ್ಟವಾದದ್ದನ್ನು ಮಾತ್ರ ಮಾಡುವುದು ಪ್ರಾಣವನ್ನು ತೃಪ್ತಿಪಡಿಸುವುದು ಮತ್ತು ನಿಮ್ಮ ಸಹಜ ಸ್ವಭಾವದ ಮೇಲೆ ಅದರ

ಆಧಿಪತ್ಯವನ್ನು ಕಾಯ್ದುಕೊಳ್ಳುವುದು – ಏಕೆಂದರೆ ಅದು ರೂಪಾಂತರಣವಾಗದ (ಇಷ್ಟ ಮತ್ತು ಅನಿಷ್ಟಗಳಿಂದ ನಿಯಂತ್ರಿಸಲ್ಪಡುವ) ಪ್ರಕೃತಿಯ ತತ್ತ್ವವೇ ಆಗಿದೆ. ಯಾವುದೇ ಕೆಲಸವನ್ನು ಮನಶ್ಶಾಂತಿಯಿಂದ ಮಾಡುವ ಸಾಮರ್ಥ್ಯವೇ ಕರ್ಮ ಯೋಗದ ತತ್ತ್ವವಾಗಿದೆ ಮತ್ತು ಅದನ್ನು ಶ್ರೀಮಾತೆಯವರಿಗಾಗಿ ಮಾಡುತ್ತಿದ್ದೇವೆ ಎಂಬ ಕಾರಣಕ್ಕೆ ಸಂತೋಷದಿಂದ ಮಾಡುವುದೇ ಈ ಯೋಗದಲ್ಲಿ ನಿಜವಾದ ಚೈತ್ಯ ಮತ್ತು ಪ್ರಾಣಿಕ ಷರತ್ತಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/247, 248**

## ಎಲ್ಲವೂ ಮನೋಭಾವದ ಮೇಲೆ ಅವಲಂಬಿಸಿದೆ

ವ್ಯವಹಾರವನ್ನು, ಪ್ರಾಚೀನ ಆಧ್ಯಾತ್ಮಿಕ ಭಾರತದಲ್ಲಿ ಪರಿಗಣಿಸಿದಂತೆ, ಕೆಟ್ಟ ಅಥವಾ ಕಲುಷಿತ ಎಂದು ನಾನು ಪರಿಗಣಿಸುವುದಿಲ್ಲವೆಂದು ಹೇಳಬಹುದು. ನಾನು ಹಾಗೆ ಮಾಡಿದರೆ, ಯಾರೋ ಒಬ್ಬರಿಂದ ಅಥವಾ ಮುಂಬೈನಲ್ಲಿ ಪೂರ್ವ ಆಫ್ರಿಕಾದ ಜೊತೆ ವ್ಯವಹಾರ ಮಾಡುವವರಿಂದ ಹಣ ಪಡೆಯಲು ಸಾಧ್ಯವಾಗುತ್ತಿರಲಿಲ್ಲ; ಅಲ್ಲದೆ ನಾವು ಅವರ ಕೆಲಸವನ್ನು ಮುಂದುವರೆಸಲು ಪ್ರೋತ್ಸಾಹ ಮಾಡುವ ಬದಲು, ಅದನ್ನು ಬಿಟ್ಟು ಬಿಡಿ ಮತ್ತು ಕೇವಲ ಆಧ್ಯಾತ್ಮಿಕ ಪ್ರಗತಿಯ ಮೇಲೆ ಮಾತ್ರ ಗಮನ ಕೊಡಿ ಎಂದು ಅವರಿಗೆ ಹೇಳಬೇಕಾಗುತ್ತಿತ್ತು. ನಾವು ಎಕ್ಸ್(X) ಅವರ ಆಧ್ಯಾತ್ಮಿಕ ಬೆಳಕಿನ ಹುಡುಕಾಟವನ್ನ ಮತ್ತು ಅವರ ಕಾರ್ಖಾನೆಯನ್ನ (ಮಿಲ್ಲು) ಹೇಗೆ ಒಟ್ಟಿಗೆ ಸಮನ್ವಯಗೊಳಿಸಬೇಕು? ನಾನು ಅವನಿಗೆ ಅವನ ಮಿಲ್ಲನ್ನು ಅದರ ಪಾಡಿಗೆ ಮತ್ತು ಸೈತಾನನಿಗೆ ಬಿಟ್ಟು, ಯಾವುದಾದರು ಆಶ್ರಮಕ್ಕೆ ಹೋಗಿ ಧ್ಯಾನ ಮಾಡಲು ಹೇಳಬೇಕಲ್ಲವೇ? ನನಗೆ ರಾಜಕೀಯವನ್ನು ಮಾಡುವ ನೈಪುಣ್ಯತೆ ಇರುವಂತೆ ವ್ಯವಹಾರವನ್ನು ಮಾಡುವ ನೈಪುಣ್ಯವನ್ನು ಹೊಂದಿದ್ದರೂ, ನಾನು ಅದನ್ನು ಯಾವುದೇ ಆಧ್ಯಾತ್ಮಿಕ ಅಥವಾ ನೈತಿಕ ಸಂಶಯವಿಲ್ಲದೆ ಮಾಡುತ್ತಿದ್ದೆ. ಕೆಲಸವನ್ನು ಮಾಡಿದ ಸ್ಫೂರ್ತಿಯ, ಕಟ್ಟಿದ ತತ್ತ್ವದ ಮತ್ತು ಅದರ ಬಳಕೆಯ ಮೇಲೆ ಎಲ್ಲವೂ ಅವಲಂಬಿಸಿರುತ್ತದೆ. ನಾನು ರಾಜಕೀಯ ಮಾಡಿದ್ದೇನೆ ಮತ್ತು ಅತ್ಯಂತ ಹಿಂಸಾತ್ಮಕ ರೀತಿಯ ಕ್ರಾಂತಿಕಾರಿ ರಾಜಕೀಯ, ಘೋರ ಕರ್ಮ ಮಾಡಿದ್ದೇನೆ, ಮತ್ತು ರಾಜಕೀಯವು ಯಾವಾಗಲೂ ಅಥವಾ ಒಂದು ಶುದ್ಧವಾದ ಉದ್ಯೋಗವಲ್ಲದಿದ್ದರೂ ಮತ್ತು ಯುದ್ಧವನ್ನು

ಆಧ್ಯಾತ್ಮಿಕ ಕ್ರಿಯೆಯ ಮಾರ್ಗ ಎಂದು ಕರೆಯಲು ಸಾಧ್ಯವಿಲ್ಲದಿದ್ದರೂ ಯುದ್ಧವನ್ನು ಬೆಂಬಲಿಸಿದ್ದೇನೆ ಮತ್ತು ಜನರನ್ನು ಅದಕ್ಕೆ ಕಳುಹಿಸಿದ್ದೇನೆ. ಆದರೆ ಕೃಷ್ಣನು, ಅರ್ಜುನನಿಗೆ ಅತ್ಯಂತ ಭಯಾನಕ ಯುದ್ಧವನ್ನು ಮುಂದುವರೆಸಲು ಕರೆ ನೀಡುತ್ತಾನೆ ಮತ್ತು ತನ್ನ ಉದಾಹರಣೆಯ ಮೂಲಕ ಜನರು ಎಲ್ಲಾ ರೀತಿಯ ಮಾನವ ಕೆಲಸಗಳನ್ನು (ಸರ್ವಕರ್ಮಾಣಿ) ಮಾಡಲು ಪ್ರೋತ್ಸಾಹಿಸುತ್ತಾನೆ. ಕೃಷ್ಣನು ಒಬ್ಬ ಆಧ್ಯಾತ್ಮಿಕ ವ್ಯಕ್ತಿ ಅಲ್ಲ ಮತ್ತು ಅರ್ಜುನನಿಗೆ ಅವನು ನೀಡಿದ ಸಲಹೆಯು ತಪ್ಪಾಗಿತ್ತು ಅಥವಾ ತಾತ್ಪರ್ಯದಲ್ಲಿ ತಪ್ಪಾಗಿತ್ತು ಎಂದು ನೀವು ವಾದಿಸುತ್ತೀರಾ? ಮುಂದುವರೆದು, ಒಬ್ಬ ವ್ಯಕ್ತಿ ಅವನ ಮೂಲಭೂತ ಸ್ವಭಾವ, ಮನೋಭಾವ ಮತ್ತು ಸಾಮರ್ಥ್ಯಕ್ಕೆ ಅನುಗುಣವಾಗಿ, ಮತ್ತು ಅವನ ಹಾಗೂ ಅದರ ಧರ್ಮದ ಪ್ರಕಾರ ಸರಿಯಾದ ರೀತಿಯಲ್ಲಿ ಮತ್ತು ಸರಿಯಾದ ಮನೋಭಾವದಿಂದ ನಿರ್ದೇಶಿಸಲ್ಪಟ್ಟ ಕೆಲಸವನ್ನು ಮಾಡುವ ಮೂಲಕ ದೈವೀ ಸಾನಿಧ್ಯಕ್ಕೆ ಹೋಗಬಹುದು ಎಂದು ಕೃಷ್ಣನು ಘೋಷಿಸುತ್ತಾನೆ. ಅವನು ವೈಶ್ಯ, ಬ್ರಾಹ್ಮಣ ಮತ್ತು ಕ್ಷತ್ರಿಯರ ಕಾರ್ಯ ಮತ್ತು ಧರ್ಮವನ್ನು ಮಾನ್ಯ ಮಾಡುತ್ತಾನೆ. ಅವನ ದೃಷ್ಟಿಯಲ್ಲಿ, ಒಬ್ಬ ವ್ಯಕ್ತಿ ವ್ಯವಹಾರ ಮಾಡಿ, ಹಣ ಸಂಪಾದಿಸಿ, ಲಾಭ ಗಳಿಸಿದಾಗಲೂ, ಆತ ಆಧ್ಯಾತ್ಮಿಕ ವ್ಯಕ್ತಿಯಾಗಿ, ಯೋಗಾಭ್ಯಾಸ ಮಾಡಿ, ಆಂತರಿಕ ಜೀವನ ಹೊಂದಲು ಸಾಧ್ಯವಿದೆ. ಗೀತೆಯು, ಕರ್ಮಗಳನ್ನು ಆಧ್ಯಾತ್ಮಿಕ ಮೋಕ್ಷದ ಒಂದು ಸಾಧನವೆಂದು ನಿರಂತರವಾಗಿ ಸಮರ್ಥಿಸುತ್ತಾ, ಭಕ್ತಿ ಮತ್ತು ಜ್ಞಾನದ ಜೊತೆಗೆ ಕರ್ಮಗಳ ಯೋಗವನ್ನೂ ಆದೇಶಿಸುತ್ತಿದೆ. ಆದರೆ ಕೃಷ್ಣನು, ಯಾವುದೇ ಬಯಕೆ ಇಲ್ಲದೆ, ಯಾವುದೇ ಫಲ ಅಥವಾ ಪ್ರತಿಫಲಕ್ಕೆ ಅಂಟಿಕೊಳ್ಳದೆ, ಯಾವುದೇ ಸ್ವಾರ್ಥಪರ ಮನೋಭಾವ ಅಥವಾ ಉದ್ದೇಶವಿಲ್ಲದೆ, ದೈವೀ ಚರಣಗಳಲ್ಲಿ ಒಂದು ನಿವೇದನೆಯಾಗಿ ಅಥವಾ ಸಮರ್ಪಣೆಯಾಗಿ ಕೆಲಸ ಮಾಡಬೇಕು ಎಂಬ ಉನ್ನತ ನಿಯಮವನ್ನು ಹೊರಿಸುತ್ತಾನೆ. ಕೆಲಸವನ್ನು ಧರ್ಮಾನುಸಾರ ಮಾಡಿದರೆ ಮತ್ತು ಸೂಕ್ತವಾಗಿ ಮಾಡಿದರೆ ಎಲ್ಲಾ ಕೆಲಸವನ್ನೂ ಮಾಡಬಹುದು, ಹಾಗೆ ಮಾಡಿದರೆ ಅದು ದೇವರಿಗೆ ಹತ್ತಿರವಾಗುವುದನ್ನು ಅಥವಾ ಆಧ್ಯಾತ್ಮ ಜ್ಞಾನ ಮತ್ತು ಆಧ್ಯಾತ್ಮ ಜೀವನದ ಪ್ರವೇಶವನ್ನು ತಡೆಯುವುದಿಲ್ಲ ಎನ್ನುವುದು ಸಾಂಪ್ರದಾಯಿಕ ಭಾರತೀಯ ದೃಷ್ಟಿಕೋನವಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/248–49**

## ಆಧ್ಯಾತ್ಮಿಕ ಪರಿಪೂರ್ಣತೆಯ ಕಡೆಗೆ ಒಂದು ಮಾರ್ಗ

ಸಹಜವಾಗಿಯೆ, ಆಧ್ಯಾತ್ಮಿಕ ಕ್ರಮದಲ್ಲಿ ತನ್ನದೇ ಆದ ಸ್ಥಾನ ಹೊಂದಿರುವ ಮತ್ತು ಅನೇಕರಿಗೆ ಅಗತ್ಯವಾಗಿರುವ ವೈರಾಗ್ಯದ ಮಾದರಿ ಕೂಡ ಅಲ್ಲಿದೆ. ಯಾವುದೇ ವ್ಯಕ್ತಿ, ವೈರಾಗ್ಯದ ಜೀವನ ನಡೆಸಲು ಸಾಧ್ಯವಿಲ್ಲದಿದ್ದರೆ ಅಥವಾ ಅತ್ಯಂತ ಬಡ ವಿರಕ್ತನಂತೆ ಸರಳ ಜೀವನ ನಡೆಸಲು ಸಾಧ್ಯವಿಲ್ಲದಿದ್ದರೆ, ಅವನು ಆಧ್ಯಾತ್ಮಿಕವಾಗಿ ಸಮಗ್ರವಾಗಿರಲು ಸಾಧ್ಯವಿಲ್ಲ. ನಿಸ್ಸಂಶಯವಾಗಿ, ಸಂಪತ್ತಿನ ಆಸೆ ಮತ್ತು ಹಣದ ಆಸೆಯು ಅವನ ಸ್ವಭಾವದಿಂದ ದೂರವಿರಬೇಕು, ಆಹಾರದ ಆಸೆ ಅಥವಾ ಇತರ ಯಾವುದೇ ಆಸೆ ಮತ್ತು ಈ ವಸ್ತುಗಳ ಮೇಲಿನ ಎಲ್ಲಾ ಬಾಂಧವ್ಯವನ್ನು ಅವನ ಪ್ರಜ್ಞೆಯಿಂದ ತ್ಯಜಿಸಬೇಕು. ಆದರೆ, ಆಧ್ಯಾತ್ಮಿಕ ಪರಿಪೂರ್ಣತೆಗೆ ತಪಸ್ವಿ ಜೀವನ ಶೈಲಿಯು ಅನಿವಾರ್ಯವೆಂದು ಅಥವಾ ಅದೇ ರೀತಿಯದು ಎಂದು ನಾನು ಪರಿಗಣಿಸುವುದಿಲ್ಲ. ಆಧ್ಯಾತ್ಮಿಕ ಸ್ವ–ಪ್ರಭುತ್ವದ ಮಾರ್ಗ ಮತ್ತು ದೇವರಿಗೆ ಆಧ್ಯಾತ್ಮಿಕ ಸ್ವ–ಸಮರ್ಪಣೆಯ ಮಾರ್ಗ ಅಲ್ಲಿದೆ, ಕ್ರಿಯೆಯ ಮಧ್ಯದಲ್ಲಿ ಅಥವಾ ಯಾವುದೇ ರೀತಿಯ ಕೆಲಸದಲ್ಲಿ ಅಥವಾ ದೇವರಿಂದ ಬೇಡಲ್ಪಟ್ಟ ಎಲ್ಲಾ ರೀತಿಯ ಕೆಲಸಗಳಲ್ಲೂ ಸಹ ಅಹಂಕಾರ ಮತ್ತು ಬಯಕೆಯನ್ನು ತ್ಯಜಿಸುತ್ತಿರುವುದು. ಅದು ಹಾಗೆ ಆಗಿರದಿದ್ದರೆ, ಭಾರತದಲ್ಲಿ ಜನಕ ಅಥವಾ ವಿದುರರಂತಹ ಮಹಾನ್ ಆಧ್ಯಾತ್ಮಿಕ ವ್ಯಕ್ತಿಗಳು ಇರುತ್ತಿರಲಿಲ್ಲ ಮತ್ತು ಕೃಷ್ಣನೂ ಸಹ ಇರುತ್ತಿರಲಿಲ್ಲ ಅಥವಾ ಕೃಷ್ಣನು ಬೃಂದಾವನ ಮತ್ತು ಮಥುರೆ ಮತ್ತು ದ್ವಾರಕೆಯ ಪ್ರಭುವಾಗಿರುತ್ತಿರಲಿಲ್ಲ ಅಥವಾ ರಾಜಕುಮಾರ ಮತ್ತು ಯೋಧನಾಗಿರುತ್ತಿರಲಿಲ್ಲ ಅಥವಾ ಕುರುಕ್ಷೇತ್ರದ ಸಾರಥಿಯಾಗಿರುತ್ತಿರಲಿಲ್ಲ, ಬದಲಿಗೆ ಇನ್ನೊಬ್ಬ ಮಹಾನ್ ಸನ್ಯಾಸಿ ಮಾತ್ರ ಆಗಿರುತ್ತಿದ್ದ. ಭಾರತೀಯ ಗ್ರಂಥಗಳು ಮತ್ತು ಭಾರತೀಯ ಸಂಪ್ರದಾಯಯು, ಮಹಾಭಾರತದಲ್ಲಿ ಮತ್ತು ಇತರ ಕಡೆಗಳಲ್ಲಿ, ಜೀವನದ ತ್ಯಾಗದ ಆಧ್ಯಾತ್ಮಿಕತೆಗೆ ಮತ್ತು ಕರ್ಮದ ಆಧ್ಯಾತ್ಮಿಕ ಜೀವನಕ್ಕೆ, ಎರಡಕ್ಕೂ ಸ್ಥಳಾವಕಾಶವನ್ನು ಮಾಡಿಕೊಡುತ್ತದೆ. ಭಾರತೀಯ ಸಂಪ್ರದಾಯ ಎನ್ನುವುದು ಮಾತ್ರವಿದೆ ಮತ್ತು ಎಲ್ಲಾ ರೀತಿಯ ಜೀವನ ಹಾಗೂ ಕಾರ್ಯಗಳ ಸ್ವೀಕೃತಿಯು ಭಾರತೀಯವಲ್ಲದವು, ಯುರೋಪಿಯನ್ ಅಥವಾ ಪಾಶ್ಚಾತ್ಯ ಮತ್ತು ಆಧ್ಯಾತ್ಮಿಕವಲ್ಲದವು ಎಂದು ನಾವು ಹೇಳಲು ಸಾಧ್ಯವಿಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/250**

## ಕೆಲಸದಲ್ಲಿ ದೇವನನ್ನು ನೆನಪಿಸಿಕೊಳ್ಳುವುದು

ಮೊದಲಿಗೆ, ಕೆಲಸದಲ್ಲಿ ಇರುವಿಕೆಯನ್ನು ನೆನಪಿಟ್ಟುಕೊಳ್ಳುವುದು ಸುಲಭವಲ್ಲ; ಆದರೆ ಕೆಲಸ ಮುಗಿದ ತಕ್ಷಣ ಇರುವಿಕೆಯ ಭಾವನೆಯನ್ನು ಮತ್ತೆ ಜೀವಂತಗೊಳಿಸಿದರೆ ಎಲ್ಲವೂ ಸರಿಯಾಗಿರುತ್ತದೆ. ಸಮಯದ ಜೊತೆಗೆ, ಕೆಲಸದಲ್ಲೂ ಸಹ ಇರುವಿಕೆಯ ಭಾವನೆಯು ಸ್ವಯಂಚಾಲಿತವಾಗುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/258–59**

## ಕೆಲಸದ ಬಗ್ಗೆ ಯೋಚಿಸುವುದು

ಕೆಲಸವನ್ನು ಮಾಡುವಾಗ ಮಾತ್ರ ಅದರ ಬಗ್ಗೆ ಯೋಚಿಸಿ, ಅದಕ್ಕೂ ಮೊದಲಲ್ಲ ಮತ್ತು ನಂತರವೂ ಅಲ್ಲ.

ಮಾಡಿ ಮುಗಿಸಿದ ಕೆಲಸದ ಮೇಲೆ ನಿಮ್ಮ ಮನಸ್ಸನ್ನು ಹೋಗಲು ಬಿಡಬೇಡಿ. ಅದು ಭೂತಕ್ಕೆ ಸಂಬಂಧಿಸಿದ್ದು ಮತ್ತು ಅದನ್ನು ಮತ್ತೊಮ್ಮೆ ನಿರ್ವಹಿಸುವುದು ಶಕ್ತಿಯ ನಿರುಪಯುಕ್ತತೆಯಾಗಿದೆ.

ಮಾಡಬೇಕಾದ ಕೆಲಸದ ಬಗ್ಗೆ, ನಿಮ್ಮ ಮನಸ್ಸನ್ನು ಪ್ರಯಾಸಪಡಲು ಬಿಡಬೇಡಿ. ನಿಮ್ಮಲ್ಲಿ ಕಾರ್ಯ ನಿರ್ವಹಿಸುವ ಶಕ್ತಿಯು ಅದರ ಸರಿಯಾದ ಸಮಯದಲ್ಲಿ ಅದನ್ನು ನೋಡಿಕೊಳ್ಳುತ್ತದೆ.

ಮನಸ್ಸಿನ ಈ ಎರಡು ಅಭ್ಯಾಸಗಳು, ಮಾರ್ಪಡಿಸುವ ಬಲವು ತೆಗೆದು ಹಾಕಲು ಒತ್ತಾಯಪಡಿಸುತ್ತಿರುವ ಹಿಂದಿನ ಕಾರ್ಯ ಚಟುವಟಿಕೆಗೆ ಸೇರಿದ್ದು, ಮತ್ತು ಅವುಗಳಲ್ಲಿನ ಭೌತಿಕ ಮನಸ್ಸಿನ ಪಟ್ಟು ನಿಮ್ಮ ನೋವಿನ ಮತ್ತು ಆಯಾಸದ ಕಾರಣವಾಗಿದೆ. ನಿಮ್ಮ ಮನಸ್ಸು ಅದರ ಕಾರ್ಯ ಬೇಕಾದಾಗ ಮಾತ್ರ ಕೆಲಸ ಮಾಡಲಿ ಎಂದು ನೀವು ನೆನಪಿಟ್ಟುಕೊಳ್ಳಬಹುದಾದರೆ, ನೋವು ಕಡಿಮೆಯಾಗಿ ಮಾಯವಾಗುತ್ತದೆ. ಇದು ನಿಜವಾಗಿಯೂ, ಅತಿಮಾನಸ ಕಾರ್ಯವು ಭೌತಿಕ ಮನಸ್ಸನ್ನು ಸ್ವಾಧೀನಪಡಿಸಿಕೊಳ್ಳುವ ಮತ್ತು ಅದರೊಳಗೆ ಬೆಳಕಿನ ಸ್ವಯಂಪ್ರೇರಿತ ಕ್ರಿಯೆಯನ್ನು ತರುವ ಮೊದಲಿನ ಒಂದು ಪರಿವರ್ತನೆಯ ಕ್ರಿಯೆಯಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/287**

## ಭೌತಿಕ ಸಂಗತಿಗಳೊಂದಿಗೆ ವ್ಯವಹರಿಸುವುದು

ಪ್ರಾಪಂಚಿಕ ವಸ್ತುಗಳನ್ನು ತಿರಸ್ಕರಿಸಬಾರದು – ಅವುಗಳಿಲ್ಲದೆ ಪ್ರಾಪಂಚಿಕ ಜಗತ್ತಿನಲ್ಲಿ ಯಾವುದೇ ಪ್ರಕಟಣೆ ಸಾಧ್ಯವಿಲ್ಲ.

*

ಭೌತಿಕ ವಸ್ತುಗಳಿಗೆ ಅವುಗಳದೇ ಆದ ಜೀವನ ಮತ್ತು ಮೌಲ್ಯ ಇರುತ್ತದೆ, ಇದು ಅವುಗಳ ಬೆಲೆಯನ್ನು ಅವಲಂಬಿಸಿರುವುದಿಲ್ಲ. ಭೌತಿಕ ವಸ್ತುಗಳನ್ನು ಗೌರವಿಸುವುದು ಮತ್ತು ಅವುಗಳನ್ನು ಎಚ್ಚರಿಕೆಯಿಂದ ಮತ್ತು ಸೂಕ್ಷ್ಮವಾಗಿ ಬಳಸುವುದು ಯೋಗದ ಒಂದು ಭಾಗವಾಗಿದೆ, ಏಕೆಂದರೆ ಅದಿಲ್ಲದೆ ವಸ್ತುವಿನ ಮೇಲೆ ಪ್ರಭುತ್ವವು ಬರಲಾರದು.

*

ಭೌತಿಕ ವಸ್ತುಗಳ ಬಗ್ಗೆ ನೀವು ಭಾವಿಸುವುದು ನಿಜವಾಗಿದೆ – ಅವುಗಳಲ್ಲಿ ಒಂದು ಪ್ರಜ್ಞೆ ಇದೆ, ಅದು ನಮಗೆ ತಿಳಿದಿರುವ ಮನುಷ್ಯ ಮತ್ತು ಪ್ರಾಣಿಗಳ ಜೀವನ ಮತ್ತು ಪ್ರಜ್ಞೆಯಲ್ಲ, ಆದರೆ ಗುಪ್ತ ಹಾಗೂ ನಿಜವಾದದ್ದು. ಆದ್ದರಿಂದ ಭೌತಿಕ ವಸ್ತುಗಳ ಬಗ್ಗೆ ನಾವು ಗೌರವವನ್ನು ಹೊಂದಿರಬೇಕು, ಮತ್ತು ಅವುಗಳನ್ನು ಸರಿಯಾಗಿ ಬಳಸಬೇಕು, ಅವುಗಳನ್ನು ದುರುಪಯೋಗ ಮತ್ತು ಹಾಳು ಮಾಡಬಾರದು, ಕೀಳಾಗಿ ಕಾಣಬಾರದು ಅಥವಾ ಒರಟು ನಿರ್ಲಕ್ಷ್ಯತನದಿಂದ ನಿರ್ವಹಿಸಬಾರದು. ಎಲ್ಲವೂ ಪ್ರಜ್ಞೆಯಾಗಿರುವ ಅಥವಾ ಜೀವಿತವಾಗಿರುವ ಅನುಭವವು ಯಾವಾಗ ಬರುತ್ತದೆ ಎಂದರೆ, ಕೇವಲ ಮನಸ್ಸು ಮಾತ್ರವಲ್ಲದೆ, ನಮ್ಮ ಸ್ವಂತ ಭೌತಿಕ ಪ್ರಜ್ಞೆಯು ತನ್ನ ಅಸ್ಪಷ್ಟತೆಯಿಂದ ಜಾಗೃತಗೊಂಡಾಗ ಮತ್ತು ಎಲ್ಲಾ ವಸ್ತುಗಳಲ್ಲಿರುವ ಆ ಏಕತೆಯ ಮತ್ತು ದೇವನ ಇರುವಿಕೆಯನ್ನು ಅರಿತಾಗ.

*

ಯಾವುದೇ ಚಟುವಟಿಕೆಯನ್ನು ದೇವರಿಗೆ ಅರ್ಪಿಸಿದಾಗ ಅಥವಾ ಅದನ್ನು ದೈವೀ ಶಕ್ತಿಯಿಂದ ಮಾಡಲ್ಪಟ್ಟಿದೆ ಎಂಬ ಪ್ರಜ್ಞೆ ಅಥವಾ ನಂಬಿಕೆಯೊಂದಿಗೆ ಮಾಡಿದಾಗ ಅದನ್ನು ಸಾಧನೆಯ ಭಾಗವಾಗಿ ಪರಿಗಣಿಸಬಹುದು. ಅದುವೇ ಮಹತ್ವದ ಅಂಶ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/287–90 – ಶ್ರೀ ಅರವಿಂದರು**

ಮಹಾಸರಸ್ವತಿಯ ಧ್ಯೇಯೋದ್ದೇಶವು, ಪ್ರಪಂಚಕ್ಕೆ ಪರಿಪೂರ್ಣತೆಯ
ಅವಶ್ಯಕತೆಯ ಬಗ್ಗೆ ಜಾಗೃತಿ ಮೂಡಿಸುವುದಾಗಿದೆ ...

**– ಶ್ರೀಮಾತೆ**

## ದೇವಬಿಂಬಗಳ ಹಿಂದಿರುವ ವಾಸ್ತವ

*ಮಹಾಸರಸ್ವತಿ ಮತ್ತು ಮಹಾಲಕ್ಷ್ಮಿ ಹೇಗೆ ಕಾಣುತ್ತಾರೆ?*

*ಏನು?*

*ಅವರು ಹೇಗೆ ಕಾಣುತ್ತಾರೆ?*

ನನ್ನ ಮಗು, ನೀನು ಅವರನ್ನು ನೋಡಲೇಬೇಕು. ನೀನು ಅವರನ್ನು ನೋಡಿದಾಗ ನಿನಗೆ ತಿಳಿಯುತ್ತದೆ.... (ಮಹಾಸರಸ್ವತಿ ಮತ್ತು ಮಹಾಲಕ್ಷ್ಮಿ) ಅವಳು ತನ್ನನ್ನು ತಾನು ಯಾರಿಗೆ ತೋರ್ಪಡಿಸಿಕೊಳ್ಳುತ್ತಾಳೆ ಎನ್ನುವುದನ್ನು ಅನುಸರಿಸಿ, ಅವಳು ಮಾಡುವ ಕಾರ್ಯವನ್ನು ಅನುಸರಿಸಿ... ಪ್ರತಿ ಸಂದರ್ಭದಲ್ಲೂ ಅವಳ ಅಂಶವು ಬೇರೆ ಬೇರೆಯಾಗಿರುತ್ತದೆ... ಈ ದೇಹದಲ್ಲಿ ಕಾಣುವ ಅವಳಲ್ಲ.

*ನಾವು ನೋಡುವ ಮಹಾಸರಸ್ವತಿಯ ರೂಪಗಳು ನಿಜವಾದವುಗಳೇ?*

ಓಹ್ ದೇವರೆ! (ನಗು) ಒಂದು ಚಿಕ್ಕ ಮಗು ಯಾರದೋ ಒಬ್ಬರ ಭಾವಚಿತ್ರವನ್ನು ಬಿಡಿಸಿಲು ಪ್ರಯತ್ನಿಸಿದಾಗ, ಅದು ಆ ವ್ಯಕ್ತಿಯನ್ನು ಹೋಲುತ್ತದೆಯೇ? ಈ ಸಂಗತಿಯೂ ಸಹ ಹೀಗೆಯೆ ಇರುತ್ತದೆ, ಕೆಲವೊಮ್ಮೆ ಕೆಟ್ಟದ್ದೂ ಸಹ! ಏಕೆಂದರೆ ಮಗು ಮುಗ್ಧ ಹಾಗೂ ಪ್ರಾಮಾಣಿಕವಾಗಿದೆ, ಆದರೆ ದೇವರ ಮೂರ್ತಿಗಳನ್ನು ಮಾಡುವವನು ತನ್ನಲ್ಲಿ ನಿಶ್ಚಿತ ವಿಚಾರಗಳನ್ನು ಮತ್ತು ಪೂರ್ವ ಕಲ್ಪಿತ ಕಲ್ಪನೆಗಳನ್ನು ತುಂಬಿಕೊಂಡಿರುತ್ತಾನೆ, ಅಥವಾ ಬೇರೆಯವರು ಈ ವಿಷಯದ ಬಗ್ಗೆ ಹೇಳಿದ್ದನ್ನೆಲ್ಲ ಮತ್ತು ಗ್ರಂಥಗಳಲ್ಲಿ ಏನನ್ನು ಬರೆಯಲಾಗಿದೆಯೋ ಮತ್ತು ಜನರಿಂದ ಏನನ್ನು ನೋಡಿಲ್ಪಟ್ಟಿರುತ್ತದೆಯೋ ಅದನ್ನೆಲ್ಲ ಅವನು ತನ್ನಲ್ಲಿ ತುಂಬಿಕೊಂಡಿರುತ್ತಾನೆ. ಆದ್ದರಿಂದ ಅವನು ಎಲ್ಲದರಿಂದ ನಿರ್ಬಂಧಿಸಲ್ಪಟ್ಟಿದ್ದಾನೆ. ಕೆಲವೊಮ್ಮೆ, ಕಾಲಕಾಲಕ್ಕೆ, ಒಂದು ಆಂತರಿಕ ದೂರದೃಷ್ಟಿವುಳ್ಳ, ಒಂದು ದೊಡ್ಡ ಆಕಾಂಕ್ಷೆ ಇರುವಂಥ, ಆತ್ಮದ ಹಾಗೂ ದೂರದೃಷ್ಟಿಯ ಶುದ್ಧತೆ ಇರುವಂಥ,

ಯೋಗ್ಯವಾದ ಉತ್ತಮವಾದ ಸಂಗತಿಗಳನ್ನು ಮಾಡಿದಂಥ ಕೆಲವು ಕಲಾವಿದರಿದ್ದಾರೆ. ಆದರೆ ಇದು ಬಹಳೇ ವಿರಳವಾಗಿದೆ. ಮತ್ತು ಸಾಮಾನ್ಯವಾಗಿ, ಇದು ಬಹುತೇಕ ಅದರ ವಿರುದ್ಧವಾಗಿದೆ ಎಂದು ನಾನು ನಂಬುತ್ತೇನೆ. ನಿಜವಾಗಿಯೂ ಮಾನವ ಸೃಷ್ಟಿಗಳಾದ ಈ ಕೆಲವು ರೂಪಗಳನ್ನು ಪ್ರಾಣಿಕ ಮತ್ತು ಮಾನಸಿಕ ಜಗತ್ತುಗಳಲ್ಲಿ ನಾನು ನೋಡಿದ್ದೇನೆ. ಅವ್ಯಕ್ತದಿಂದ ಪ್ರಕಟಗೊಳ್ಳುವಂಥ ಒಂದು ಶಕ್ತಿಯು ಅಲ್ಲಿದೆ. ಆದರೆ ಮಿಥ್ಯೆಯ ಈ ತ್ರಿಲೋಕಗಳಲ್ಲಿ, ನಿಜವಾಗಿಯೂ ಮನುಷ್ಯನು ದೇವರನ್ನು ಹೆಚ್ಚು–ಕಡಿಮೆ ತನ್ನ ಸ್ವಂತ ಪ್ರತಿರೂಪದಲ್ಲಿ ಸೃಷ್ಟಿಸಿದ್ದಾನೆ ಮತ್ತು ಮನುಷ್ಯನ ರೂಪಕ ಯೋಚನೆಗಳ ಪರಿಣಾಮವಾದಂಥ ರೂಪಗಳಲ್ಲಿ ಪ್ರಕಟಗೊಳ್ಳುವಂಥ ಜೀವಿಗಳು ಅಲ್ಲಿವೆ. ಮತ್ತು ಇಲ್ಲಿ, ನೀವು ನೋಡಿ, ಇದು ನಿಜವಾಗಿಯೂ ಭಯಾನಕವಾಗಿದೆ! ನಾನು ಈ ರಚಿಸುವಿಕೆಗಳಲ್ಲಿ ಕೆಲವನ್ನು ನೋಡಿದ್ದೇನೆ... (ಮೌನ) ಮತ್ತು ಇದೆಲ್ಲಾ ತುಂಬಾ ಅಸ್ಪಷ್ಟವಾಗಿದೆ, ತುಂಬಾ ಅಗ್ರಾಹ್ಯವಾಗಿದೆ, ಅವ್ಯಕ್ತವಾಗಿದೆ....

ಕೆಲವು ದೇವರುಗಳನ್ನು ಬೇರೆ ದೇವರುಗಳಿಗಿಂತ ಹೆಚ್ಚು ಕೆಟ್ಟ ರೀತಿಯಲ್ಲಿ ನಡೆಸಿಕೊಳ್ಳಲಾಗುತ್ತದೆ. ಉದಾಹರಣೆಗೆ, ಆ ಪಾಪದ ಮಹಾಕಾಳಿ, ಅವಳಿಗೆ ಏನೆಲ್ಲಾ ಮಾಡಲಾಗುತ್ತದೆ ಎನ್ನುವುದು ನಿಮಗೆ ಗೊತ್ತೆ!... ಅದು ತುಂಬಾ ಭಯಾನಕವಾಗಿದೆ, ಅದನ್ನು ಊಹಿಸಲೂ ಆಗದು! ಆದರೆ ಈ ರೂಪವು ತುಂಬಾ ಕೆಳ ಜಗತ್ತಿನಲ್ಲಿ ಮಾತ್ರ ಇರುತ್ತದೆ... ಹೌದು, ಅತ್ಯಂತ ಕೆಳ ಪ್ರಾಣಿಕ ಜಗತ್ತಿನಲ್ಲಿ; ಅದು ಮೂಲ ಪುರುಷನಿಂದ ಹೊಂದಿರುವುದು ಏನೆಂದರೆ, ಮೂಲದಿಂದ ಅತಿ ದೂರದಲ್ಲಿರುವ ಗುರುತಿಸಲಾಗದ ಒಂದು ಪ್ರತಿಬಿಂಬವನ್ನು. ಆದಾಗ್ಯೂ, ಸಾಮಾನ್ಯವಾಗಿ, ಮಾನವ ಪ್ರಜ್ಞೆಯಿಂದ ಆಕರ್ಷಿಸಲ್ಪಡುವುದು ಇದೇ ಆಗಿದೆ. ಒಂದು ಪ್ರತಿಮೆಯನ್ನು ಮಾಡಿದಾಗ, ಪೂಜಾರಿಯು ಅದನ್ನು ಒಂದು ರೂಪಕ್ಕೆ ತರುತ್ತಾನೆ – ಆ ಉತ್ಸವವು ಸರಿಯಾದ ರೀತಿಯಲ್ಲಿ ನಡೆದಾಗ, ಅವನು ತನ್ನನ್ನು ತಾನು ಆವಾಹನೆಯ ಆಂತರಿಕ ಸ್ಥಿತಿಯಲ್ಲಿ ಇಟ್ಟುಕೊಂಡು, ಪ್ರತಿಮೆಗೆ ಒಂದು ಶಕ್ತಿ ಅಥವಾ ಪ್ರಭಾವವನ್ನು ನೀಡಲು, ಪರಮಾತ್ಮನಿಂದ ಒಂದು ರೂಪವನ್ನು ಅಥವಾ ಒಂದು ಹೊರಸೂಸುವಿಕೆಯನ್ನು ತರಲು ಪ್ರಯತ್ನಿಸುತ್ತಾನೆ – ಆ ಪೂಜಾರಿ ನಿಜವಾಗಿಯೂ ಆವಾಹನೆ ಮಾಡುವ ಶಕ್ತಿ ಹೊಂದಿದ ವ್ಯಕ್ತಿಯಾಗಿದ್ದರೆ, ಅವನು ಯಶಸ್ವಿಯಾಗಬಹುದು. ಆದರೆ ಸಾಮಾನ್ಯವಾಗಿ – ಎಲ್ಲದಕ್ಕೂ ಒಂದು ಅಪವಾದವಿರುತ್ತವೆ – ಆದರೆ ಸಾಮಾನ್ಯವಾಗಿ ಈ ಜನರು ಸಾಮಾನ್ಯ ಕಲ್ಪನೆಗಳಲ್ಲಿ

ಸಂಪ್ರದಾಯ ಪ್ರಕಾರ ಪಳಗಿಸಲ್ಪಟ್ಟಿರುತ್ತಾರೆ. ಹೀಗಾಗಿ, ಅವರು ಬೇಡಿಕೊಳ್ಳುತ್ತಿರುವಂಥ ದೇವರ ಬಗ್ಗೆ ಯೋಚಿಸುವಾಗ, ಅದಕ್ಕೆ ನೀಡಲಾಗಿರುವ ಎಲ್ಲಾ ಗುಣ ವಿಶೇಷಣಗಳ ಹಾಗೂ ರೂಪಗಳ ಬಗ್ಗೆ ಅವರು ಯೋಚಿಸುತ್ತಾರೆ, ಮತ್ತು ಈ ಆವಾಹನೆಯು ಸಾಮಾನ್ಯವಾಗಿ ಪ್ರಾಣಿಕ ಜಗತ್ತಿನ ಅಸ್ತಿತ್ವಗಳಿಗೆ ಅಥವಾ ಹೆಚ್ಚೆಂದರೆ ಮಾನಸಿಕ ಜಗತ್ತಿನ ಅಸ್ತಿತ್ವಗಳಿಗೆ ಮಾಡಲಾಗುತ್ತದೆ, ಆದರೆ ಸ್ವಂತ ಪುರುಷನಿಗೆ ಅಲ್ಲ. ಒಂದು ಪ್ರತಿಮೆಯಲ್ಲಿ ಅಥವಾ ಇನ್ನೊಂದರಲ್ಲಿ ಪ್ರಕಟಗೊಳ್ಳುವುದು ಈ ಸಣ್ಣ ಅಸ್ತಿತ್ವಗಳು. ಚಿಕ್ಕ ಗುಡಿಗಳಲ್ಲಿರುವ ಅಥವಾ ಮನೆಗಳಲ್ಲಿರುವ ಈ ವಿಗ್ರಹಗಳು – ಕೆಲವರು ತಮ್ಮ ಮನೆಗಳಲ್ಲಿ ಪುಟ್ಟ ಗೋಪುರಗಳನ್ನು ಮಾಡಿಸಿರುತ್ತಾರೆ, ನಿಮಗೆ ಗೊತ್ತೆ, ಮತ್ತು ಅವರು ಪೂಜಿಸುವ ದೇವರ ಪ್ರತಿಮೆಯನ್ನು ಅಲ್ಲಿ ಇಡುತ್ತಾರೆ – ಈ ಅಸ್ತಿತ್ವಗಳು ಅವುಗಳಲ್ಲಿ ಪ್ರಕಟಗೊಳ್ಳುತ್ತವೆ; ಕೆಲವೊಮ್ಮೆ ಪರಿಣಾಮಗಳು ದುರದೃಷ್ಟಕರವಾಗಿರುತ್ತವೆ, ಈ ರೂಪಗಳು (ದೇವರ ವಿಗ್ರಹಗಳು) ಮೂಲ ದೈವೀ ಪುರುಷನಿಂದ ಬಹಳಷ್ಟು ದೂರವಿರುವುದರಿಂದ... ಅವುಗಳು ಅವಲಕ್ಷಣದ ರೂಪಗಳಾಗಿ ತೋರುತ್ತವೆ. ಕೆಲವು ಕುಟುಂಬಗಳಲ್ಲಿ ಪೂಜಿಸುವಂಥ ಕಾಳಿ ವಿಗ್ರಹಗಳು ಸಾಕ್ಷಾತ್ ರಾಕ್ಷಸಗಳಾಗಿರುತ್ತವೆ!

ವಿನಾಶಕಾರಿ ಪ್ರಭಾವದಿಂದ ಸಂಪೂರ್ಣವಾಗಿ ಹೊರಬರಲು, ಆ ಮೂರ್ತಿಯನ್ನು ಒಯ್ದು ಗಂಗಾ ನದಿಯಲ್ಲಿ ಎಸೆಯಲು ಸಲಹೆ ನೀಡಿದ್ದೇನೆ, ಎಂದು ನಾನು ನಿಮಗೆ ಹೇಳಬಲ್ಲೆ, ನನ್ನನ್ನು ನಂಬಿ. ವಾಸ್ತವವಾಗಿ, ಈ ಸಲಹೆಯು ತುಂಬಾ ಸಫಲವಾಗಿದೆ.... ಇವುಗಳಲ್ಲಿ ಕೆಲವು... ಭಾಗ್ಯಶಾಲಿಯಲ್ಲದ ಸಾನಿಧ್ಯಗಳಾಗಿವೆ. ಆದರೆ ಇದು ಮನುಷ್ಯನ ಸ್ವಯಂಕೃತ ಅಪರಾಧ. ಇದು ಪರಮಾತ್ಮನ ತಪ್ಪಲ್ಲ. ಪರಮಾತ್ಮನ ಮೇಲೆ ಆಪಾದನೆ ಹೊರಿಸುವುದು ತಪ್ಪಾಗುತ್ತದೆ. ಅದು ಮನುಷ್ಯನ ತಪ್ಪು. ಮನುಷ್ಯ, ದೇವರಿಗೆ ತನ್ನ ಸ್ವಂತ ರೂಪವನ್ನು ಕೊಡಲು ಬಯಸುತ್ತಾನೆ. ಕೆಲವು ದುಷ್ಟ ಜನರು ಅವರನ್ನು ಇನ್ನೂ ಹೆಚ್ಚು ನಿರಂಕುಶರನ್ನಾಗಿ ಮಾಡುತ್ತಾರೆ; ಒಳ್ಳೆಯ ಜನರು ಅವರನ್ನು ಇನ್ನೂ ಹೆಚ್ಚು ಒಳ್ಳೆಯವರನ್ನಾಗಿ ಮಾಡುತ್ತಾರೆ; ಅಂದರೆ, ಮಾನವರು ತಮ್ಮ ಸ್ವಂತ ದೋಷಗಳನ್ನು ಸ್ವಲ್ಪ ಹೆಚ್ಚು ವರ್ಧಿಸಿಕೊಂಡಿದ್ದಾರೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 6/274–76**

# ಚೇತನದ ಸೋಪಾನ ಮತ್ತು ಮಹಾಸರಸ್ವತಿಯ ಕಾರ್ಯಗಳು

**– ಅನು: ಶ್ರೀ ಕಿಶೋರಕುಮಾರ ಕಾಸಾರ, ಕಲಬುರ್ಗಿ**

**ಚೇತನದ ಸೋಪಾನಸರಣಿ**

ಪ್ರಜ್ಞೆಯೆಂಬುದು ವಿಕಸನದ ನಿಃಶ್ರೇಣಿಯಾಗಿದೆ. ಪ್ರತಿ ಮಹಾಯುಗದಲ್ಲಿ ಉದಯಿಸುವ ಯುಗ ಪ್ರವರ್ತಕನೋರ್ವನು ಆ ವಿಕಸನದ ನಿಃಶ್ರೇಣಿಗೆ ಮತ್ತೊಂದು ಊರ್ಧ್ವ ಮೆಟ್ಟಿಲನ್ನು ಜೋಡಿಸಿ, ಅಲ್ಲಿಯವರೆಗೂ ಈ ಮರ್ತ್ಯ ಪ್ರಜ್ಞೆಯು ತಲುಪಲು ಸಾಧ್ಯವಾಗದೇ ಇರುವ ನವ್ಯ ಸಂಪದವೊಂದನ್ನು ಸೇರುವ ಸಾಮರ್ಥ್ಯವನ್ನು ಹೊಂದಿರುತ್ತಾನೆ. ಈ ಮಹಾನ್ವೇಷಣೆಯ ಕಾರ್ಯದ ನಂತರ ಮರ್ತ್ಯದ ಪ್ರತಿಯೋರ್ವ ಪ್ರಜ್ಞೆಯು ಭೌತಿಕತೆಯಿಂದ ನೇರವಾಗಿ ಔನ್ನತ್ಯವನ್ನು ತಲುಪಲು ಸಾಧ್ಯವಿದೆ. ಆದರೆ, ಅದನ್ನು ಸಾಧಿಸಲು ಪೂರ್ವ ದ್ರಷ್ಟಾರರು ನೆಟ್ಟ ವಿಕಸನದ ನಿಃಶ್ರೇಣಿಯನ್ನು ಧಾರಣಗೈಯುವುದು ಅವಶ್ಯಕವಾಗಿರುತ್ತದೆ. ಆದರೆ, ಮರ್ತ್ಯವು ಪ್ರಜ್ಞಾರೋಹಣದ ಈ ಪ್ರಥಮ ಹಂತದಲ್ಲೇ ವಿಫಲಗೊಳ್ಳುತ್ತದೆ. ಹಾಗಾಗಿ ಆ ಔನ್ನತ್ಯವು ಸದಾಕಾಲ ನಮ್ಮಿಂದ ದೂರವೇ ಉಳಿದುಬಿಡುತ್ತದೆ. ಆದರೆ ಮಹಾನ್ವೇಷಣೆಯನ್ನು ಸಾಧಿಸಲಿರುವ ಮಹಾಯುಗದ ಆ ಕ್ಷಣದಲ್ಲಿ ಮರ್ತ್ಯ ಪ್ರಜ್ಞೆಯು ವಿಕಸನದ ನಿಃಶ್ರೇಣಿಗೆ ಒಂದೊಂದೇ ಹೊಸ ಮೆಟ್ಟಿಲುಗಳನ್ನು ಜೋಡಿಸುತ್ತ ಭೂಮಧ್ಯದಿಂದ ಖಮಧ್ಯಕ್ಕೂ, ಖಮಧ್ಯದಿಂದ ಖೇಖಮಧ್ಯಕ್ಕೂ ಚಿರಂತನವಾಗಿ ಆರೋಹಿಸುತ್ತಲೇ ಹೋಗಬಹುದು. ಅಲ್ಲದೆ ಆ ಹಂತದಲ್ಲಿ ಪ್ರಜ್ಞೆಯು ಮರ್ತ್ಯಕ್ಕಿರುವ ತನ್ನ ಕೊಂಡಿಯನ್ನು ಕಳಚಿಕೊಳ್ಳದಲೇ ತನ್ನ ಸಾಧನೆಯಲ್ಲಿ ಮುನ್ನುಗ್ಗಬಹುದು. ಈ ಸಂದರ್ಭದಲ್ಲಿ ಅಧಿರೋಹಣದ ಕ್ರಮದಲ್ಲಿ ಮೇಲೆರುತ್ತಿರುವ ಪ್ರಜ್ಞೆ ಮತ್ತು ಆ ಪ್ರಜ್ಞೆಯ ಮೂಲನೆಲೆಯಾದ ಮರ್ತ್ಯದ ಮಧ್ಯದಲ್ಲಿರುವ ಅನಂತಶೂನ್ಯವು ಆ ಎರಡೂ ಕೋಶಗಳ ಮಧ್ಯದಲ್ಲಿರುವ ಸಂಪರ್ಕವನ್ನು ಶಾಶ್ವತವಾಗಿ ಕಡಿತಗೊಳಿಸುವ ಸಾಧ್ಯತೆಯಿರುತ್ತದೆ. ಆದರೆ, ಬುವಿಯಿಂದೇರಿ ಭೂಮದೆಡೆ ದೌಡಾಯಿಸುತ್ತಿರುವ ಪ್ರಜ್ಞೆಗೆ ಆ ಸಂಪರ್ಕ ಸೇತುವೆಯನ್ನು ಕಡೆತನಕ ಉಳಿಸಿಕೊಂಡು ತನ್ನ ಗುರಿ ಶಿಖರವನ್ನು ತಲುಪುವ ಸಾಮರ್ಥ್ಯವಿರುತ್ತದೆ. ಆ ಮೂಲಕ ಪರಾರ್ಧವನ್ನು ಅಪರಾರ್ಧದೆಡೆಗೆ ಜೋಡಿಸಿ ಸಾಧನೆಯ ಮಾರ್ಗದಲ್ಲಿರುವ ಸಕಲ ಸಂಕುಲಗಳಿಗೂ ಸಾಕ್ಷಾತ್ಕಾರದ ಸುಲಭ ಮಾರ್ಗವನ್ನು ಸೃಷ್ಟಿಸಿದಂತಾಗುತ್ತದೆ. ಅದು ಅಲ್ಲಿಯವರೆಗೂ

ಸಿದ್ಧಿಸದೆ, ಸಂಪೂರ್ಣವಾಗಿ ರಹಸ್ಯವಾಗಿಯೇ ಉಳಿದ ಅಲೌಕಿಕ ವಿಶ್ವವೊಂದರ ಪ್ರವೇಶಕ್ಕೆ ದಿವ್ಯ ದ್ವಾರವೊಂದನ್ನು ತೆಗೆದಂತಾಗುತ್ತದೆ. ಅದು ಆ ಯುಗದ ಅವತಾರಿಯ ಕಾರ್ಯವಾಗಿರುತ್ತದೆ. ಆ ಅವತಾರಿಯು ವಿಕಸನದ ನಿಃಶ್ರೇಣಿಗೆ ಒಂದು ಹೊಸ ಮೆಟ್ಟಿಲನ್ನು ಜೋಡಿಸಿ ಔನ್ನತ್ಯದ ಮತ್ತೊಂದು ಆಯಾಮವನ್ನು ಅನ್ವೇಷಿಸಿದಾಗ ಆ ಜಗತ್ತಿನಿಂದ ಉತ್ಸರ್ಜಿತವಾದ ನವ್ಯ ಸೃಷ್ಟಿಯೊಂದು ಭೂಮಿಯನ್ನು ಪರಿವರ್ತಿಸುವ ಕಾರ್ಯದಲ್ಲಿ ತೊಡಗಿಸಿಕೊಳ್ಳುತ್ತದೆ... ಈ ಸದ್ಯಕ್ಕೆ ಆ ನಿಃಶ್ರೇಣಿಗೆ ಜೋಡಿಸಲಾಗುತ್ತಿರುವ ಹೊಸ ಮೆಟ್ಟಿಲನ್ನು ಶ್ರೀ ಅರವಿಂದರು 'ಸುಪ್ರಮಾನಸ'ವೆಂದು ಕರೆದಿದ್ದಾರೆ. ಒಂದು ಬಾರಿ ಈ ಸುಪ್ರಮಾನಸವು ಬುವಿಗಿಳಿದು ಸ್ಥಾಪನೆಯಾದಲ್ಲಿ ಈ ಮರ್ತ್ಯವು ತನ್ನ ಮೂಲ ಗುಣ ಸ್ವರೂಪಗಳನ್ನು ಉಳಿಸಿಕೊಳ್ಳುವದರ ಜೊತೆಜೊತೆಗೆ ನವ್ಯ ಸೃಷ್ಟಿಯೊಂದರ ಸ್ಥಾಪನೆಯಲ್ಲಿ ತನ್ನನ್ನು ತಾನು ತೊಡಗಿಸಿಕೊಳ್ಳುತ್ತದೆ. ಆದರೆ, ಇದುವೆ ಅಂತಿಮ ಆರೋಹಣದ ಸ್ತರವೆಂದು ಅರ್ಥವಲ್ಲ. ಏಕೆಂದರೆ, ಇದಕ್ಕೂ ಊರ್ಧ್ವದಲ್ಲಿ ಅಸಿತ್ವದ ಇನ್ನೂ ಹಲವಾರು ಆಯಾಮಗಳಿವೆ. ಅವುಗಳಲ್ಲಿ ಈಗ ಸದ್ಯಕ್ಕೆ ನಾವು ಸುಪ್ರಮಾನಸವನ್ನು ಮರ್ತ್ಯಕ್ಕಿಳಿಸಿ, ಅದರ ಸಹಾಯದಿಂದ ಈ ಪ್ರಪಂಚವನ್ನು ಪುನರ್ರಚಿಸಿ, ಆ ಋತ ಚೇತನದಡಿಯಲ್ಲಿ ಈ ಜಗತ್ತಿಗೆ ದಿವ್ಯತೆಯ ಅವರೋಹಣಗೈಯುವ ಕಾರ್ಯದಲ್ಲಿದ್ದೇವೆ. ಆ ನವ್ಯ ಸೃಷ್ಟಿಯ ಅಡಿಯಲ್ಲಿ ಜರುಗಲಿರುವ ಪ್ರಪಂಚದ ಪುನರ್ರಚನಾ ಕಾರ್ಯದಲ್ಲಿ ಮರ್ತ್ಯದ ಪ್ರಸ್ತುತತೆಯನ್ನು ಯಥಾವತ್ ಉಳಿಸಿ ಅದರ ಚೈತನ್ಯ ಅಥವಾ ಶಕ್ತಿಯನ್ನು ವೃದ್ಧಿಗೊಳಿಸಬೇಕಿದೆ. ಆ ಹಂತದಲ್ಲಿ ಪ್ರಸ್ತುತ ಜಾಗೃತವಾಗಿರುವ ಚೇತನದ ಶಕ್ತಿಯೆಂದರೆ ಅದು ಮಹಾಸರಸ್ವತಿಯೇ ಆಗಿದ್ದಾಳೆ. ಅವಳು ಸಮನ್ವಯತೆಯ ಸಾಕಾರ ಸ್ವರೂಪಳಾಗಿದ್ದಾಳೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/179**

## ಭೌತಿಕ ವಸ್ತುಗಳ ಉಪಯೋಗ

ನಾವು ಬಳಸುವ ಭೌತಿಕ ವಸ್ತುಗಳ ಬಗೆಗಿನ ತಿರಸ್ಕೃತ ಮನೋಭಾವ ಅಥವಾ ಅವುಗಳನ್ನು ನಿರ್ಲಕ್ಷಿಸುವುದು ಅಥವಾ ಅವುಗಳನ್ನು ಸರಿಯಾಗಿ ಜೋಪಾನ ಮಾಡದೇ ಇರುವುದು ಅಜ್ಞಾನ ಮತ್ತು ಪ್ರಜ್ಞಾಹೀನತೆಯ ಲಕ್ಷಣವಾಗಿದೆ. ಏಕೆಂದರೆ,

ಆ ಭೌತಿಕ ವಸ್ತುಗಳನ್ನು ಸರಿಯಾಗಿ ನೋಡಿಕೊಳ್ಳದೇ ಇರುವವರಿಗೆ ಅವುಗಳನ್ನು ಬಳಸುವ ಹಕ್ಕು ಸಹ ಇರುವದಿಲ್ಲ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 17/87**

ನಾವು ಆ ಭೌತಿಕ ವಸ್ತುಗಳಿಗೆ ಸದಾಕಾಲ ಅಂಟಿಕೊಂಡಿದ್ದೇವೆ ಎಂಬ ಮನೋಭಾವನೆಯಿಂದ ಮಾತ್ರ ನಾವು ಅವುಗಳನ್ನು ರಕ್ಷಿಸಬೇಕಿಲ್ಲ. ಬದಲಿಗೆ ಆ ಭೌತಿಕಕ ವಸ್ತುಗಳೂ ಸಹ ದಿವ್ಯ ಪ್ರಜ್ಞೆಯ ಯಾವುದೋ ಒಂದು ಅಂಶವನ್ನು ವ್ಯಕ್ತಪಡಿಸುತ್ತಿವೆ ಎಂಬುದನ್ನು ಅರಿತು ಅವುಗಳನ್ನು ರಕ್ಷಿಸಬೇಕು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 17/88**

ಭಗವಂತನು ಸರ್ವವ್ಯಾಪಿಯಾಗಿದ್ದಾನೆ. ಅವನು ನಾವು ಬಳಸಿ ಎಲ್ಲೆಂದರಲ್ಲಿ ಬಿಸಾಡುವ ಭೌತಿಕ ವಸ್ತುಗಳಲ್ಲೂ ಇದ್ದಾನೆ. ನಾವು ಜೋಪಾನ ಮಾಡಿ ರಕ್ಷಿಸಿ ಇಡುವ ವಸ್ತುಗಳಲ್ಲೂ ಇದ್ದಾನೆ. ನಾವು ಆರಾಧಿಸುವ, ತುಳಿದುಕೊಂಡು ಓಡಾಡುವ ಎಲ್ಲ ವಿಧದ ವಸ್ತುಗಳಲ್ಲೂ ಅವನ ಸಾನಿಧ್ಯವಿದೆ. ಹಾಗಾಗಿ ನಾವು ಸಕಲ ವಸ್ತುಗಳನ್ನೂ ಗೌರವಿಸುವ ಮನೋಭಾವನೆಯನ್ನು ಬೆಳೆಸಿಕೊಳ್ಳಬೇಕು. ಅಚಿಂತ್ಯವೂ ಅನುಪಮವೂ ಆದ ಅವನ ಅಸ್ತಿತ್ವವನ್ನು ಮರೆತು ಮುಂದೋಡಬಾರದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 16/254**

**ವಸ್ತುಗಳ ಸರಿಯಾದ ಬಳಕೆಯ ಕುರಿತು ಶ್ರೀಮಾತೆಯವರ ನುಡಿಗಳು**

*ನಾವು ವಸ್ತುಗಳನ್ನು ಹೇಗೆ ಬಳಸಬೇಕು?*

ಮೊದಲನೆಯದಾಗಿ ನಾನು ನಿಮಗೆ ವಸ್ತುಗಳ ಉಪಯುಕ್ತತೆ, ಅವುಗಳನ್ನು ತಿಳುವಳಿಕೆಯಿಂದ ಬಳಸುವ ವಿಧಾನ ಮತ್ತು ಅವು ಹಾಳಾಗದಂತೆ ಅತ್ಯಂತ ಎಚ್ಚರಿಕೆಯಿಂದ ಬಳಸುವ ವಿಧಾನವನ್ನು ತಿಳಿಸುತ್ತೇನೆ. ನಾನು ನಿಮಗೆ ಒಂದು ಉದಾಹರಣೆಯನ್ನು ನೀಡುತ್ತೇನೆ. ನಿಮ್ಮ ಬಳಿ ಒಂದು ಜೋಡಿ ಕತ್ತರಿಗಳಿವೆ. ಆ ಕತ್ತರಿಗಳಲ್ಲಿ ಹಲವಾರು ವಿಧಗಳಿವೆ. ಕೆಲವು ಕತ್ತರಿಗಳನ್ನು ಬಟ್ಟೆಯನ್ನು ಕತ್ತರಿಸಲು

ತಯಾರಿಸಿದ್ದರೆ, ಇನ್ನೊಂದನ್ನು ಕಾಗದವನ್ನು ಕತ್ತರಿಸಲು ಸಿದ್ಧಗೊಳಿಸಲಾಗಿದೆ, ಮತ್ತೊಂದನ್ನು ಕೇವಲ ರೇಷ್ಮೆ ದಾರವನ್ನು ಕತ್ತರಿಸಲಿಕ್ಕಾಗಿ ವಿನ್ಯಾಸಗೊಳಿಸಲಾಗಿದೆ. ನೀವು ಆಯಾ ಕತ್ತರಿಗಳನ್ನು ಆಯಾ ವಸ್ತುಗಳನ್ನು ಕತ್ತರಿಸಲಿಕ್ಕಾಗಿಯೇ ಉಪಯೋಗಿಸಿ. ಯಾವ ಕತ್ತರಿಯನ್ನು ಯಾವ ವಸ್ತುವಿಗಾಗಿ ವಿನ್ಯಾಸಗೊಳಿಸಲಾಗಿದೆಯೋ ಆ ಕತ್ತರಿಯನ್ನು ಆ ವಸ್ತುವನ್ನು ಕತ್ತರಿಸಲು ಮಾತ್ರ ಬಳಸಿ. ನಾನು ಗಮನಿಸಿದ ಕೆಲವು ಜನರಿದ್ದಾರೆ. ಅವರು ಒಂದೇ ಕತ್ತರಿಯಿಂದ ರೇಷ್ಮೆ ದಾರವನ್ನೂ ಕತ್ತರಿಸುತ್ತಾರೆ, ತಂತಿಯನ್ನೂ ಕತ್ತರಿಸುತ್ತಾರೆ, ಕೆಲವೊಮ್ಮೆ ತಗಡಿನ ಪತ್ರವನ್ನು ಕತ್ತರಿಸಲೂ ಸಹ ಬಳಸುತ್ತಾರೆ. ಅವರ ಈ ಕಾರ್ಯ ಇಷ್ಟಕ್ಕೇ ನಿಲ್ಲುವದಿಲ್ಲ ಬೇರೆ ಯಾವುದೋ ವಸ್ತುವಿನಿಂದ ಮಾಡಬಹುದಾದ ಕೆಲಸಕ್ಕೂ ಸಹ ಅವರು ವಿವೇಚನೆಯಿಲ್ಲದೆ ತಮ್ಮ ಕತ್ತರಿಯನ್ನೇ ಬಳಸುತ್ತಾರೆ. ಇದರಿಂದ ಸಹಜವಾಗಿಯೇ ಕೆಲ ದಿನಗಳಲ್ಲೇ ಅವರ ಆ ಕತ್ತರಿಯು ಹಾಳಾಗುತ್ತದೆ. ಆ ಸಮಯದಲ್ಲಿ ಅವರು ನನ್ನ ಹತ್ತಿರ ಬಂದು, “ಓಹ್, ನನ್ನ ಕತ್ತರಿ ಹಾಳಾಗಿದೆ. ನನಗೆ ಮತ್ತೊಂದನ್ನು ನೀಡಿ” ಎಂದು ಕೇಳುತ್ತಾರೆ. ಆಗ ನಾನವರಿಗೆ, “ಇಲ್ಲ, ನಿಮಗೆ ಮತ್ತೊಂದು ಕತ್ತರಿಯನ್ನು ನೀಡಲಾಗುವದಿಲ್ಲ. ನಿಮಗೆ ಕೊಟ್ಟ ಕತ್ತರಿಯನ್ನು ನೀವು ವಿವೇಚನೆಯಿಲ್ಲದೆ ಕೆಟ್ಟದಾಗಿ ಬಳಸಿದ್ದೀರಿ” ಎಂದು ಹೇಳಿದಾಗ ಅವರು ಆಶ್ಚರ್ಯಕ್ಕೊಳಗಾಗುತ್ತಾರೆ. ಇದೊಂದು ಉದಾಹರಣೆ ಮಾತ್ರ. ಇಂತಹ ಹಲವಾರು ಉದಾಹರಣೆಗಳನ್ನು ನಾನು ನೀಡಬಲ್ಲೆ.

ಕೆಲವರು ಧೂಳು ಮೆತ್ತಿದ ಅಥವಾ ಹಾಳಾದ ವಸ್ತುವನ್ನೇ ಬಳಸುತ್ತಿರುತ್ತಾರೆ. ಅದನ್ನು ಸ್ವಚ್ಛಗೊಳಿಸಿದರೆ ಅದು ಇನ್ನಷ್ಟು ದಿನ ಬಾಳಿಕೆ ಬರುತ್ತದೆ ಎಂಬುದನ್ನು ತಿಳಿದಿದ್ದರೂ, ಮರೆವಿನಿಂದಲೋ, ನಿರ್ಲಕ್ಷ್ಯದಿಂದಲೋ, ಅಥವಾ ಅದನ್ನು ಸ್ವಚ್ಛಗೊಳಿಸುವ ಕೆಲಸವು ಹೆಚ್ಚಿನ ಸಮಯವನ್ನು ತೆಗೆದುಕೊಳ್ಳುತ್ತದೆ ಎಂದು ಅವರದನ್ನು ಹಾಗೆಯೇ ಬಳಸುವದನ್ನು ಮುಂದುವರೆಸುತ್ತಾರೆ.

ಪ್ರತಿಯೋರ್ವರ ಹತ್ತಿರ ಇರುವ ಪ್ರತಿಯೊಂದು ವಸ್ತುವಿಗೂ ತನ್ನದೇ ಆದ ಗೌರವವಿದೆ. ಅವರು ಅದನ್ನು ಪರಿಗಣಿಸಬೇಕಿದೆ. ಮತ್ತು ಸಾಧ್ಯವಾದಷ್ಟು ಕಾಲ ಅದನ್ನು ಸಂರಕ್ಷಿಸಿ ಇಟ್ಟುಕೊಳ್ಳಲು ಪ್ರಯತ್ನಿಸಬೇಕು. ಅವರು ಆ ವಸ್ತುವಿನೊಂದಿಗೆ ನಿಕಟವಾದ ಸಂಬಂಧವನ್ನು ಹೊಂದಿದ್ದಾರೆ ಎಂಬ ಒಂದು ಕಾರಣದಿಂದ

ಮಾತ್ರವಲ್ಲ, ಬದಲಿಗೆ ಅದು ತನ್ನದೇ ಆದ ಗೌರವವನ್ನು ಹೊಂದಿದೆ ಎಂಬ ಕಾರಣಕ್ಕಾಗಿ ಅದನ್ನು ರಕ್ಷಿಸಬೇಕು. ಕೆಲವೊಮ್ಮೆ ಆ ವಸ್ತುವನ್ನು ಸಿದ್ಧಪಡಿಸುವ ಸಂದರ್ಭದಲ್ಲಿ ಅದರ ರಚನೆಗೆ ಸಾಕಷ್ಟು ಸಮಯ ಮತ್ತು ಶ್ರಮವನ್ನು ನೀಡಲಾಗಿರುತ್ತದೆ. ಹಾಗಾಗಿ ಅದನ್ನು ವಿನ್ಯಾಸಗೊಳಿಸಿದವರ ಕಾರ್ಯವೈಖರಿ ಮತ್ತು ಶ್ರಮಕ್ಕೆ ಗೌರವವನ್ನು ಸಲ್ಲಿಸಬೇಕಿರುವುದು ನಮ್ಮ ಕರ್ತವ್ಯವಾಗಿರುತ್ತದೆ.

ನಾನು ಗಮನಿಸಿದಂತೆ ಕೆಲವರಿಗೆ ಆ ವಸ್ತುವಿನ ಅವಶ್ಯಕತೆಯೇ ಇರುವದಿಲ್ಲ. ಅಥವಾ ತಮ್ಮ ವೈಯಕ್ತಿಕ ಉಪಯೋಗಕ್ಕೆ ತಕ್ಕಂತೆ ವಸ್ತುಗಳನ್ನು ವಿನ್ಯಾಸಗೊಳಿಸಿ ಕೊಡುವಂತೆ ಅವರು ಒತ್ತಾಯ ಮಾಡುತ್ತಿರುತ್ತಾರೆ. ಹಾಗೂ ತಮ್ಮ ಬಯಕೆಗೆ ತಕ್ಕಂತೆ ವಿನ್ಯಾಸಗೊಳಿಸಿದ ವಸ್ತುಗಳನ್ನು ಪಡೆದುಕೊಳ್ಳುವದರಲ್ಲಿ ಅವರು ಯಶಸ್ವಿಯೂ ಆಗಿಬಿಡುತ್ತಾರೆ. ಆದರೆ, ಆ ವಸ್ತುಗಳನ್ನು ರಚಿಸುವವರಿಗೆ ಅದರ ನಿರೂಪಣೆಯಲ್ಲಿ ತೋರಿದ ಅವರ ಶ್ರಮದ ಅರಿವಿರುತ್ತದೆ. ಹಾಗಾಗಿಯೇ ಅವರಿಗೆ ತಾವು ಉತ್ಪಾದಿಸಿದ ವಸ್ತುವಿನ ಬಗ್ಗೆ ಗೌರವ ಮತ್ತು ಕಾಳಜಿಯಿರುತ್ತದೆ. ಆದರೆ, ಇದಾವುದರ ಪರಿವೆಯೂ ಇಲ್ಲದ ಉಪಭೋಕ್ತೃಗಳು ನೇರವಾಗಿ ಅಂಗಡಿಗೆ ಹೋಗಿ ತಮ್ಮಲ್ಲಿರುವ ಹಣದಿಂದ ಅದನ್ನು ಪಡೆದುಕೊಂಡು ಅದನ್ನು ಅಗೌರವಯುತವಾಗಿ ಬಳಸಲಾರಂಭಿಸುತ್ತಾರೆ.

ಆ ಮೂಲಕ ಅವರು ತಮಗೆ ತಾವೇ ಹಾನಿಯನ್ನು ಮಾಡಿಕೊಳ್ಳುತ್ತಾರೆ. ಮತ್ತು ಸಮಾಜದೆದುರಿಗೆ ಒಂದು ಕೆಟ್ಟ ಉದಾಹರಣೆಯಾಗಿ ನಿಲ್ಲುತ್ತಾರೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 7/50–51 – ಶ್ರೀಮಾತೆ**

### ಋತದ ಕಾರ್ಯ ಮತ್ತು ನಮ್ಮ ಸರಿಯಾದ ವರ್ತನೆ

ಈ ವಿಷಯವನ್ನು ವೈಯಕ್ತಿಕವಾಗಿ ತೆಗೆದುಕೊಳ್ಳಬೇಡಿ. ಋತದ ವಿರುದ್ಧ ನಡೆಯುವ ಅನೃತದ ಷಡ್ಯಂತ್ರದಿಂದಾಗಿ ಪರಿಣಮಿಸುವ ಗಲಭೆ–ಗೊಂದಲಗಳು ಈ ಪ್ರಪಂಚದಾದ್ಯಂತ ಹರಡಿಕೊಂಡಿರುತ್ತವೆ. ಇವುಗಳಲ್ಲಿ ಋತದ ಕಾರ್ಯವು ಹೆಚ್ಚು ಜಾಗೃತವೂ–ನಿಷ್ಠವೂ ಆಗಿರುವದರಿಂದ ಅನೃತದ ಪ್ರತಿರೋಧವು ಹೆಚ್ಚುತ್ತಲೇ ಹೋಗುತ್ತದೆ. ಇದರಿಂದ ಉಂಟಾಗುವ ದೊಡ್ಡ ಪ್ರಕ್ಷುಬ್ಧತೆಯಲ್ಲಿ ಸಂಘರ್ಷವನ್ನು

ಸೃಷ್ಟಿಸುವ ಶಕ್ತಿಗಳು ಮರ್ತ್ಯದ ಅಸಂಖ್ಯಾತ ವ್ಯಕ್ತಿಗಳನ್ನು ತಮ್ಮ ಕೈಗೊಂಬೆಗಳಾಗಿಸಿಕೊಂಡು ಅವರ ಅಧೋಗತಿಗೆ ಕಾರಣವಾಗುತ್ತವೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/157**

ಬದುಕನ್ನು ಕಟ್ಟಿಕೊಳ್ಳುವ ಉದ್ದೇಶದಿಂದ ನಿಮ್ಮ ಮೇಲೆ ಅವಲಂಬಿತವಾಗಿರುವ ವ್ಯಕ್ತಿಗಳೊಂದಿಗೆ ನೀವು ಬಹಳ ಸಭ್ಯರಾಗಿ ನಡೆದುಕೊಳ್ಳಬೇಕು. ನೀವು ಅವರನ್ನು ಕೆಟ್ಟದಾಗಿ ನಡೆಸಿಕೊಂಡರೆ ಅವರು ವ್ಯತಿಥರಾಗುತ್ತಾರೆ. ಮತ್ತು ತಮ್ಮ ಕೆಲಸವನ್ನು ಕಳೆದುಕೊಳ್ಳುವ ಭಯದಿಂದ ನಿಮಗೆ ತಿರು ಉತ್ತರವನ್ನು ನೀಡಲು ಹಿಂಜರಿಯುತ್ತಾರೆ.

ನಿಮಗಿಂತಲೂ ಮೇಲ್ಮಟ್ಟದಲ್ಲಿರುವ ಅಧಿಕಾರಿಗಳೊಂದಿಗೆ ಒರಟಾಗಿ ವರ್ತಿಸುವುದು ಘನತೆಯ ಅಂಶವಾಗಿ ಕಂಡುಬರಬಹುದು. ಆದರೆ, ನಿಮಗಿಂತ ಕೆಳಮಟ್ಟದಲ್ಲಿದ್ದು ನಿಮ್ಮನ್ನೇ ಆಶ್ರಯಿಸಿರುವ ನೌಕರರೊಂದಿಗೆ ಸದಾ ವಿನಯವಂತರಾಗಿಯೇ ನಡೆದುಕೊಳ್ಳಬೇಕು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/169** **– ಶ್ರೀಮಾತೆ**

## ಅಂತರಂಗದ ಏನನ್ನೂ ಅಡಚಣೆಗಾಗಿ ಬಿಡಬೇಡಿ

**ಆ ದಿವ್ಯತೆಯ ಸೇವೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡವರಿಗಾಗಿ ಒಂದು ಪ್ರಾರ್ಥನೆ**

ನಮ್ಮನ್ನು ಹಿಮ್ಮೆಟ್ಟಿಸಲು ಬರುವ ಎಲ್ಲಾ ಅಡೆತಡೆಗಳನ್ನು ಜಯಿಸಿ ನಮಗೆ ಮಾರ್ಗಪರಿಣಾಯಕನಾದ ಓ ಭಗವಂತನೇ, ನಿನಗೆ ಜಯವಾಗಲಿ.

ನಮ್ಮ ಕಾರ್ಯಕ್ಕೆ ಯಾವುದೇ ಅಡ್ಡಿ–ಆತಂಕಗಳು ಬರದಂತೆ ಕರುಣಿಸು.

ನಮ್ಮ ಅಭಿವ್ಯಕ್ತಿಯನ್ನು ಯಾವ ಶಕ್ತಿಯೂ ಕುಂಠಿತಗೊಳಿಸದಿರುವಂತೆ ಕರುಣಿಸು.

ನಿನ್ನ ಸಂಕಲ್ಪವು ನಮ್ಮ ಜೀವನದ ಪ್ರತಿಯೊಂದು ಕ್ಷಣದಲ್ಲಿ, ಪ್ರತಿಯೊಂದು ಕಾರ್ಯದಲ್ಲಿ, ಜೊತೆಯಾಗಿರುವಂತೆ ಕರುಣಿಸು. ಓ ಭಗವಂತನೇ, ನಿನ್ನೆದುರಿಗೆ

ನಿಂತ ನಮ್ಮ ಅಂಶದ ಪ್ರತಿ ಕಣಕಣದಲ್ಲೂ, ನಮ್ಮ ಅಸ್ತಿತ್ವದ ಪ್ರತಿಯೊಂದು ಮಿಡಿತದಲ್ಲೂ ನಿನ್ನ ಸಂಕಲ್ಪದ ಸಾನಿಧ್ಯವಿರುವಂತೆ ಕರುಣಿಸು. ನಮ್ಮ ದೇಹದ ಪ್ರತಿ ಅಂಗದಲ್ಲೂ, ಅತಿ ಸೂಕ್ಷ್ಮ ಜೀವಕೋಶದಲ್ಲೂ ನಿನ್ನ ಸಂಕಲ್ಪವು ಕಾರ್ಯ ನಿರ್ವಹಿಸುವಂತೆ ಕರುಣಿಸು.

ನಾವು ಸದಾಕಾಲ ನಿನ್ನಲ್ಲೇ ಶರಣು ಬರುವಂತೆ ಕರುಣಿಸು. ಬೇರೆಲ್ಲಾ ಅಸ್ತಿತ್ವಗಳನ್ನು ತೊರೆದು ನಿನ್ನ ಪ್ರಭಾವದಡಿಯಲ್ಲೇ ಬದುಕುವಂತೆ ಕರುಣಿಸು.

ನಿನ್ನೆಡೆಗಿನ ಅತಿಯಾದ ಮತ್ತು ಆಳವಾದ ನಂಬಿಕೆಯಿಂದ ಹಿಂಸರಿಯದಂತೆ ನಮ್ಮನ್ನು ದಯಪಾಲಿಸು.

ನೀನು ನಮಗಾಗಿ ನೀಡಿದ ವಸ್ತುಗಳನ್ನು ಯಾವ ಕ್ಷಣದಲ್ಲೂ ವ್ಯರ್ಥ ಮಾಡದಂತೆ, ಪ್ರತಿ ಕ್ಷಣವೂ ನಿನ್ನ ಆರಾಧನೆಯಲ್ಲಿಯೇ ಇರುವಂತೆ ಕರುಣಿಸು.

ನನ್ನಲ್ಲಿರುವ ಎಲ್ಲ ಅಂಶಗಳೂ ನಿನ್ನೆಡೆಗಿನ ಅಧಿರೋಹಣಕ್ಕೆ ನಿನ್ನ ದರ್ಶನಕ್ಕೆ ಸಿದ್ಧವಿರುವಂತೆ ಕರುಣಿಸು.

ಓ ಪರಮಾತ್ಮನೇ, ಸರ್ವ ಸಾಕ್ಷಾತ್ಕಾರಕ್ಕಿರುವ ಸಾಕ್ಷೀಭೂತನೇ, ನಿನಗೆ ಜಯವಾಗಲಿ.

ನಿನ್ನ ವಿಜಯಗಳ ಮೇಲೆ ನಮಗೆ ಸಂಪೂರ್ಣವಾದ ಅಚಲ ನಂಬಿಕೆಯಿರುವಂತೆ ಕರುಣಿಸು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 1/382** **– ಶ್ರೀಮಾತೆ**

## ಶ್ರೀ ಅರವಿಂದರ
## 'ಗೀತಾ ಪ್ರಬಂಧಗಳು'

**– ಅನು: ಜಾನ್ವಿ**

**40**

### ಎರಡನೆಯ ಸರಣಿ:
### ಅಧ್ಯಾಯ – 5
### ದೈವೀ ಸತ್ಯ ಮತ್ತು ಮಾರ್ಗ (5/2)

ತತ್ತ್ವ ಶಾಸ್ತ್ರದ ಭಾಷೆಯಲ್ಲಿ ಹೇಳಿದ ಗೀತೆಯ ಈ ಶ್ಲೋಕಗಳ ಅಭಿಪ್ರೇತಾರ್ಥ ಹೀಗಿದೆ: ಆದರೆ ಇದು ಬುದ್ಧಿಯ ತರ್ಕ ಅಥವಾ ಅನುಮಾನದ ಮೇಲೆ ಆಧಾರಿತವಾಗಿಲ್ಲ ಬದಲಾಗಿ ಆಧ್ಯಾತ್ಮಿಕ ಅನುಭವದ ಮೇಲೆ ಆಧಾರಿತವಾಗಿದೆ. ಆಧ್ಯಾತ್ಮಿಕ ಅರಿವಿನ ವಿಶಿಷ್ಟ ಸತ್ಯದಿಂದ ಹೊರಟ ಈ ಶ್ಲೋಕಗಳು ಸರ್ವ ವ್ಯಾಪಕ ಭಾವದಿಂದ ಕೂಡಿರುವುದರಿಂದ ಅವುಗಳಲ್ಲಿ ಸಮನ್ವಯದ ತತ್ತ್ವ ಅಂತರ್ಭೂತವಾಗಿದೆ. ವಿಶ್ವದಲ್ಲಿ ವ್ಯಕ್ತ ಅಥವಾ ಅವ್ಯಕ್ತವಾಗಿರುವ ಪರಮ ಪುರುಷ ಅಥವಾ ವಿಶ್ವ ಪುರುಷನ ಜೊತೆಗೆ ನಾವು ಜೀವನ ಪುರಃ ಸರ ಸಂಬಂಧ ಜೋಡಿಸಲೆತ್ನಿಸಿದಾಗ ನಮಗೆ ವಿವಿಧ ಪ್ರಕಾರದ ಅನುಭವಗಳಾಗುತ್ತವೆ. ಆ ಅನುಭವಗಳ ಪೈಕಿ ಒಂದರ ಭಾಗವನ್ನು ತೆಗೆದುಕೊಂಡು, ಬುದ್ಧಿಯ ವಿವಿಧ ಕಲ್ಪನೆಗಳನ್ನು ಅದರಲ್ಲಿ ಹಾಕಿ ಅನೇಕರು ತಮ್ಮ ತಮ್ಮದೇ ಆದ ಸಿದ್ಧಾಂತವನ್ನು ಪ್ರತಿಪಾದಿಸಿದ್ದುಂಟು.

ನಮಗೆ ಮೊದಲು ಆಗುವ ಪ್ರಾಕೃತ ಅನುಭವವನ್ನು – ಅಂದರೆ ಈಶ್ವರನು ನಮ್ಮಿಂದ ಪೂರ್ಣತಃ ಭಿನ್ನನಾಗಿದ್ದಾನೆ, ವಿಶ್ವದಿಂದ ಕೂಡ ಭಿನ್ನನೇ ಆಗಿದ್ದಾನೆ, ನಮಗಿಂತ ಈ ವಿಶ್ವಕ್ಕಿಂತ ಅವನು ಬಹಳ ದೊಡ್ಡವನಾಗಿದ್ದಾನೆ ಎಂಬ ದರ್ಶನವನ್ನು ಆಧರಿಸಿ ನಾವು ನಮ್ಮ ರೂಪಗುಣಾತ್ಮಕ ಸಿದ್ಧಾಂತವನ್ನು ಕಟ್ಟಿಕೊಳ್ಳುತ್ತೇವೆ. ಎಲ್ಲಿಯವರೆಗೆ ಈ ರೀತಿಯ ಅನುಭವದಿಂದ ಹೊರಬರುವುದಿಲ್ಲವೋ, ಈ ಸುತ್ತಲಿನ ಜಗತ್ತನ್ನು ಪರಮಾತ್ಮನಿಂದ ಭಿನ್ನವಲ್ಲ ಎಂಬ ಅನುಭವ ಆಗುವುದಿಲ್ಲವೋ ಅಲ್ಲಿಯವರೆಗೆ ಹೆಚ್ಚಿನ ಸತ್ಯದ ಸಾಕ್ಷಾತ್ಕಾರ ಆಗುವುದಿಲ್ಲ. ಈಶ್ವರನ ಉಚ್ಚತಮ ಸತ್ಯವಿರುವುದು ವಿಶ್ವಾತೀತದಲ್ಲಿ, ರೂಪಗುಣಾತ್ಮಕವಾಗಿರುವುದೆಲ್ಲವೂ ಈ ಆತ್ಮಜ್ಞ,

ಅನಂತ, ಪರಮ ಪುರುಷನಿಂದ ಭಿನ್ನವೆಂಬ ಪೂರ್ವಾಗ್ರಹದಿಂದಲೇ ನಾವು ಹೊರಟಿರುತ್ತೇವೆ. ಇದೆಲ್ಲವೂ ಕೇವಲ ಆಭಾಸವೆಂದು ಅನಿಸದೇ ಹೋದರೂ, ಇದೊಂದು ನಿಮ್ನತರ ಸತ್ಯವೆಂದು ನಾವು ನಂಬಿರುತ್ತೇವೆ. ಈ ಅನುಭವದಲ್ಲಿ ಸಿಕ್ಕಿಕೊಂಡಿರುವವರೆಗೆ ಪರಮಾತ್ಮನು ನಮ್ಮಿಂದ ಹಾಗೂ ಈ ದೃಶ್ಯರೂಪ ವಿಶ್ವದಿಂದ ಭಿನ್ನನಾಗಿದ್ದಾನೆ ಎಂದೇ ಬಲವಾಗಿ ನಂಬುತ್ತೇವೆ. ಭಿನ್ನ ಅಥವಾ ಬೇರೆ ಎಂಬುದರ ಅರ್ಥಾಪತ್ತಿ ಏನೆಂದರೆ, ವಿಶ್ವ ಅಥವಾ ವಿಶ್ವದಲ್ಲಿ ಏನೆಲ್ಲ ಇದೆಯೋ ಅದೆಲ್ಲವೂ ಈಶ್ವರನಿಂದ ಹೊರಗೆ ಇದೆ ಎಂದೇನೂ ಅರ್ಥವಲ್ಲ; ಏಕೆಂದರೆ ಈಶ್ವರನಿಂದ ಹೊರತಾಗಿ ಬೇರೆ ಯಾವ ಸದ್ವಸ್ತುವೂ ಅಸಿತ್ವದಲ್ಲಿಲ್ಲ ಎಂಬುದು ಗೊತ್ತು, ಆದ್ದರಿಂದ ಈಶ್ವರನು ಇವೆಲ್ಲವನ್ನೂ ವ್ಯಾಪಿಸಿ "ಅತ್ಯತಿಷ್ಠತ ದಶಾಂಗುಲಮ್" ಅದರಾಚೆಗೂ ಇದ್ದಾನೆ ಎಂದು ಅನಿಸುತ್ತದೆ. ಇದು ನಮ್ಮ ಪ್ರಥಮ ಆತ್ಮ ದೃಷ್ಟಿ. ಈಶ್ವರನೊಳಗೆಯೇ ವಿಶ್ವ ಸಮಾಹಿತವಾಗಿದೆ, ನಾವು, ನಮ್ಮ ಚಲನವಲನ, ಜೀವನ ಎಲ್ಲವೂ ಅವನೊಳಗೇ ನಡೆದಿದೆ, ನಾವು ಅವನಿಂದ ಎಷ್ಟೇ ಬೇರೆ ಅಂದರೂ ಅವನಿಂದ ಹೊರತಾಗಿಲ್ಲ. ಅವನನ್ನು ಅವಲಂಬಿಸಿಯೇ ನಮ್ಮ ಅಸ್ತಿತ್ವ ಇದೆ. ಇಡೀ ವಿಶ್ವವೇ ಅವನ ಉದರದೊಳಗೆ ನಡೆದಿರುವ ಘಟನೆ ಎಂಬ ಗಾಢ ಅನುಭವ ಆಗುತ್ತದೆ. ನಮ್ಮ ಆತ್ಮಸ್ಥಿತ ಅಸ್ತಿತ್ವ ಹಾಗೂ ಈಶ್ವರನ ಸ್ವಯಂಭೂ ಅಸ್ತಿತ್ವ ಎರಡೂ ಬೇರೆ ಬೇರೆ ಅಲ್ಲ, ಅವೆರಡೂ ಏಕರೂಪವಾಗಿವೆ ಎಂಬ ಮೇಲೆ ಹೇಳಿದ ಅನುಭವದ ನಂತರ, ಅದರಾಚೆಗಿನ ಬೇರೊಂದು ಅನುಭವ ನಮಗೆ ಆಗುತ್ತದೆ. ಎಲ್ಲರ ಆತ್ಮವೂ ಒಂದೇ ಎಂಬ ಅನುಭವ ನಮಗಾಗುತ್ತದೆ. ನಮ್ಮ ಆತ್ಮದೃಷ್ಟಿಗೆ ಇದು ಸ್ಪಷ್ಟವಾಗಿ ಗೋಚರವಾಗುತ್ತದೆ.

ಈ ಅನುಭವವಾದ ನಂತರ ನಾವು ಈಶ್ವರನಿಂದ ಭಿನ್ನ ಎಂದು ಹೇಳಲು ಸಾಧ್ಯವಾಗುವುದಿಲ್ಲ. ನಮಗೆ ಆಗ ಸ್ಪಷ್ಟವಾಗಿ ತಿಳಿಯುವುದೇನೆಂದರೆ (ಜ್ಞಾನವಾಗುವುದೇನೆಂದರೆ) ಸ್ವಯಂಭೂ ಆತ್ಮತತ್ತ್ವ ಇದೆ, ಈ ಸ್ವಯಂಭೂ ಆತ್ಮದ ನಾಮರೂಪ ಗುಣಾತ್ಮಕ ಸ್ವರೂಪವೂ ಇದೆ. ಆತ್ಮದೃಷ್ಟಿಯಿಂದ ಎಲ್ಲವೂ ಒಂದೇ, ನಾಮರೂಪ ದೃಷ್ಟಿಯಿಂದ ಭೇದಮಯವಾಗಿದೆ. ಸ್ವಯಂಭೂ ಆತ್ಮದ ಏಕತೆಯೇ ನಮಗೆ ಅತಿ ಪ್ರಿಯವಾದ ಸಂಗತಿ, ಬೇರೆ ಏನೂ ಬೇಡ ಎಂಬ ಏಕಾಂತಿಕ ವೃತ್ತಿ ನಮ್ಮಲ್ಲಿ ಮೂಡಿದರೆ ನಾಮ ರೂಪಾತ್ಮಕ ಜಗತ್ತೇ ಸ್ವಪ್ನಸದೃಶವಾಗಿ ತೋರುವುದು, ಬರೀ ಇಷ್ಟೇ ಅಲ್ಲ, ನಾಮ ರೂಪಾತ್ಮಕ ಜಗತ್ತು ಮತ್ತು ಸ್ವಯಂಭೂ ಆತ್ಮ ಎರಡೂ

ನಮಗೆ ಪ್ರಿಯವೆಂದೂ ಅನಿಸುವ ಸಾಧ್ಯತೆಯೂ ಇದೆ, ಇಂಥ ದ್ವಿಮುಖಿ ಅರಿವು ಮತ್ತು ವೃತ್ತಿ ಇದ್ದಾಗ, ಈಶ್ವರನ ಸ್ವಯಂಭೂ ಸ್ವರೂಪದ ಜೊತೆಗೆ ಏಕರೂಪದ ಅನುಭವವೂ ಆಗುವುದು ಜೊತೆಗೆ ನಾವು ಈಶ್ವರನ ಜೊತೆಗೂ ಇದ್ದೇವೆ, ಈಶ್ವರನ ಜೊತೆ ಅನೇಕ ರೀತಿಯ ಸಂಬಂಧಗಳೂ ಇವೆ, ನಮ್ಮ ಸಾಕಾರತೆಯು ಅವನ ಸ್ವರೂಪದಿಂದಲೇ ನಿರ್ಮಾಣವಾಗಿದೆ ಮತ್ತು ಈ ಸಾಕಾರತೆಯು ಅಥವಾ ದೇಹಧಾರಿತ್ವವು ಶಾಶ್ವತ ಕಾಲದವರೆಗೂ ಇರುವುದು ಎಂಬ ಗಟ್ಟಿಯಾದ ಅನುಭವವೂ ಆಗುವುದು. ಈ ಅನುಭವದಲ್ಲಿ ವಿಶ್ವ ಮತ್ತು ವಿಶ್ವದಲ್ಲಿನ ನಮ್ಮ ಅಸ್ತಿತ್ವವು ಈಶ್ವರನ ಆತ್ಮ ಜ್ಞಾನಯುಕ್ತ ಅಸ್ತಿತ್ವದ ನಿತ್ಯ ಮತ್ತು ಸತ್ಯ ಸಾಕಾರ ರೂಪವಾಗಿದೆ ಎಂಬ ಪ್ರತೀತಿ ಕೂಡ ಅಂತರ್ಭೂತವಾಗಿದೆ. ವಿಶ್ವಾತೀತ ನಿಃಸಂಬಂಧ ಪರಮೇಶ್ವರನ ಸ್ವರೂಪಕ್ಕಿಂತ ಈ ಸಂಬಂಧಮಯ ಸ್ವರೂಪವು ನಿಮ್ನತರ ಸತ್ಯವಾಗಿದೆ ಎಂಬ ವಾದವೂ ಇದೆ; ಈ ಸಂಬಂಧಮಯ ಈಶ್ವರ ರೂಪದಲ್ಲಿ ನಮ್ಮ ಈಶ್ವರನ ಜೊತೆಗಿನ ಸಂಬಂಧ, ನಮ್ಮ ಹಾಗೂ ಈಶ್ವರ ಶಕ್ತಿ ನಿರ್ಮಿತ ಇತರ ಜೀವಿಗಳ ಹಾಗೂ ನಿರ್ಜೀವ ವಸ್ತುಗಳ ಜೊತೆ ಅನೇಕ ರೀತಿಯ ಸಂಬಂಧಗಳಿರುತ್ತವೆ.

ಅದೇ ರೀತಿ ವಿಶ್ವ ಪ್ರಕೃತಿಯಲ್ಲಿ ಈಶ್ವರನ ವಿಶ್ವವ್ಯಾಪಕ ಆತ್ಮವಿದೆ ತಾನೇ, ಅದರ ಜೊತೆಗೆ ನಮ್ಮ ವ್ಯವಹಾರ ಸಾಗುತ್ತದೆ. ವಿಶ್ವಾತೀತವಾದ ಕೇವಲದಲ್ಲಿ ಈ ಸಂಬಂಧವಿರುವುದಿಲ್ಲ. ವಿಶ್ವಾತೀತ ಆತ್ಮದ ವಿಶಿಷ್ಟ ಪ್ರಜ್ಞಾಶಕ್ತಿಯಿಂದ ಈ ಸಂಬಂಧ ನಿರ್ಮಾಣವಾಗುವುದು. ಈ ಸಂಬಂಧವು ಕೇವಲ ವಿಶ್ವಾತೀತನಿಗಿಂತ ಬಹಳ ಭಿನ್ನವಾಗಿದೆ. ಇದು ಸ್ವಯಂಭೂ ಆಗಿರುವುದಿಲ್ಲ, ಇದು ನಿರ್ಮಾಣ ಕ್ರಿಯೆಯ ಫಲರೂಪವಾಗಿದೆ. ಈ ಕಾರಣದಿಂದಾಗಿಯೇ ನಿಃಸಂಬಂಧ ವಿಶ್ವಾತೀತ ಕೇವಲ ಪರಮತತ್ವದ ಏಕಾಂತಿಕ ಸಾಧಕನು ಸಾಪೇಕ್ಷ ದೃಷ್ಟಿಯಿಂದ ಈ ಸಂಬಂಧವನ್ನು ಪೂರ್ಣತಃ ಅಥವಾ ಸಾಪೇಕ್ಷ ದೃಷ್ಟಿಯಿಂದ ಅಸತ್ಯ, ಆಭಾಸ ಮಿಥ್ಯಾ ಎಂದು ಕರೆಯುವುದುಂಟು. ಆದರೆ ವಸ್ತುತಃ ಈ ಎಲ್ಲ ಸಂಬಂಧಗಳು ಹಾಗೂ ಸಂಬಂಧಮಯ ಆಕಾರಗಳು ಕೇವಲ ಪರಮ ತತ್ತ್ವದಿಂದಲೇ ಬಂದಿವೆ; ಶೂನ್ಯದಿಂದ ಕೇವಲ ಕಲ್ಪನಾಮಯವಾಗಿರುವಂಥ ಏನೂ ಸೃಷ್ಟಿಯಾಗಿಲ್ಲ. ಏಕೆಂದರೆ ಆತ್ಮತತ್ತ್ವವು ಸುತ್ತಲೂ ಎತ್ತ ನೋಡಿದರೂ ತನ್ನಿಂದ ಹೊರತಾದುದು ಏನೂ ಕಾಣುವುದಿಲ್ಲ. ಎಲ್ಲವೂ ತನ್ನ ಸ್ವರೂಪದಿಂದಲೇ ಉತ್ಪನ್ನವಾದವುಗಳು

ಎಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ವಿಶ್ವಾತೀತ ಕೇವಲದಲ್ಲಿ ನಮಗೆ ಪ್ರತೀತವಾಗುವ ಸಂಬಂಧಗಳಿಗೆ ಮತ್ತು ಆಕಾರಗಳಿಗೆ ಹೊಂದಿಕೆಯಾಗುವಂಥದು ಏನೂ ಇಲ್ಲವೇ ಎಂದು ಹೇಳಲು ಸಾಧ್ಯವೇ ಇಲ್ಲ. ಈ ಕೇವಲ ಏಕೈಕದ ಪ್ರಜ್ಞೆಯಿಂದಲೇ ಈ ಸಂಬಂಧಗಳು ಆಕಾರಗಳು ಉತ್ಪನ್ನವಾಗಿವೆ.

ಈ ತತ್ವವನ್ನು ನಾವು ಒಪ್ಪಿದರೆ, ಅಂದರೆ ಇದರ ಸ್ಪಷ್ಟ ಅನುಭವ ನಮಗೆ ಆದರೆ, ಈ ವಿಶ್ವಾತೀತ ಪರಾತ್ಪರ ತತ್ತ್ವದಲ್ಲಿ ಈ ಸಂಬಂಧಗಳಿಗೆ, ಆಕಾರಗಳಿಗೆ ಆಧಾರವಾಗಿರುವ, ಅವುಗಳ ವಾಸ್ತವಿಕತೆಯನ್ನು ಸಮರ್ಥನೆ ಮಾಡಬಲ್ಲ ಯಾವ ಪರಮ, ಶಾಶ್ವತ ತತ್ತ್ವವೂ ಇಲ್ಲವೆಂದು ಹೇಳಲು ಸಾಧ್ಯವೇ ಆಗುವುದಿಲ್ಲ. ಆತ್ಮ ಮತ್ತು ಆತ್ಮದ ಆಕಾರ ದೇಹ ಇವುಗಳಲ್ಲಿ ನಾವು ಕಾಣುವ ಭೇದದ ಮೇಲೆ ಹೆಚ್ಚು ಒತ್ತು ನೀಡಿದರೆ, ಆತ್ಮವು ಸರ್ವ ಸಮಾವೇಶಕವಾಗಿದೆ, ಅಂತರ್ನಿವಾಸಿಯಾಗಿದೆ, ಆತ್ಮವು ಸರ್ವವ್ಯಾಪಿಯಾಗಿದೆ ಎಂಬ ಸತ್ಯವನ್ನು ಮನ್ನಿಸಿಯೂ ಆತ್ಮದ ಆಕಾರ, ದೇಹಗಳು ಆತ್ಮದಿಂದ ಭಿನ್ನವಾಗಿವೆ, ಅವು ಕ್ಷಣ ಜೀವಿ, ಅಲ್ಪ ಜೀವಿಯಾಗಿವೆ ಎಂಬ ವಾದವನ್ನು ಮಂಡಿಸುವ ಸಾಧ್ಯತೆ ಇಲ್ಲದಿಲ್ಲವಷ್ಟೇ ಅಲ್ಲ ಅದು ಅಸತ್ಯವಾಗಿದೆ, ಆಭಾಸಮಯವಾಗಿದೆ ಎಂದೂ ಹೇಳಬಹುದು. ನಮಗೆ ಪರಮಾತ್ಮನ ಅನುಭವ ಇದೆ, ಪರಮಾತ್ಮನು ಅಕ್ಷರನಾಗಿದ್ದಾನೆ ಮತ್ತು ವಿಶ್ವದ ನಿತ್ಯ ಪರಿವರ್ತನಶೀಲ ಭೂತ ಪ್ರಪಂಚವು ಪರಮಾತ್ಮನ ಉದರದಲ್ಲಿ ಅವನ ಕಣ್ಣೆದುರಿನಲ್ಲಿಯೇ ಇದೆ ಎಂಬ ಅನುಭವ ಬರುವುದು. ನಮ್ಮ ಹಾಗೂ ಎಲ್ಲ ಪ್ರಾಣಿಗಳ ನಡುವೆ ಈ ಪರಮಾತ್ಮನು ಅಂತರ್ನಿವಾಸಿಯಾಗಿ ನೆಲೆಸಿದ್ದಾನೆ ಎಂಬ ಸ್ವತಂತ್ರ ಅಥವಾ ಏಕಕಾಲಿಕ ಅನುಭವ ಕೂಡ ನಮಗೆ ಆಗಿದೆ, ಆದರೂ ಸಹ ವಿಶ್ವವು ಪರಮಾತ್ಮನ ಹಾಗೂ ನಮ್ಮ ತಿಳುವಳಿಕೆಗಾಗಿ, ಕೇವಲ ವ್ಯವಹಾರ ಪರಸ್ಪರ ಆಕಾರವಿದೆ ಎಂಬ ಆಧ್ಯಾತ್ಮಿಕ ಅರ್ಥೈಕೆಯು ಸಾಧ್ಯವಿದೆ. ಅಥವಾ ವಿಶ್ವವು ಕೇವಲ ಮೂಲ ಅಸ್ತಿತ್ವದ ಪ್ರತೀಕ ಅಥವಾ ಪ್ರತಿಮೆಯಾಗಿದ್ದು ಇದು ಪರಮಾತ್ಮನ ಜೊತೆ ವಿಶಿಷ್ಟ ಭಾವಪೂರ್ಣ ಸಂಬಂಧ ಸ್ಥಾಪನೆಗಾಗಿ ಇದೆ, ಮತ್ತು ಈ ದಾರಿಯಲ್ಲಿಯೇ ನಾವು ಕ್ರಮಶಃ ಅವನನ್ನು ಸಾಕ್ಷಾತ್ಕರಿಸಿಕೊಳ್ಳಬೇಕು ಎಂದೂ ಸಹ ನಾವು ತರ್ಕಿಸಬಹುದು. ಇದಕ್ಕೆ ವಿರುದ್ಧವಾದ ಆಧ್ಯಾತ್ಮಿಕ ಸತ್ಯಾವಿಷ್ಕಾರಕ ಪ್ರತೀತಿ ಕೂಡ ನಮಗಾಗಬಹುದು, ಸರ್ವವಸ್ತು ಏಕೈಕ ಪರಮಾತ್ಮನೇ, ವಿಶ್ವದಲ್ಲಿ, ವಿಶ್ವದ ಅಗಣಿತ ಸಜೀವ ನಿರ್ಜೀವ

ವಸ್ತುಗಳಲ್ಲಿ ಅಕ್ಷರ ರೂಪದಿಂದ ಪರಮಾತ್ಮನೇ ಇದ್ದಾನೆ, ಬಾಹ್ಯ ಹಾಗೂ ಆಂತರ್ಯದಲ್ಲಿ ಏನೆಲ್ಲ ನಾಮರೂಪಗಳಿವೆಯೋ ಅವೆಲ್ಲವೂ ಪರಮಾತ್ಮನೇ. ನಮ್ಮಲ್ಲಿ ಹಾಗೂ ವಿಶ್ವದಲ್ಲಿ ಏನೆಲ್ಲ ವ್ಯಕ್ತವಾಗಿ ಇದೆಯೋ ಅದೆಲ್ಲವೂ ಪರಮಾತ್ಮ ತತ್ತ್ವವೇ ಎಂಬ ಅನುಭವವಾಗಿ ಅಷ್ಟಕ್ಕೇ ನಾವು ನಿಂತೆವೆಂದರೆ ವಿಶ್ವದೇವವಾದಿ ತಾದಾತ್ಮ್ಯ, ಏಕೈಕ ಪರಮಾತ್ಮನೇ ಎಲ್ಲವೂ ಆಗಿದ್ದಾನೆ, ಅವನೊಬ್ಬನೇ ಇದ್ದಾನೆ, ಅವನೇ ಎಲ್ಲವೂ ಆಗಿದ್ದಾನೆ ಎಂಬ ಬುದ್ಧಿಯು (ಅನುಭವವು) ನಮ್ಮನ್ನು ಆವರಿಸಿದರೆ, ಇದೇನೂ ವಿಶ್ವದೇವ ದೃಷ್ಟಿಯು ಪೂರ್ಣ ದೃಷ್ಟಿಯಾಗುವುದಿಲ್ಲ, ಇದು ಏಕಾಂಗಿ ದೃಷ್ಟಿಯಾಗುವುದು. ಈ ವಿಸ್ತಾರವಾದ ವಿಶ್ವವೂ ಸಂಪೂರ್ಣ ಆತ್ಮವಲ್ಲ. ವಿಶ್ವದ ಆಚೆಗೂ ಶಾಶ್ವತ ಆತ್ಮ ತತ್ತ್ವ ಹರಡಿಕೊಂಡಿದೆ; ಈ ವಿಶ್ವಕ್ಕಿಂತಲೂ ವ್ಯಾಪಕ ಹಾಗೂ ಮಹಾನ್ ಆಗಿರುವ ಈ ಶಾಶ್ವತ ತತ್ತ್ವದ ಮೇಲೆ ವಿಶ್ವದ ಅಸ್ತಿತ್ವ ಅವಲಂಬಿತವಾಗಿದೆ. ವಿಶ್ವವು ಪರಮಾತ್ಮನ ಒಂದು ದರ್ಶನ, ಒಂದು ಪ್ರಕಟನೆ ಅಷ್ಟೇ; ಅದರ ವ್ಯಾಪಕತೆಯು ಒಂದು ವಿಶ್ವ ಪ್ರಕಟನೆಗೆ ಸೀಮಿತವಾಗಿಲ್ಲ, ಇದು ಅವನ ಸ್ವರೂಪದ ಒಂದು ವಾಸ್ತವ. ಆದರೆ ಸಣ್ಣ ಗತಿಮಾನ್ ಭಾಗ ಅಷ್ಟೇ. ಅನೇಕ ಪ್ರಕಾರದ ಆಧ್ಯಾತ್ಮಿಕ ಅನುಭವಗಳು ಮೊದಲಿಗೆ ಪರಸ್ಪರ ಭಿನ್ನ ಪರಸ್ಪರ ವಿರೋಧಿ ಎಂದು ತೋರುವುದುಂಟು, ಆದರೆ ಅವೆಲ್ಲವೂ ಪರಸ್ಪರ ಸಂವಾದಿಯಾಗಿವೆ, ಈ ಸಮಗತಿಯು ಯಾವುದೊಂದು ಅನುಭವದ ಮೇಲೆ ಏಕಾಂತಿಕ, ಪಕ್ಷಪಾತಿಕ ಒತ್ತಡ ಹೇರುವ ನಮ್ಮ ಪ್ರವೃತ್ತಿಯನ್ನು ತ್ಯಜಿಸಿದಾಗ ಸ್ಪಷ್ಟವಾಗುವುದು.

ಒಂದು ಸರಳ ಸತ್ಯವನ್ನು ನಾವು ಗಟ್ಟಿಯಾಗಿ ಹಿಡಿದುಕೊಂಡರೆ ಮೇಲೆ ಹೇಳಿದ ಆಧ್ಯಾತ್ಮಿಕ ಅನುಭವದ ಅನ್ಯೋನ್ಯ ಸಂಬಂಧಿತ್ವವು ನಮಗೆ ತಿಳಿಯುವುದು. ಸತ್ಯವೇನೆಂದರೆ, ಈಶ್ವರ, ಪರಮಾತ್ಮನ ಸದ್ವಸ್ತುವು ವಿಶ್ವಕ್ಕಿಂತ ಹಿರಿದಾದದ್ದು, ಬೃಹತ್ತಾದದ್ದು, ಅದೇ ಕಾಲಕ್ಕೆ ವಿಶ್ವದಲ್ಲಿನ ಎಲ್ಲ ವಸ್ತುಗಳು ಓರ್ವನೇ ಈಶ್ವರನಲ್ಲಿವೆ, ಈಶ್ವರನ ಹೊರತಾಗಿ ಯಾವ ಪ್ರಕಟ ರೂಪವೂ ಇಲ್ಲ, ಈ ವಸ್ತುಗಳಲ್ಲಿ ಈಶ್ವರನ ಹೊರತಾಗಿ ಯಾವುದಾದರೊಂದು ಗುಣ ವ್ಯಕ್ತವಾಗಿಯೇ ಇರುತ್ತದೆ. ಅದರ ಸಂಪೂರ್ಣ ಸ್ವರೂಪವನ್ನು ಪೂರ್ಣತೆಯೂ ಯಾವುದೂ ಅಭಿವ್ಯಕ್ತಿಗೊಳಿಸ–ಲಾರದು, ಆದರೆ ಯಾವುದೆ ವಸ್ತುವೂ ಈಶ್ವರನಿಂದ ಭಿನ್ನ, ಅಸತ್ಯ ಎಂದು ಹೇಳಲಾಗದು. ಈಶ್ವರನ ಗುಣ ಅಲ್ಲಿ ಇಲ್ಲಿ ಅದರಲ್ಲಿ ಇದರಲ್ಲಿ ಹೆಚ್ಚು ಕಡಿಮೆ

ಪ್ರಮಾಣದಿಂದ ಇರಬಹುದು ಎಂಬ ಕಲ್ಪನೆ ಅಥವಾ ಅನುಭವ ಕೂಡ ಅಪೂರ್ಣ – ಈಶ್ವರನು ಮೂಲ ಸತ್ಯ ಸದ್ವಸ್ತುವಾಗಿದ್ದಾನೆ,– ಎಲ್ಲ ವಸ್ತು, ಸದ್ವಸ್ತುವಿನ ನ್ಯೂನಾಧಿಕ ಪ್ರಮಾಣ ದರ್ಶನ ಕೂಡ ಆ ಮೂಲ ಏಕೈಕ ಸತ್ಯ, ಸದ್ವಸ್ತುವಿನ ಅಭಿವ್ಯಕ್ತಿಯೇ ಆಗಿದೆ. ಮನಸ್ಸಿನ ದೃಷ್ಟಿಯಿಂದ ಈ ಸತ್ಯ ವಸ್ತುವು ಮೂಲ ಸದ್ವಸ್ತುವಿನ ತುಲನೆಯಿಂದಾಗಿ ಅಸತ್ಯವೆಂದು ತೋರಬಹುದು. ಶಂಕರ ಮಾಯಾವಾದದಲ್ಲಿನ "ಮಾಯಾ ಸಮರ್ಥಕ ತತ್ತ್ವವನ್ನು" ಬಿಟ್ಟು ಕೇವಲ ಆಧ್ಯಾತ್ಮಿಕ ಅನುಭವವನ್ನಷ್ಟೇ ನೋಡಿದರೆ, ವಿಶ್ವದಲ್ಲಿನ ವಸ್ತುವು ಮನಸ್ಸಿಗೆ ತೋರುವ 'ಸಾಪೇಕ್ಷ ಅಸತ್ಯ'ವನ್ನೇ ಅಧಿಕವಾಗಿ ಪ್ರಸ್ತಾಪಿಸಿರುವುದು ಕಂಡು ಬರುತ್ತದೆ. ಆದರೆ ಮನಸ್ಸಿನ ಪರಿಧಿಯನ್ನು ದಾಟಿ ಹೋದರೆ ಈ ವಿರೋಧಾಭಾಸ ಮಾಡುಲಾಗುವುದು. ಭೇದ ಅಥವಾ ವಿರೋಧ ಮೂಲದಲ್ಲಿ ಇಲ್ಲವೇ ಇಲ್ಲ. ಇದರ ಹಿಂದೆ ಬೇರೆ ಬೇರೆ ಅನೇಕ ಆಯಾಮದ ಅನುಭವಗಳಿರುತ್ತವೆ, ಧರ್ಮ ಸಂಪ್ರದಾಯ, ದರ್ಶನ ಸಂಪ್ರದಾಯ, ಯೋಗ ಸಂಪ್ರದಾಯಗಳ ಪರಸ್ಪರ ಭಿನ್ನವೆಂದು ತೋರುವುದು ನಿಜ, ಅವುಗಳ ಹಿಂದೆ ಆಯಾ ಸಂಪ್ರದಾಯ ಸಂಸ್ಥಾಪಕರ ಭಿನ್ನ ಭಿನ್ನ ಅನುಭವ ಇರುತ್ತದೆ. ಅನುಭವದ ಪಾತಳಿಯನ್ನು ಎತ್ತರಿಸಿದರೆ ಈ ಅನುಭವ ರೂಪಾಂತರ ಹೊಂದುತ್ತದೆ, ಅವುಗಳ ಭಿನ್ನ ಮಾನಸಿಕ ಅನುಬಂಧ ದೂರವಾಗುತ್ತದೆ. ಅವುಗಳಲ್ಲಿ ಸಂವಾದಿತ್ವ ಬರುತ್ತದೆ. ಉಚ್ಚತಮ ಪಾತಳಿಯನ್ನು ಅತಿಮಾನಸಿಕ ಅಂತದವರೆಗೆ ಕೊಂಡೊಯ್ದರೆ ಅವುಗಳ ತೀವ್ರತೆ ದೃಢತೆಗಳು ಸಮಾನವಾಗಿ ಎಲ್ಲವೂ ಏಕರೂಪತೆಗೆ ತಲುಪುತ್ತವೆ.

(ಸಶೇಷ...)

## ಶ್ರೀ ಅರವಿಂದರ
## 'ಉರ್ವಶಿ'

**– ಅನು: ಶ್ರೀ ಕಿಶೋರಕುಮಾರ ಕಾಸಾರ (ಸಮಷ್ಟಿ), ಕಲಬುರ್ಗಿ**

**9**

### ಅಧ್ಯಾಯ 3

ಮೂಡುಮುಳುಗಿರದಾ ಮಹಾಕಾರಣಮಯದಿ ಮೆರೆವ ಮಹಾಜ್ಯೋತಿಯದು
ಮಣ್ಣಿನಾಸರೆಗೆಂದು
ನೆನೆದು ಸೋಪಾನಸರಣಿಯಿಳಿದು ನಿಸ್ಸಂಗರಂಗದೊಳು ಬಂದು
ನರನಾರಿಯರೊಲು ನಾಟ್ಯವಿಡುವೊಂತೆ,
ವಿಶ್ವಂಭರವೆಂಬ ವಿರಾಟಪುರುಷನ ವಿಲಾಸಿಮಂಟಪದಿ ವಿಜೃಂಭಿಸುತಿಹ
ವಿದ್ಯುತ್–ವೃಕ್ಷಗಳವು ವಿಕ್ಷಿಪ್ತಗೊಂಡು
ಉಲ್ಕಾಪಾತದೊಳು ಉದುರಿದರೂ, ಉಧ್ವಸ್ಥಗೊಳದೆ ಉದಧಿಗಿಳಿದು
ಉತ್ಕ್ರಾಂತಕದು ಉಪಾಧಿಗೊಳುವಂತೆ,
ಜೀವನದೇವತೆಗಳ ಸ್ವರ್ಗದಿಂದಿಳಿದ ಸೌದಾಮಿನಿಯವಳು ಕಾರ್ಮಣನ
ಕೈಯೊಳಿಹ ಕನಕಾಂಬರವಾಗಿಹಳು.
ಸೂರ್ಯನಿಗಿಹ ಸರಣ್ಯೂವಿನಂತೆ, ಚಂದ್ರನೊಳಿಹ ಚಂದ್ರಿಕೆಯಂತೆ,
ದ್ಯೌಲೋಕಕೊಂದು ಧಾರುಣಿಯಂತೆ
ಪುರೂರವನವ ಪವಿತ್ರವಿಹ ಪ್ರೇಮಯಜ್ಞಕೆ ಪೂರ್ಣಾಹುತಿಯ ಪೂರೈಸಿ
ಪಡೆದಿರುವನಾ ಪುಣ್ಯವತಿಯ.
ಮೊದಲೊಂದು ಮಳೆಯಲಿ ಮಂಜುಬೆಟ್ಟದಾ ಮೇಲೆ, ಮುಗಿಲುಕೂಟದಾ
ಮಧ್ಯೆ ಮಂದಾಕಿನಿಯೊಡನೆ ಮುನ್ನಡೆದಿಹನು.
ಶೈಲಾಗ್ರದಾ ಶಾಂತನಿತಾಂತವನೇ ಶಯ್ಯಾಗೃಹವನಾಗಿಸಿಕೊಂಡಿಹ
ಶೀತಲಶೃಂಗವನೇರಿ ಶೋಭಿಸಿಹನು.
ಸುತ್ತಗಿರಿನೆತ್ತಿಗಳಿಂದ ಮುತ್ತಿ ಮಧ್ಯದಲಿಹ ಮಂದಕಮರಿಯಾಶ್ರಯದಲಿ
ಮನದನ್ನೆಯನು ಮೋಹಿಸಿಹನು.

ಹಿಮವ ಹತ್ತಿಳಿಯಲೆಂಬ ಹತ್ತಾಸೆಯ ಒತ್ತಾಸೆಗೆ ಒಲಿದು ಒಲ್ಲೆನೆನದೆ ಒಂಟೊಂಟಿ
ವಾರುಣಗಳ ಕುಂಟುತ್ತ ಕ್ರಮಿಸಿಹನು.
ಕಣಿವೆಯಿಂದಿಡಿದು ಕಂದರದೊರೆಗಿನ ಕಣ್ಣೋಟಕ್ರಮದಿ ಕ್ರಮಿಸಿ ಕಾಂತೆಯೊಡನೆ
ಕಾಂತಾರಪಥಕೆ ಕಾಲಿಟ್ಟಿಹನು.
ಮನದ ಮೌನದೊಳಗೆ ಮುಳುಗಿಹೋದಂತಿರುವಾ ಮೂಕಪ್ರಪಾತಗಳ
ಮಲೆಯೇರಿ ಮುಗಿಲಿಳಿದಿಹನು.
ಜಲದೇವತೆಗಳ ಜಾತ್ರೆಗಾಗೆಂದು ಜರಿದು ಜತನದಿಂದ ಜೀರಂಗಿ ಜಲಪಾತದೊಳು
ಜಿಗಿದು ಜೋಕಾಲಿಯಾಡುತಿಹ
ಹಿಮದ ಹತ್ತುನದಿಗಳ ಹಲಮೂಲಗಳೆಡೆ ಮುನ್ನೂಕಿ ಮಲೆತಂತುಗಳು
ಮೀಟಿಹನು ಮಳೆಕಂತುಗಳ ಕೋಟಿಯನು.
ಮಲೆಯಿಳಿದು ಮಿಡಿವ ಮಂಜರಿಗಳವು ಮಂಜುಲಗಾನವನಾಡಿ ಮೌನವ ಮರೆಸಿ
ಮುತ್ತಿನೆರಕವನೇ ಮೆರೆಸಿ
ಸತ್ತು ಸುಡುಗಾಡಾದ ಸ್ಥಲಮೂಲಗಳಿಗೆಲ್ಲ ಸ್ತನಪಾನವಗೈಸಿ ಸ್ಥವಿರಸಾಲೆಗಳನೆಲ್ಲ
ನವಿರನಾಲೆಗಳನಾಗಿ ನಲಿಸಿತ್ತು.
ಆ ನೂರು ನದಿಮೂಲಗಳ ನೋಡುವಾಸೆಯಲಿ ನೀರನಾರಿಯೊಡನೆ
ನೀರದಾರಿಯೊಳು ನಡೆದು ನಿತ್ರಾಣನಿಹನು.
ಮನೆಯ ಮೇಲೊಂದು ಮನೆಯ ಮಾಡಿ ಮುಗಿಲ ಮುಟ್ಟುವ ಮನವಿರುವ
ಮಾನವನೊಲಂತೆ
ತುಂಗದ ತೋಳಿನೊಳುತ್ತುಂಗವನೇ ತೆರೆದು ತಾರಾಲೋಕದಡಿ
ತೂಗುದೊಟ್ಟಿಲೊಂದನು ತೂಗಿದಾ
ಪರ್ವತರಾಜರುಗಳ ಪಾದದಡಿಯಿಂ ಪವಣಿಸಿದ ಪ್ರಣವಪಾವನೆಯರು
ಪುಣ್ಯಾಬ್ಧಿಗಿಳಿಯಲೆಂ ಪಯಣಿಸಿರಲು
ಸಾವಿರಡಿಯಿಂ ಸರಿದು ಸಾವಿನಬ್ಬಿಯೊಲು ಸುರಿದು ಸುತ್ತೇಳು ಸರ್ಪದೊಲು
ಸುಳಿಯುತಿರುವಾ ಸ್ರವಂತಿಯರ
ಸನಿಹದಲಿ ಸುಳಿದು ಸುಂದರಾಂಗಿಯೊಡನೆ ಸುಖಿಸಿಹನು. ಸುರತದಲಿ
ಸುರಲೋಕವನೇ ಸೂರೆಗೈದಿಹನು.

ಬಿತ್ತರವಡೆದಾ ಎತ್ತರದ ಉತ್ತರಗಿರಿಗಳವು ಮತ್ತಮಾತಂಗರೊಲು ಮುಗಿಲಿನೆಡೆಗೆತ್ತಿ
ಮೂಸುತಿರಲು,
ಗಾಳಿದೇರನೇರಿ ಗಮಿಸುವಾ ಗರುತ್ಮವೂ ಗಹನದೊಳು ಗೋಚರರಿಹಾ
ಗಂಡುಹೆಣ್ಣುಗಳ ಗುರುತಿಸದು.
ಹಗೆತೊಟ್ಟು ಹಾರುವ ಹದ್ದುಗಳೂ ಹಿಮಾಲಯದಾ ಹೊನ್ನಶಿಖರವನು
ಹುಡುಕಲಾರದೆ ಹೈರಾಣವಿಹವು.
ಲಕ್ಷಪಕ್ಷಗಳೊಡನೆ ಲಂಘಿಸಿ ಲೋಕಾಂತಿಕವ ಲಕ್ಷಿಸಲೆನುವ ಹಕ್ಕಿಪಕ್ಕಿಗಳೆಲ್ಲ
ಲೆಕ್ಕಕಿಲ್ಲದೆ ಲಯವಾಗಿ ಲುಪ್ತವಿಹವು.
ಜಲಜೆಯರು ಜೀವನದಿಯಾಗಿ ಜರಿದು ಜಂಗಮಜಗತ್ತಿನೆಡೆಗಿಳಿದಿಹರು,
ಜಲಪಾತವನೇ ಜನಾಂತಿಕದೆಡೆಗಿಳಿಸಿಹರು.
ಕಲ್ಲುಕಲ್ಲುಗಳ ಕೋಟಿಕೊರಕಲುಗಳ ಕಳ್ಳದಾರಿಯೊಳು ಕ್ರಮಿಸಿ
ಕಾಡುಮೇಡುಗಳಿಗೆಲ್ಲ ಕಾಂತಾರವಾರಿಗಳಿಹರು.
ತೋಯತಾಯಂದಿರು ತೋರಿದಾ ತೆಂಕಣದಾರಿಗಿಳಿದ ತನಯನವ ತಾರೆಯೊಡನೆ
ತಿಗಿಂಛವನಿಳಿದು ತೋರಿಹನು.
ಮೇರು–ಮಂದಾರಗಳೆಂಬ ಮುಕ್ಕೋಟಿ ಮಲೆಗಳ ಮಗ್ಗುಲಿನಲಿ
ಮನದನ್ನೆಯೊಡನೆ ಮಹಾರಾತ್ರಿಗಳನೇ ಮರೆತಿಹನು.
ಸರ್ವಸಾಕ್ಷೀಭೂತರವರು ಸಾಲಾಗಿ ನೆರೆದು ನೂರು ನಕ್ಷತ್ರಗಳಾಗಿ ನಲಿದು
ನಿಂತಿರಲು, ನಿಲಿಂಪರಾ ನೇತ್ರದೆದುರು
ನೀರ್ಮಲೆಯೊಡನೆ ನೋವುನಲಿವೆಂಬ ನಂಟನು ಬೆಸೆದು ಭೂ–ಭುವನಗಳ
ಬಾಂಧವ್ಯವನೇ ಬರೆದಿಹನು.
ಶೀತಲಶೃಂಗದಲಿ ಶೋಭನಾವತಿಯೊಡನೆ ಶೃಂಗಾರಧಾರೆಯ ಸೆಲೆಯೊಡೆದು
ಶಂಬರಾಂಬರವನೇ ಶೋಕದೊಳ್ನೂಕಿಹನು;
ಮತ್ತೆ ಮರಳಿ ಮಣ್ಣಿನಾಲಯವ ಮುಟ್ಟಿ ಮಾನಸಳನು ಮಾನವಳಾಗಿಸುವ
ಮಂತ್ರವನಲ್ಲಿ ಮಣಮಣಿಸಿಹನು.
ಮಾನಸಳ ಮೋಹದಲಿ ಮರೆತುಹೋದಾ ಮರ್ತ್ಯಮೌನದ ಮೂಲೆಗಳೆಲ್ಲ ಮರಳಿ
ಮಸ್ತಿಷ್ಕವನೇರಿ ಮೆಟ್ಟಿರಲು

ದ್ವಾದಶಮಾಸಗಳ ದೀರ್ಘ ದಿನರಾತ್ರಿಗಳನು ದೇವಗಿರಿಯೊಳು ದೂಡಿಸಿದ
ದ್ವಿಜರಾಜನವ
ದೇವಕನ್ಯೆಯೊಡನೆ ದಂಡಕಾರಣ್ಯದೆಡೆ ದೌಡಾಯಿಸಿಹನು. ದ್ವಿವತ್ಸರವನಲ್ಲೇ
ದಾರಿನೀರಾಗಿಸಿಹನು.
ಚಂದ್ರಲೋಕದಾ ಚೈತ್ರವನದಲಿ ಚೆಲ್ಲಾಟವಾಡುತಿಹ ಚಾರು–ಚಂದ್ರಾನನೆಯರೇ
ಚರಿಸುತ ಬಂದಿಲ್ಲಿ ಚಿತ್ರಿತರಿರುವೊಂತೆ
ವಿವಸ್ವತನಾ ವಾಹನವೂ ವೀಕ್ಷಿಸಲಾಗದೊಲು ವಜ್ರಸಂಕೋಲೆಯೊಳು ಒಪ್ಪಿತವಾದ
ವನದ ವಾರುಣಮೂಲೆಯೊಳು
ಯಕ್ಷ–ಯಕ್ಷಿಯರೊಲು ವೃಕ್ಷದಾ ವಕ್ಷದ ಮೇಲೆ ಮಲಗಿ ಮೈಮರೆತಿಹರು.
ಪಕ್ಷಗಳನೇ ಅಲಕ್ಷಿಸುತ ಅಂಡಲೆದಿಹರು.
ಕನ್ಯೆ ಬನಶಂಕರಿಯರು ಹಸಿರ ಸೀರೆಯನುಟ್ಟು, ಮೇಲೆ ಮಲೆಯ ತೊಟ್ಟು,
ಹಾಲಹಳ್ಳವನೇ ಹರಿಸಿ ಹೂವೆಬ್ಬಿಸಿರಲು,
ಬೈತಲೆಯಿಂದೇರಿ ಬೆಳಗುತ ಬಂದ ಭಾಸ್ಕರನವ ಸೂರ್ಯ–ಸಾವಿತ್ರಿಗಾಗಿರುವ
ಸಿಂಧೂರವನಿಟ್ಟು ಸರಿದಿಹನು.
ಅರಣ್ಯಾನಿಯರಾ ಅಂಗಳದಲಿ ಅಂಬೆಗಾಲಿಕ್ಕುತಿರುವ ಅಂಬುದಗಳು
ಅಲೆಯುತ ಬಂದಲ್ಲಿ ಬೆಳ್ಗೊಳವ ಭರಿಸಿರಲು
ಬಹುದೂರದಿಂದ ಬಾಯಾರಿ ಬಂದಲ್ಲಿ ಬೀಡುಬಿಟ್ಟ ಬೆಳ್ಳಕ್ಕಿಗಳ ಬಳಗದಿಂದದು
ಬೆಳ್ಗೊಳವೆಂದೇ ಬೀಗುತಿಹುದು.
ಇಂದ್ರನಂದನದ ಪಾಲಕರಾಗಿ ಪರಂಧಾಮವನೇ ಪರಿವೀಕ್ಷಿಸುತಿಹ
ಪೂರ್ಣಪ್ರಕಾಶದಾ ಪುತ್ರದ್ವಯರುಗಳು
ದಸ್ರ–ನಾಸತ್ಯರೆಂದಾಗಿ ದ್ಯೌಲೋಕದ ಧನ್ವಂತರಿಗಳೆನಿಸಿದರೂ,
ಧಾರಾವಲಯದಲ್ಲೊಂದು ದೇವನೆಲೆಯನಿಳಿಸಲೆಂದು
ಧೇನಿಸುತ ಧರ್ಮಲೋಕದಿಂದಿಳಿದಿಲ್ಲಿ ದಂಡಕಾರಣ್ಯವನೇ ದೀಪಿಸಿಹರು.
ಅಶ್ವಮೊಗದಿಂದಲೇ ಅದನೀಕ್ಷಿಸುತಿಹರು.
ಲಕ್ಷಯಕ್ಷರಿಗೆಲ್ಲ ಅಕ್ಷವಾಸರಕೆಂದು ಸುಭಿಕ್ಷವಾಗಿರುವೊಲಿಹ ವೃಕ್ಷರಾಜರುಗಳ
ಸಾಕ್ಷೀಕರಿಸುತವರ ಸಾಮಂತರಾಗಿಸಿಹರು.

ಅಲ್ಲಿಲ್ಲಿ ತೆರೆದಿಟ್ಟ ಬೆಳ್ಳಿಬಟ್ಟಲಿನೊಲು ಒಟ್ಟಾಗಿ ಒಂದೆಡೆ ಸೇರಿ ವಾರುಣಸಭೆಯಲಿ
ವಿರಾಜಮಾನರಿರುವೊಂತೆ
ಶೋಭಿಸುವ ಪುಷ್ಕರಾದಿ ಪುಂಡರೀಕಗಳು ತಳದ ತಾವನ್ನು ತೆರೆದು ತೋರುತ
ತನ್ಮಯದಲಿಹವು.
ತಾವರೆಗೊಳದಿ ಕಣ್ಬಿಡುವ ಕೋಟಿ ಕುಮುದಗಳ ಕಾವಲಿಗೆಂದಲ್ಲಿ ಕುಳಿತು
ಕಣ್ಣಿಟ್ಟಿಹರವರು ಬಳ್ಳಿಬಾಂಧವರು.
ಆಮ್ರಪಾಲಿಯ ಆಲಯವಿದೆಂದು ಆಚರಿಸುತ ರೂಢವಿಹುದಲ್ಲಿ ಆಮ್ರಫಲದ
ಆನಂದವನವೊಂದು.
ರುಚಿನೋಡಲೆಂದೊಂದು ರಾಜರಸಿಕರಿರದೆ ರಾಶಿರಾಶಿಯ ರಾಜಫಲವದು
ರಾಹುಗ್ರಸ್ತವಾಗಿ ರೋದಿಸಿತ್ತು.
ಮುಗಿಲಿನೆಡೆಗೆತ್ತಿ ಮೈಚಾಚಿ ಮೆರೆಯುತಿಹ ಭೂರ್ಜವೃಕ್ಷಗಳ ಭುಜದಿಂದಿಳಿದ
ಬಿಳಿಲುಬಾಲಕರವರು
ನೆಲಮುಟ್ಟಿ ಬೇರ್ವಿಟ್ಟು ಮರಿಆಲಗಳೆಂಬ ಮುನ್ನೂರು ಮಕ್ಕಳಾಗಿ ಮೈಮುರಿದು
ಮಣ್ಣಿನಿಂದೆದ್ದು ಮೇಳೈಸಿಹರು.
ತರುಮೂಲದಿಂದಿಡಿದು ತಾರಾಲೋಕದೊರೆಗಿನ ತಾಮಸ–ತಾಪಸರಿಗೆಲ್ಲ
ತವರುನೆಲಮೂಲವಾಗಿಹ ತಾವಿನಲಿ
ಮೃಗ–ವಿಹಗಾದಿ ಮಂಡಲ ಮಹಾತ್ಮರುಗಳೊಡನೆ ಮನೆಮಾಡಿಕೊಂಡಿರುವಾ
ಮನ–ಮಾನವರು
ಈಡನೋದ್ಯಾನದ ಈವ್–ಆದಮರಂತೆ ದ್ಯಾವಾ–ಪೃಥಿವಿಗಳ ಪ್ರಥಮ
ದಂಪತ್ತುಗಳಾಗಿ ಪ್ರತಿಷ್ಠಾಪಿತರಿಹರು.
ಹರಿವ ಹಾವಿನೊಡನೆ ನಸುನಗೆಯ ಹರಿಸಿಹರು, ನೆಗೆವ
ನಾಲ್ಕಾಲುಮೃಗದೊಡನೆ ನಂಟನೆ ನೇಯ್ದಿಹರು,
ಪ್ರಾಣಮಯದಿ ಪಯಣಿಸುವ ಪಕ್ಷಿರಾಜರುಗಳ ಪಾಳಯದಲಿ ಪಳಗಿ
ಪ್ರೇಮಪಾಠವನೇ ಪಠಿಸಿಹರು.

(ಸಶೇಷ)

# ಮುಖಪುಟದ ಕವನಗಳು

**– ಅನು: ಪುಟ್ಟು ಕುಲಕರ್ಣಿ**

**1**

ತಾರ–ಸಪ್ತಕದ ಮೇರು ಮಿಡಿತದಲಿ ನಿನದದಲಿ ಕಂಪಮಾನ
ಘಳಿಗೆ–ಘಳಿಗೆಗಳ ನಾದ–ಧ್ವನಿಗಳಿಂದುಲಿತವಿಹ ದಿವ್ಯ–ತಾನ
ಪ್ರೇರಣೆಯ ಪ್ರವರ ಪ್ರವರದಲಿ ಭಾವದಭಿವ್ಯಕ್ತಿಗಾಗಿ ಯಂತ್ರ
ಆ ವಿಶ್ವಗೀತ ವ್ಯಾಪ್ತದಲಿ ಲಲಿತ ಲಾಲಿತ್ಯ ವಾಣಿ–ಮಂತ್ರ

ಆ ಉಚ್ಚ–ಆತ್ಮದಭಿಲಾಷೆಯಿಂದ ಮೇಳೈಸಿ ತಾಳ–ರಾಗ
ವಿಸ್ಮರಣೆಗೊಂಡ ಸ್ಮೃತಿಗಳನು ಸಾಲು ದರ್ಶನಕೆ ಪ್ರಚುರವೀಗ
ತಂತಾನೆ ತಾನು ತನ್ಮಯದ ಮೂರ್ತಿಯಂತುದಿಸಿ ಲೀಲೆಗಿಳಿದು
ಋತ ಸಹಜವಾದ ಅವತರಣದಲ್ಲಿ ಸಾಕಾರ ಆತ್ಮವಿಂದು

ಈ ತಾರೆ–ಯಂತ್ರ ಸವಿಶೇಷ ತಂತ್ರ ಆ ಪ್ರಕೃತಿ–ಬಲದ ತುಂಬ
ಸುವಿಶಾಲ ವ್ಯಾಪ್ತ ಶಾಶ್ವತದ ಸಲಿಲ ವಿನ್ಯಾಸಗೊಂಡು ಬಿಂಬ.

**(ಶ್ರೀ ಅರವಿಂದರ 'ಸಾವಿತ್ರಿ'; ದಳ 2 ರೇಣು 6 ಪುಟ 195)**

**2**

ನಿಯತಿಗರ್ಭಿತದ–ಹಸ್ತ ತಾನೊಂದು ವೈಶ್ವಿಕದ–ತಂತುಗಳನು
ಸ್ವರಮೇಳಗೊಳಿಸೆ ಸ್ಪರ್ಶಿಸಿತು ಈಗ ಅನುರಣನ ಸೃಷ್ಟಿಗಳನು
ಜೊತೆಗಿದೋ ಬಂಧ–ಶ್ರುತಿಬದ್ಧಗೊಳಿಸಿ ಸಂಚಾರವಿರಿಸಿಕೊಂಡ
ಅನಾಹತದತ್ತ ತಾನೊಳಗುಗೊಂಡು ಚಾಚಿರುವ ತನನ ಛಂದ

ಗುಪ್ತವಾಗಿರುವ ಅಂತರಾಳದಾ ಸಂಗೀತ–ಗೀತ –ಸೂತ್ರ
ಆವರಣಗೊಳಿಸಿ ಅದನೀಗ ತಾನು ಈಗಿದೋ ಲಯದ–ಮಾತ್ರ
ಧರಾತಲದೊಳಗೆ ಸ್ವರಮೇಳವಾಗಿ ಪದತಾಲಬಂಧದೊಳಗೆ
ಆಲಿಸದೆ ಉಳಿದ ಅವುಗಳಿಗೆ ಮಾರ್ಗ–ದರ್ಶನದ ಸೂತ್ರವಾಗೆ

**(ಶ್ರೀ ಅರವಿಂದರ 'ಸಾವಿತ್ರಿ'; ದಳ 2 ರೇಣು 6 ಪುಟ 194)**

**3**

ದಿವ್ಯಾನುಭೂತಿ ಅಸ್ತಿತ್ವವಿಲ್ಲಿ ತಾನರಿತು ಸ್ಪಂದಗೊಳಲು
ಜೊತೆಗಿದೋ ಬ್ರಹ್ಮ–ಬ್ರಹ್ಮಾಂಡ ಯೋಗ–ಸಂಯೋಗ ಆತ್ಮಕಿರಲು
ಅವನ ಸತ್ತೆಯದು ಶುಭ್ರಾತಿಶುಭ್ರ ನಿರ್ಮಾಯ ಹಂತದೊಳಗೆ
ತಾನಿಳಿದು ಬಂದು ತಾನುಳಿದುಕೊಂಡು ಸುಸ್ಪಷ್ಟ ಭಾವದೊಳಗೆ
ಪರಿಶುದ್ಧ ಪ್ರಭೆಯ ಪಾರಲೌಕಿಕದ ಚಿಜ್ಜ್ಯೋತಿ ಸರಗಳಲ್ಲಿ
ಅಭಿಷೇಕಗೊಂಡು ಚಿನ್ಮಯದ ಕಾಂತಿ ತನ್ಮಯದಿ ನೆಲೆಸಿತಿಲ್ಲಿ
ಪ್ರಜ್ಞಾನ–ಪೂರ್ಣ – ಅಸ್ತಿತ್ವ ಕ್ಷೇತ್ರಗಳ ಸುವಿಶಾಲದೊಳಗೆ ಖಚಿತ
ನಿತ್ಯ ಸಂಚಾರ ಸಂಚಲನದಲ್ಲಿ ಅದು ಸಹಜ ಕಾರ್ಯ ನಿರತ
ಶಾಶ್ವತದ ಸೂರ್ಯ–ತೇಜತ್ವ–ಕಿರಣಗಳ ದಿವ್ಯ ಸ್ಪರ್ಶದಿಂದ
ಬೆಳಗಿಸಿದ ಜ್ಯೋತಿ–ಕಾಂತಿಯಲಿ ದಿವದಂತರಾಳದಿಂದ

**(ಶ್ರೀ ಅರವಿಂದರ 'ಸಾವಿತ್ರಿ'; ದಳ 1 ರೇಣು 3 ಪುಟ 44)**

**4**

ಮಹತ್–ಮೌಲ್ಯದಾ ವಿಷ್ಕಂಭವೊಂದು ಅಲೆಯಾಗಿ ನಿನದಗೊಂಡು
ಒಳಗಿವಿಯಲೀಗ ತುಂತುಂಬಿಕೊಂಡು ಶ್ರುತಿಯಾಗಿ ವರ್ಣಗೊಂಡು
ಮತ್ತಿದೋ ಹೃದಯ ಸ್ಪಂದಿಸುವದದಕೆ ಜೊತೆಜೊತೆಗೆ ಆಲಿಸುತ್ತ
ಪೂರ್ಣಸಮ್ಮತಿಯನೀಯಲಿದೆ ಆತ್ಮ ಜೊತೆಗಿಲ್ಲಿ ಮಿಲನದತ್ತ
ಶೀಘ್ರಲುಪ್ತತೆಯ ಗೀತಸ್ರೋತವಿದು ಪುನರಾವರ್ತವರ್ತದಲ್ಲಿ
ವ್ಯರ್ಥಗೊಳುತಿಹುದು ಪರಿವರ್ತನೀಯ ಪರಿತಾಪ ತಾಪದಲ್ಲಿ
ಕಾಲದಾ ನಿತ್ಯ ಶಾಶ್ವತದ ಮೇಲೆ ಅಲ್ಪಕಾಲೀನದಲೆಯ
ತರಲು ತಾನದುವು ತರಲ ಯತ್ನದಲಿ ತನ್ನಲ್ಲಿ ತಾನು ಲೀಯ

**(ಶ್ರೀ ಅರವಿಂದರ 'ಸಾವಿತ್ರಿ'; ದಳ 2 ರೇಣು 6 ಪುಟ 195)**

# ವಾರ್ತಾಪತ್ರ

## ಶ್ರೀ ಅರವಿಂದ ಸಂಕೀರ್ಣ

ಜೆ.ಪಿ. ನಗರ 1ನೇ ಹಂತ, ಬೆಂಗಳೂರು.

ದಿನಾಂಕ 01–01–2026 ಗುರುವಾರ ಮಧ್ಯಾಹ್ನ 4.00 ರಿಂದ 5.00 ಗಂಟೆವರೆಗೆ ಮೀರಾಂಬಿಕಾ ಶಾಲೆ ಸಂಸ್ಥಾಪಕರ ದಿನಾಚರಣೆಯನ್ನು ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಶಾಲೆಯ ಅಧ್ಯಕ್ಷರಾದ ಡಾ॥ ಅಜಿತ್ ಸಬ್ನೀಸ್, ಪ್ರಾಂಶುಪಾಲರು, ಶಿಕ್ಷಕರು, ಬೋಧಕೇತರ ಸಿಬ್ಬಂದಿ ವರ್ಗದವರು ಮತ್ತು ಶ್ರೀ ಅರವಿಂದ ಸಂಕೀರ್ಣ ಟ್ರಸ್ಟ್ ಸದಸ್ಯರು ಹಾಜರಿದ್ದರು. ಶಿಕ್ಷಕರು ಸಂಸ್ಥಾಪಕರ ದಿನದ ಮಹತ್ವವನ್ನು ಕುರಿತು ಮಾತನಾಡಿದರು ಹಾಗೂ ಶಾಲೆಯ ಸಂಸ್ಥಾಪನೆಗೆ ದುಡಿದ ಸ್ಥಾಪಕರು ಮತ್ತು ಸಹ ಸಂಸ್ಥಾಪಕರನ್ನು ಸ್ಮರಿಸಿದರು. ಕಾರ್ಯಕ್ರಮವು ಒಂದು ನಿಮಿಷದ ಧ್ಯಾನದೊಂದಿಗೆ ಮುಕ್ತಾಯವಾಯಿತು.

ದಿನಾಂಕ 26–01–2026 ಸೋಮವಾರ ಮೀರಾಂಬಿಕಾ ಸ್ಕೂಲ್ ಫಾರ್ ನ್ಯೂ ಏಜ್ ಶಾಲೆಯಲ್ಲಿ ಗಣರಾಜ್ಯೋತ್ಸವವನ್ನು ಆಚರಿಸಲಾಯಿತು. ಶ್ರೀಮತಿ ಶಾರದಾಂಬ ಸಿ.ಆರ್. ಪ್ರಾಂಶುಪಾಲರು ಧ್ವಜಾರೋಹಣ ನೆರವೇರಿಸಿದ ನಂತರ ಗಣರಾಜ್ಯೋತ್ಸವ ದಿನದ ಮಹತ್ವವನ್ನು ಕುರಿತು ಮಾತನಾಡಿದರು. ಶಾಲಾ ವಿದ್ಯಾರ್ಥಿ ವೃಂದ ದೇಶಭಕ್ತಿ ಗೀತೆ ಮತ್ತು ಗಣರಾಜ್ಯದ ಮಹತ್ವ ಕುರಿತು ಭಾಷಣ ಮಾಡಿದರು. ಶಿಕ್ಷಕ ವೃಂದ ಮತ್ತು ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ವಂದೇಮಾತರಂ ಗೀತೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.



ಫೋಟೊ: ಇಮೇಜಿಂಗ್ ಸಾವಿತ್ರಿ

**RNI No. 22511/1971**
No. of Pages **60 + 4 (Cov. Page)**
KAR Reg No.: RNP/KA/BGS/368/2024-2026
Licensed to post without prepayment License No.PMG BG/WPP-409/2024-2026
Kannada Monthly Magazine
Date of Publication on 7th of Every Month
Permitted to Post 10th of Every Month. Reg. Valid till: 31-12-2026
Licensed to Post at BG PSO, Mysuru Road, Bengaluru - 560 026



ಫೋಟೊ: ಇಮೇಜಿಂಗ್ ಸಾವಿತ್ರಿ

Ed. Sri Puttu Parashuram Kulkarni, Pub: Dr. Ajit Sabnis
Ptd. by M/s. Seshaasai e-forms Pvt. Ltd.,
on behalf of Sri Aurobindo Complex Trust, ‘Sri Aurobindo Marg’,
J.P. Nagar I Phase, Bengaluru - 560 078. Phone: 080 - 22449882.